ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 7 ಸಂಚಿಕೆ 07
ಫೆಬ್ರವರಿ 17, 2013

ಪುಟ 16 ರೂ. 10/-

Blog : janashakthi.wordpress.com e-mail : js_weekly@yahoo.com





ಇಂದಿನ ಸಾಂಸ್ಕೃತಿಕ ಸಂದರ್ಭ ಮತ್ತು ಸವಾಲುಗಳು



ಮತ್ತೊಮ್ಮೆ ಅಸಹಿಷ್ಣುತೆಯ ಅಲೆ

ಬಹುಮತ ಹೋದರೂ ಬಜೆಟ್ ಮಂಡಿಸುವ ಬಿಜೆಪಿ ಸರ್ಕಾರದ ದಿವಾಳಿಕೋರತನ

ಜಾಗತಿಕ ಇತಿಹಾಸದಲ್ಲಿ ದಾಖಲಾಗಲಿದೆ ಫೆ. 20-21 ಮಹಾಮುಷ್ಕರ



ದಲಿತರೇ ಏಕೆ ಕಸ ಎತ್ತಬೇಕು?

ಫೆಬ್ರವರಿ 14 ಪ್ರೇಮಿಗಳ ದಿನಾಚರಣೆ



ನಿರ್ಭಯವಾಗಿ ಪ್ರೀತಿಸಿ ಹೊಣೆಗಾರಿಕೆಯಿಂದ ವರ್ತಿಸಿ

ಕೊಕ್ಕಂಪಟ್ಟಿಯಲ್ಲಿ ಅಸ್ಪೃಶ್ಯತೆಗೆ ಪೂರ್ಣ ವಿರಾಮ

ಜನಶಕ್ತಿ
ಕನ್ನಡ ವಾರಪತ್ರಿಕೆ

2013 ಫೆಬ್ರವರಿ 20,21 ರ ಮಹಾ ಮುಷ್ಕರದ ಯಶಸ್ವಿಗೆ ಮನವಿ ಅಭೂತಪೂರ್ವ ಐಕ್ಯತೆಗೆ ಸಾಕ್ಷಿ

'ವಿಶ್ವದ ಕಾರ್ಮಿಕ ಚಳುವಳಿ ಇತಿಹಾಸದಲ್ಲಿಯೇ ದಾಖಲಾಗಲಿದೆ ಈ.ಮಹಾ ಮುಷ್ಕರ'

ವಿಶೇಷ ಸಂದರ್ಶನದಲ್ಲಿ ಏ.ಕೆ.ಪದ್ಮನಾಭನ್

ಸಂದರ್ಶಕರು: **ಎಸ್.ವೈ,ಗುರುಶಾಂತ್**


ದೇಶದ ಬಹುತೇಕ ಎಲ್ಲಾ ಕಾರ್ಮಿಕ ಸಂಘಟನೆಗಳು ಒಗ್ಗೂಡಿ ಕರೆ ನೀಡಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ದಿನಗಳು ಸಮೀಪಿಸುತ್ತಿವೆ. ಎಲ್ಲೆಡೆಗಳಲ್ಲಿ ಅದರ ಯಶಸ್ಸಿಗಾಗಿ ಸಿದ್ಧತೆಗಳು ಭರದಿಂದ ಸಾಗಿವೆ. ಸಿ.ಐ.ಟಿ.ಯು ವಿನ ಅಖಿಲ ಬಾರತ ಅದ್ಯಕ್ಷರಾದ ಏ.ಕೆ.ಪದ್ಮನಾಭನ್ ರವರು 'ಸಿಟು'ವಿನ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಲು ಶಿರಸಿಗೆ ಬಂದಿದ್ದರು.ಆ ಸಂದರ್ಭದಲ್ಲಿ ಸಂದರ್ಶನ ನೀಡಲು ಕೇಳಿದಾಗ ಕಲಾಪಗಳ ನಡುವೆಯೂ ಸಂತೋಷದಿಂದ ಒಪ್ಪಿದರು. ಆದರೆ ಕಲಾಪಗಳಿಂದ ಹೆಚ್ಚು ಹೊತ್ತುಹೊರ ಉಳಿಯುದಂತಿರಲು ಭಯಸಿದರು. ದೇಶದಾದ್ಯಂತ ನಡೆದಿರುವ ಎಲ್ಲಾ ಸಭೆಗಳು, ಸಮ್ಮೇಳನಗಳಲ್ಲಿ ಈ ಕರೆಯ ಜಾರಿಗೆ ಒತ್ತು ,ಸ್ಪೂರ್ತಿ ನೀಡುತ್ತಾ ಓಡಾಡುತ್ತಿರುವ 'ಏಕೆಪಿ' ನಮ್ಮ ನಡುವೆಯೇ ಇರುವಾಗ ಅವರದ್ದೇ ಮಾತುಗಳಲ್ಲಿ ಮುಷ್ಕರದ ಬಗ್ಗೆ ಕೇಳುವ ಇಂಗಿತವನ್ನು ದುಡಿವ ಜನರ ಪ್ರಾಣ ಮಿತ್ರ ಜನಶಕ್ತಿ ವ್ಯಕ್ತಪಡಿಸಿತು. ಈ ಬಗ್ಗೆ ಹಲವಾರು ಲೇಖನ ಬರೆದಾಗಿದೆಯಲ್ಲಾ ಎಂದು ನಸು ನಗುತ್ತಲೇ ಅವರು ಮಾತಿಗಿಳಿದರು.

ಜನಶಕ್ತಿ: ಮತ್ತೊಂದು ಮಹಾ ಮುಷ್ಕರಕ್ಕೆ ಕರೆ ನೀಡಿದ್ದೀರಿ, ಸಿದ್ಧತೆಗಳು ನಡೆದಿವೆ. ಹಿಂದೆಲ್ಲಾ ಇಂತಹ ಅಖಿಲ ಭಾರತ ಮುಷ್ಕರಗಳು ನಡೆದಿವೆ. ಈ ಮುಷ್ಕರಕ್ಕೆ ವಿಶೇಷವಾದ ಮಹತ್ವವೇನಾದರೂ ಇದೆಯಾ?

ಎ.ಕೆ.ಪದ್ಮನಾಭನ್: ಖಂಡಿತಾ ಇದೆ. ಮೊದಲನೆಯದಾಗಿ ನವ ಉದಾರೀಕರಣದ ನೀತಿಗಳ ವಿರುದ್ಧದ ಕಾರ್ಮಿಕ ಸಂಘಟನೆಗಳ ಹೋರಾಟವು ಒಂದು ಮಹತ್ವದ ಘಟ್ಟವನ್ನು ತಲುಪಿದೆ. ಹಿಂದೆಂದೂ ಕಾಣದಿರುವಷ್ಟು ಐಕ್ಯತೆ ಈ ಬಾರಿ ಕಾರ್ಮಿಕ ಸಂಘಟನೆಗಳಲ್ಲಿ ಉಂಟಾಗಿದೆ. ಇದು ರಾತ್ರೋ ರಾತ್ರಿ ಸಂಭವಿಸಿದ್ದೇನಲ್ಲ. 1991ರಲ್ಲಿ ನಡೆದ ಸಾರ್ವತ್ರಿಕ ಮುಷ್ಕರದಲ್ಲಿ ಕೆಲವೇ ಕೇಂದ್ರ ಕಾರ್ಮಿಕ ಸಂಘಟನೆಗಳು ಭಾಗಿಯಾದ್ದವು. ಅಲ್ಲಿಂದ 2009ರ ವರೆಗೆ ಹಲವಾರು ಹೊಸ ಸಂಘಟನೆಗಳು, ಹೊಸ ವಿಭಾಗಗಳು ಸೇರ್ಪಡೆಯಾಗುತ್ತಾ ಬಂದಿವೆ: ಕೆಲವು ಸಂಘಟನೆಗಳು ಮುಷ್ಕರದ ಕರೆಯ ವೇದಿಕೆಯಲ್ಲಿ ಇಲ್ಲದಿದ್ದರೂ ಈ ಸಂಘಟನೆಗಳಿಗೆ ಸೇರಿದ ಕಾರ್ಮಿಕರು ಬಾಗಿಯಾಗಿದ್ದಾರೆ. ಈಗಲೂ ಅವರವರ ತಾತ್ವಿಕ, ರಾಜಕೀಯ ವಿಭಿನ್ನ ನಿಲುವುಗಳಿದ್ದರೂ ಇಲ್ಲಿ ವಿಷಯಾಧಾರಿತವಾದ ಒಗ್ಗಟ್ಟು ಮೂಡಿದೆ. ಒಂದೇ ವೇದಿಕೆಯಲ್ಲಿ ಸೇರಿದ್ದೇವೆ. ಹೀಗಾಗಿ ಮುಷ್ಕರದ ಯಶಸ್ಸಿಗೆ ಉಜ್ವಲವಾದ ಸಾಧ್ಯತೆಗಳೂ ತೆರೆದಿವೆ. ಇದರಲ್ಲಿ ಸಾರ್ವಜನಿಕ ಉದ್ದಿಮೆಗಳಿಂದ ಹಿಡಿದು ಸಹಕಾರಿ ವಲಯದವರೆಗೆ,ಅಸಂಘಟಿತರೂ ಸೇರಿ ಎಲ್ಲಾ ರಂಗಗಳ, ಎಲ್ಲಾ ವಿಭಾಗಗಳ ಕಾರ್ಮಿಕರು , ಅವರ ಸಂಘಟನೆಗಳು ಪೂರ್ಣವಾಗಿ ತೊಡಗುತ್ತಿರುವುದು ನಿಸ್ಸಂದೇಹವಾಗಿ ಮಹತ್ವದ ಬೆಳವಣಿಗೆ.ಎರಡನೆಯದಾಗಿ, ಈ ಮುಷ್ಕರ ದೇಶದ ಮಾತ್ರವಲ್ಲ, ವಿಶ್ವದ ಕಾರ್ಮಿಕ ವರ್ಗದ ಹೋರಾಟದ ಇತಿಹಾಸದಲ್ಲಿಯೇ ಒಂದು ದಾಖಲೆಯಾಗಲಿದೆ. .

ಅದು ಹೇಗೆ?

ಅದು ಹೇಗೆಂದರೆ ಇಲ್ಲಿಯವರೆಗೂ ನಡೆದ ಮುಷ್ಕರಗಳು ಒಂದು ದಿನದ ಮಟ್ಟಿಗೆ ಸೀಮಿತವಾಗಿದ್ದವು. ಆದರೆ ಈ ಬಾರಿ 48 ಗಂಟೆಗಳ (ಎರಡು ದಿನಗಳು)ಮುಷ್ಕರ ನಡೆಯಲಿದೆ. ಜಗತ್ತಿನಾದ್ಯಂತ ಬಹು ದೊಡ್ಡ ಹೋರಾಟಗಳು ನಡೆದಿವೆ. ಭಾರತದಲ್ಲಿ ಈಗಲೂ



ಎಸ್.ವೈ.ಗುರುಶಾಂತ್ ಎ.ಕೆ.ಪಿ.ಯವರನ್ನು ಸಂದರ್ಶಿಸುತ್ತ...

ತಮ್ಮ ಬೇಡಿಕೆಗಳಿಗಾಗಿ ನೂರು ದಿನಗಳಿಗೆ ಮೀರಿದ ಹೋರಾಟ, ಬೆಂಗಳೂರಿನಲ್ಲಿ ಮೂರು ತಿಂಗಳಿಗೂ ಅಧಿಕವಾಗಿ ನಡೆದಿರುವುದನ್ನು ಕಾಣುತ್ತೇವೆ. ಆದರೆ 48 ಗಂಟೆಗಳ ಮುಷ್ಕರ ಮತ್ತು ವಿಶೇಷವಾಗಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಾರ್ಮಿಕ ವರ್ಗ ಶಕ್ತಿ ಅಣಿ ನೆರೆದಿದೆ. ಆದ್ದರಿಂದಲೇ ಮುಷ್ಕರ ಮುಗಿದಾಗ ಇದು ವಿಶ್ವದ ಕಾರ್ಮಿಕವರ್ಗದ ಚಳುವಳಿಯ ಇತಿಹಾಸದಲ್ಲಿಯೇ ಪ್ರಥಮವೆಂದು ದಾಖಲೆಗೊಳ್ಳಲಿದೆ ಎಂದದ್ದು.

ಹಿಂದೆ ಬ್ರಿಟೀಷರ ಅವದಿಯಲ್ಲಿಯೂ ಹಲವಾರು ಮುಷ್ಕರಗಳು ನಡೆದಿವೆ. ಆದರೆ ಇಂತಹ ದೊಡ್ಡ ಆಖಿಲ ಭಾರತ ಮುಷ್ಕರಗಳು ನಡೆದಿಲ್ಲ. ಸ್ವಾತಂತ್ರ್ಯದ ನಂತರವೂ. ಹಿಂದೆ 1974 ಮೇ8ರಂದು ರೈಲ್ವೇ ಕಾರ್ಮಿಕರ ಹೋರಾಟಕ್ಕೆ ಬೆಂಬಲಿಸಿ ನಡೆದ ಸೌಹಾರ್ದ ಮುಷ್ಕರವೂ ಪೂರ್ಣವಿರಲಿಲ್ಲ, ಸೀಮಿತವಿತ್ತು, ಅದು ದಮನವನ್ನು ಎದುರಿಸಬೇಕಾಯಿತು. 1982 ಜನವರಿ19 ರ ಸಾರ್ವತ್ರಿಕ ಮುಷ್ಕರ ಟ್ರೇಡ್ ಯೂನಿಯನ್‌ಗಳು, ಕಾರ್ಷಿಕ ರಂಗದ ಸಂಘಟನೆಗಳು ನೀಡಿದ 24 ತಾಸುಗಳ ಕರೆಯಾಗಿತ್ತು, ಮುಂದೆ 1991 ರ ನಂತರ ಕಾರ್ಮಿಕ ವರ್ಗದ ಈ ಕಾರ್ಯಾಚರಣೆಯು ಹೊಸ ಹಂತವನ್ನು ಕಂಡಿದೆ. ಅಲ್ಲಿಂದ ಇಲ್ಲಿಯವರೆಗೆ 14 ಅಖಿಲ ಭಾರತ ಮುಷ್ಕರಗಳು ನಡೆದಿವೆ. 2012ರ ಫೆಬ್ರವರಿಯಲ್ಲಿ ಮುಷ್ಕರದಲ್ಲಿ ಹತ್ತು ಕೋಟಿಗೂ ಅಧಿಕ ಕಾರ್ಮಿಕರು ನೇರವಾಗಿ ಭಾಗಿಯಾಗಿದ್ದರು. ಇದು 15ನೆಯದ್ದು ಇನ್ನಷ್ಟೂ ವ್ಯಾಪಕತೆ ಪಡೆಯಲಿದೆ.

ಈ ಮೂಲಕ ದೇಶವನ್ನು ವಿನಾಶಕಾರಿ ದಾರಿಯಲ್ಲಿ ಕೊಂಡೊಯ್ಯಲು ಕಾರ್ಮಿಕವರ್ಗ ಬಿಡುವುದಿಲ್ಲವೆಂಬ ಸ್ಪಷ್ಟ ಎಚ್ಚರಿಕೆಯನ್ನು ಆಳುವವರಿಗೆ ನೀಡಲಿದೆ. ನೀತಿಗಳಲ್ಲಿ ಬದಲಾವಣೆ ಆಗಲೇಬೇಕು.

ಇಂತಹ ಮುಷ್ಕರಕ್ಕೆ ಒತ್ತಾಸೆ ನೀಡಿದ ಅಂಶಗಳೇನು? ಇಂತಹ ಅಭೂತಪೂರ್ವ ಒಗ್ಗಟ್ಟು ಬೆಳೆಯಲು ಸಾಧ್ಯವಾದದ್ದು ಹೇಗೆ?

ದೇಶಾದ್ಯಂತ ಆಳುವವರ ನೀತಿಗಳ ದಾಳಿಗಳಿಂದ ಜನತೆ ತತ್ತರಿಸುತ್ತಿದೆ. ಎಲ್ಲಾ ವಿಭಾಗಗಳಲ್ಲಿ, ಮುಖ್ಯವಾಗಿ ದುಡಿಯುವ ಜನಕೋಟಿಗಳಲ್ಲಿ ತೀವ್ರ ಅತೃಪ್ತಿ ಹೆಚ್ಚುತ್ತಿದೆ. ಪ್ರತಿರೋಧದ ಮನೋಭಾವ ವ್ಯಕ್ತಗೊಂಡಿದೆ. ಆ ನೀತಿಗಳನ್ನು ಹಿಮ್ಮೆಟ್ಟಿಸಲು ವಿಶಾಲ ಪ್ರತಿರೋಧದ ಅಗತ್ಯವಿದೆ. ಅಂತಹ ಜಾಗೃತಿ ಬೆಳೆಯುತ್ತಿರುವುದರಿಂದ ಈ ಐಕ್ಯ ಕಾರ್ಯಾಚರಣೆ ಸಾಧ್ಯವಾಗಿದೆ. ನಾನು ಆಗಲೇ ಹೇಳಿದಂತೆ ಈ ಒಗ್ಗಟ್ಟು ಹಲವು ಹಂತಗಳ ಪ್ರಕ್ರಿಯೆಯ ಬಳಿಕ ಮೂಡಿದೆ. ಜಗತ್ತಿನಾದ್ಯಂತ ಕಾರ್ಮಿಕ ವರ್ಗದ ಚಳುವಳಿಗಳು ನವ ಉದಾರೀಕರಣದ ಧಾಳಿಗಳ ವಿರುದ್ಧ

ನಡೆದಿರುವುದನ್ನು ಸಹ ಗಮನಿಸಬೇಕು.

ಈ ಮುಷ್ಕರದಲ್ಲಿ ಎತ್ತಿಕೊಂಡಿರುವ ಪ್ರಶ್ನೆಗಳೇನು? ಬೇಡಿಕೆಗಳೇನು?

ನಮ್ಮ ಬೇಡಿಕೆಗಳು ಕೇವಲ ಕಾರ್ಮಿಕ ವರ್ಗಕ್ಕೆ ಮಾತ್ರವೇ ಸೀಮಿತವಾಗಿಲ್ಲ. ಸಾಮಾನ್ಯ ಜನರ, ಗ್ರಾಮಾಂತರದ ರೈತ ಕೂಲಿಕಾರರ, ನಗರವಾಸಿಗಳ, ಸಣ್ಣ ವ್ಯಾಪಾರಿಗಳ, ವಿದ್ಯಾರ್ಥಿ ಯುವಜನರರಂತಹ ಎಲ್ಲಾ ವಿಭಾಗಗಳಿಗೆ ಸಂಬಂಧಿಸಿದಂತಹ ಬೇಡಿಕೆಗಳನ್ನು ಸಹ ಒಳಗೊಂಡಿವೆ. ಉದಾಹರಣೆ: ಸಾರ್ವಜನಿಕ ಪಡಿತರ ರೇಷನ್ ವ್ಯವಸ್ಥೆ, ಉದ್ಯೋಗ, ಸಾಮಾಜಿಕ ಭದ್ರತೆಯಂತಹ ಪ್ರಶ್ನೆಗಳು, ಚಿಲ್ಲರೆ ವ್ಯಾಪಾರ ರಂಗದಲ್ಲಿ ವಿದೇಶಿ ನೇರ ಹೂಡಿಕೆ ಹೀಗೆ ಬಹುಸಂಖ್ಯಾತ ಜನರ ಪ್ರಶ್ನೆಗಳಿಗಾಗಿ ಕಾರ್ಮಿಕ ವರ್ಗವು ನೇತೃತ್ವ ನೀಡುತ್ತಿದೆ. ಇದರಿಂದ ವರ್ಗ ಐಕ್ಯತೆ, ಮೂಡಲು, ಇನ್ನಷ್ಟು ಬಲಗೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂ ಉದಾರೀಕರಣದ ಆರ್ಥಿಕ ನೀತಿಗಳ ವಿರುದ್ಧದ ಹೋರಾಟವನ್ನು ಮುನ್ನಡೆಸುವಲ್ಲಿ ಈ ಮುಷ್ಕರವು ಅತ್ಯಂತ ಸುಸಂಘಟಿತವಾದ ,ಹೆಚ್ಚು ಪರಿಣಾಮಕಾರಿಯಾದದ್ದಾಗಿದೆ.

ಈಗ ಮುಷ್ಕರಕ್ಕೆ ಹೋಗುವುದು ಅನಿವಾರ್ಯವಾಗಿತ್ತಾ?

ಹೌದು. 1991ರ ಜುಲೈನಲ್ಲಿ ಮನಮೋಹನ್ ಸಿಂಗ್ ಕೇಂದ್ರದ ಹಣಕಾಸು ಮಂತ್ರಿಯಾಗಿರುವಾಗ ತಂದ ನವ ಉದಾರೀಕರಣದ ಆರ್ಥಿಕ ನೀತಿಗಳ ಜಾರಿಯ ಈ 22 ವರುಷಗಳ ಅನುಭವ ಅನಾಹುತಕಾರಿಯಾಗಿವೆ. ಪ್ರತಿಯೊಂದು ವಿಭಾಗಗಳು ತೀವ್ರ ಬಾಧಿತವಾಗಿವೆ. ನೀತಿ, ನಿಯಮ, ಕಾನೂನುಗಳನ್ನು ಗಾಳಿಗೆ ತೂರಲಾಗುತ್ತಿದೆ. ಅತ್ಯಂತ ಕಠಿಣವಾಗಿ ಹೋರಾಟ ನಡೆಸಿ ಗೆದ್ದಿದ್ದ ಸೌಲಭ್ಯಗಳು, ಕಾನೂನುಗಳನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿ ಕಾರ್ಮಿಕ ವರ್ಗವಿದೆ. ನೀವೆ ನೋ ಇಂದಿನ ಪತ್ರಿಕೆಗಳಲ್ಲಿ ಜೆಟ್ ವಿಮಾನದ ಕೆಲಸಗಾರರು ಮುಷ್ಕರಕ್ಕೆ ಇಳಿದಿದ್ದಾರೆ. ಅವರೆಲ್ಲಾ ಪದವೀಧರ, ವೈಮಾನಿಕ ಇಂಜನೀಯರುಗಳು. 12ತಾಸುಗಳ ದುಡಿಮೆ, ಕಠಿಣವಾದ ಕಷ್ಟಕರ ಕೆಲಸದ ಸ್ಥಿತಿ, ಕಡಿಮೆ ಸಂಬಳ ಇಂತಹುಗಳನ್ನು ವಿರೋಧಿಸಿ ಮುಷ್ಕರಕ್ಕೆ ಇಳಿದಿದ್ದಾರೆ. ಅವರ ವೇತನ ಗಲ್ಫ್ ಏರ್ ಲೈನ್ಸ್ ನೀಡುವ ಸಂಬಳದ 1/5ರಷ್ಟಿದೆ ಎಂಬುದು ಗಮನಿಸಬೇಕು. ಇದು ಶೋಷಣೆಯ ಮುಖ. ಇದನ್ನೇ ಬೆಂಗಳೂರಿನ ವೋಲ್ವೋ, ಇತರೆಡೆ, ಚೆನ್ನೈ, ಬಾಂಬೆ, ಗುರುಗಾಂವ್ ಮುಂತಾದೆಡೆ ಕಾಣಬಹುದು. ಇನ್ನು ಅಸಂಘಟಿತರ ಸ್ಥಿತಿ ಹೇಳ ತೀರದು. ಸ್ವಾತಂತ್ರ್ಯ ಗಳಿಸಿ ಇಷ್ಟು ವರುಷಗಳಾದ ನಂತರವೂ ಕಾರ್ಮಿಕರು ಸಂಘಗಳನ್ನು ರಚಿಸಿಕೊಳ್ಳುವ ಮೂಲಭೂತ ಹಕ್ಕನ್ನೇ ನಿರಾಕರಿಸಲಾಗುತ್ತಿದೆ. ಬೆಂಗಳೂರಿನ ಹಲವಾರು ಬಹುರಾಷ್ಟ್ರೀಯ ಕಂಪನಿಗಳು, ದೇಶೀಂ

ಪುಟ 12 ಕ್ಕೆ

ಸಂಪಾದಕೀಯ

ದೇವದಾಸಿ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವುದು ಆಘಾತಕಾರಿ

ಸಾಮಾಜಿಕ ಅನಿಷ್ಟಗಳಲ್ಲಿ ಅತ್ಯಂತ ಅಮಾನವೀಯವಾದ ದೇವದಾಸಿ ಪದ್ಧತಿ ನಮ್ಮ ನಡುವೆ ಇನ್ನೂ ಜೀವಂತವಾಗಿದೆ. 'ದೇವಿ ಕೋಪಿಸಿಕೊಳ್ಳುತ್ತಾಳೆ' ಎಂಬ ಭೀತಿಯಿಂದ ಇನ್ನೂ ಹೊರಬಂದಿರದ ದಲಿತ ಕುಟುಂಬಗಳಲ್ಲಿ ಏನೂ ಅರಿಯದ ಅಪ್ರಾಪ್ತ ಬಾಲಕಿಯರನ್ನು, ಅವರಿಗೆ 'ಮುತ್ತು' ಕಟ್ಟಿಸಿ ದೇವದಾಸಿಯನ್ನಾಗಿಸುತ್ತಾರೆ. ದೇವದಾಸಿ ಆಗುವುದೆಂದರೆ ಏನು ಎಂಬುದನ್ನು ತಿಳಿಯುವಷ್ಟರಲ್ಲಿ ಆ ಮುಗ್ಧ ಬಾಲಕಿ ಮೇಲ್ಜಾತಿ, ಮೇಲ್ವರ್ಗದ ಪುರುಷರ ಕಾಮತೃಷೆಯನ್ನು ತೀರಿಸುವ 'ಸರಕು' ಆಗಿರುತ್ತಾಳೆ.

ಹಿಂದೆ ಸವದತ್ತಿ, ಚಂದ್ರಗುತ್ತಿ, ಚಿಂಚಣಿ ಮೊದಲಾದ ಕಡೆ ಇರುವ ಹೆಣ್ಣು ದೇವರುಗಳ ದೇವಾಲಯಗಳಲ್ಲಿ ದಲಿತ ಯುವತಿಯರಿಗೆ ಮುತ್ತು ಕಟ್ಟಿ ದೇವದಾಸಿಯರನ್ನಾಗಿ ಮಾಡಲಾಗುತ್ತಿತ್ತು. ಈಗ ಯುವತಿಯರಿಗೆ ಮುತ್ತು ಕಟ್ಟಿ ಬಹಿರಂಗವಾಗಿ ದೇವದಾಸಿ ಪದ್ಧತಿಗೆ ತಳ್ಳುವುದು ತಗ್ಗಿದೆ. ಅಷ್ಟರ ಮಟ್ಟಿಗೆ ದೇವದಾಸಿ ನಿರ್ಮೂಲನೆ ಕಾನೂನು ಪರಿಣಾಮ ಬೀರಿದೆ ಎನ್ನಬಹುದು. ದೇವದಾಸಿ ಪದ್ಧತಿಗೆ ಪ್ರಚೋದನೆ ನೀಡುವವರಿಗೆ, ಕಾನೂನು ಪ್ರಕಾರ 5 ಸಾವಿರ ರೂ. ದಂಡ ಮತ್ತು 5 ವರ್ಷ ಜೈಲು ಶಿಕ್ಷೆ ಇದೆ. ಆದರೆ ದೇವದಾಸಿಯರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಇದೆ ಎಂಬ ಆಘಾತಕಾರಿ ವರದಿಯೊಂದು ಇತ್ತೀಚೆಗೆ ಪ್ರಕಟಗೊಂಡಿದೆ.

1984ರಲ್ಲಿ ರಾಜ್ಯದಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ 22,873 ದೇವದಾಸಿಯರನ್ನು ಗುರುತಿಸಲಾಗಿತ್ತು. 2007–08ನೇ ಸಾಲಿನಲ್ಲಿ ಮತ್ತೆ ಸಮೀಕ್ಷೆ ನಡೆಸಿದಾಗ 23,787 ಮಂದಿ ದೇವದಾಸಿಯರು ಹೊಸದಾಗಿ ಸೇರ್ಪಡೆಯಾಗಿದ್ದು ರಾಜ್ಯದಲ್ಲಿ ಈಗ ಒಟ್ಟು 46,660 ದೇವದಾಸಿಯರು ಇದ್ದಾರೆ ಎನ್ನಲಾಗುತ್ತಿದೆ. ದೇವದಾಸಿಯರ ಮುಕ್ತಿಗಾಗಿ ಹೋರಾಡುತ್ತಿರುವ ರಾಜ್ಯದ ಏಕೈಕ ಸಂಘಟನೆ 'ಕರ್ನಾಟಕ ದೇವದಾಸಿ ಮಹಿಳೆಯರ ವಿಮೋಚನಾ ಸಂಘ' ದೇವದಾಸಿಯರ ಸಮೀಕ್ಷೆಗಳು ಸರಿಯಾಗಿ ನಡೆಯುತ್ತಿಲ್ಲ; ನಿರ್ದಿಷ್ಟ ವಯಸ್ಸಿನ ಒಳಗಿರುವ ದೇವದಾಸಿಯರನ್ನು ಸಮೀಕ್ಷೆಯಲ್ಲಿ ಪರಿಗಣಿಸುವುದಿಲ್ಲ; ಹೀಗಾಗಿ ಇನ್ನೂ ಅನೇಕ ದೇವದಾಸಿಯರು ನೊಂದಾಯಿಸಲ್ಪಡದೆ, ತಮ್ಮ ಯಾತನಾಮಯ ಜೀವನದಿಂದ ಹೊರಬರಲಾಗದೆ ಕೊರಗುತ್ತಿರುತ್ತಾರೆ ಎಂದು ತನ್ನ ಅಧ್ಯಯನದ ಆಧಾರದಲ್ಲಿ ಹೇಳುತ್ತದೆ.

ಇನ್ನೊಂದು ವರದಿಯ ಪ್ರಕಾರ, ಯೌವನದಲ್ಲಿ ದುಷ್ಟರ ಕೈಗೆ ಸಿಕ್ಕು ವೇಶ್ಯಾವಾಟಿಕೆ ದಂಧೆಗೆ ತಳ್ಳಲ್ಪಡುವ ಯುವತಿಯರು ವಯಸ್ಸಾದ ಮೇಲೆ, ಬೇಡಿಕೆ ಕುಗ್ಗಿದಾಗ ದೇವದಾಸಿಯರಾಗಿ ಬದುಕಲೆತ್ನಿಸುತ್ತಾರೆ. ಇತ್ತೀಚೆಗೆ ರಾಜ್ಯದಲ್ಲಿ ಕಾಣೆಯಾಗುತ್ತಿರುವ ಯುವತಿಯರ ಸಂಖ್ಯೆ ಆತಂಕಕಾರಿಯಾಗಿ ಹೆಚ್ಚುತ್ತಿದೆ. ಮಧ್ಯವರ್ತಿಗಳ ಮೂಲಕ ಮಾರಾಟವಾಗಿ ವೇಶ್ಯಾವಾಟಿಕೆ ಗೃಹ ಸೇರುವ ಯುವತಿಯರ ಸಂಖ್ಯೆಯೂ ಹೆಚ್ಚುತ್ತಿದೆ. ಮುಂಬೈ, ಪುಣೆ, ದೆಹಲಿ, ಕೋಲ್ಕತ್ತಾದಂತಹ ನಗರಗಳಲ್ಲಿ ಕೆಂಪು ದೀಪದ ಕೆಳಗೆ ಹೊಟ್ಟೆಪಾಡಿಗಾಗಿ ಈ ನಮ್ಮ ಅಕ್ಕ-ತಂಗಿಯರು 35–40ರ ಹರೆಯದವರೆಗೆ ಮೈಮಾರಿಕೊಳ್ಳುತ್ತಾರೆ. ಅನಂತರ ಹಳ್ಳಿಗೆ ಹಿಂತಿರುಗಿ ದೇವದಾಸಿಯರಂತೆ ಜೀವ ಸವೆಯಿಸಲು ಹೆಣಗುತ್ತಾರೆ.

ಅವಳು ವೇಶ್ಯೆಯಾಗಿರಬಹುದು ಅಥವ ದೇವದಾಸಿ. ದೇಹದಲ್ಲಿ ಶಕ್ತಿ ಕುಗ್ಗುತ್ತಿದ್ದಂತೆ ಅವಳು ಎಲ್ಲರಿಗೂ ಬೇಡದವಳಾಗುತ್ತಾಳೆ. ಮುಪ್ಪಿನಲ್ಲಿ ಅವಳಿಗೆ ಯಾರು ಗತಿ? ಅವಳಿಗೆ ಹುಟ್ಟಿದ ಮಕ್ಕಳ ಗತಿ ಏನು?

ಕೇವಲ ಕಾನೂನಿನ ಮೂಲಕ ಇಂತಹ ಅನಿಷ್ಟಗಳ ನಿರ್ಮೂಲನೆ ಸಾಧ್ಯವಿಲ್ಲ. ಇಂತಹ ಅನಿಷ್ಟಗಳನ್ನು ಪೋಷಿಸುತ್ತಿರುವ ಈ ಸಮಾಜ ಬದಲಾಗಬೇಕಾಗಿದೆ. ಅಮಾನವೀಯ ಜಾತಿ ಪದ್ಧತಿ, ಮಹಿಳೆಯರನ್ನು ಸರಕಾಗಿ ಕಾಣುವ ಪುರುಷ ಪ್ರಧಾನ ಪ್ರವೃತ್ತಿಗಳ ವಿರುದ್ಧ ದಂಗೆಯೇ ಆಗಬೇಕಾಗಿದೆ. ಸಾಮಾಜಿಕ ನೆಲೆಯಲ್ಲಿ ಒಡಮೂಡಬೇಕಾದ ಸಾಂಸ್ಕೃತಿಕ ಕ್ರಾಂತಿಯನ್ನು ಆಳುವ ವರ್ಗಗಳು ತಡೆಯುತ್ತಿವೆ. ಆದ್ದರಿಂದ ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದ ವಿರುದ್ಧ ಹೋರಾಟಗಳು ಒಗ್ಗೂಡಬೇಕಾಗಿದೆ.

"ಹಿಂದುತ್ವ"ಕ್ಕಾಗಿಯೇ ಹುಟ್ಟಿರುವ ಆರ್‌ಎಸ್‌ಎಸ್ ದೇವದಾಸಿ ಪದ್ಧತಿ ಒಂದು ಸಾಮಾಜಿಕ ಅನಿಷ್ಟ ಎಂದು ಪರಿಗಣಿಸಲಿಕ್ಕಿಲ್ಲ. ಸರಸಂಘಚಾಲಕ ಭಾಗವತ್ ಅವರಿಗೆ ಪಾಶ್ಚಾತ್ಯ ಪ್ರಭಾವಕ್ಕೆ ಕಿಂಚಿತ್ತೂ ಒಳಗಾಗದಿರುವ ನಮ್ಮ ಕುಗ್ರಾಮಗಳಲ್ಲಿ ಈ ಅನಿಷ್ಟ ಪದ್ಧತಿ ಜೀವಂತವಾಗಿರುವುದು ಗಮನಕ್ಕೆ ಬಂದಿಲ್ಲ! ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನಿರಾಕರಿಸುವ, ಹೆಣ್ಣು ಮಕ್ಕಳು ನಾಲ್ಕುಗೋಡೆಗಳ ನಡುವೆ ಬಂಧಿಯಾಗಿರಬೇಕು ಎಂದು ಬಯಸುವ ಇಂತಹ ರೋಗಗ್ರಸ್ಥ ಮೆದುಳುಗಳನ್ನು ಸ್ಫೋಟಿಸುವ ವೈಚಾರಿಕ ಕ್ರಾಂತಿ ಯಶಸ್ವಿಯಾಗಬೇಕು. ನಾವು-ನೀವು ಅದನ್ನು ಯಶಸ್ವಿಗೊಳಿಸಬೇಕು.

ನೀವು 'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ಚಂದಾದಾರರೇ? ಏಜೆನ್ಸಿದಾರರೇ? ಹಾಗಿದ್ದರೆ ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ, C/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಸಂಪಾದಕೀಯ ವಿಭಾಗಕ್ಕೆ ಸಂಬಂಧಿಸಿದ ಸೂಚನೆಗಳು

ಪತ್ರಿಕೆಗೆ ಕಳುಹಿಸಲಾಗುವ ಲೇಖನಗಳು, ವರದಿ, ಬರಹಗಳು, ಫೋಟೋ ಇತ್ಯಾದಿಗಳನ್ನು ಎಂದಿನಂತೆ ಮಹಾಲಕ್ಷ್ಮಿ ಬಡಾವಣೆಯ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು.

'ಜನಶಕ್ತಿ ಕನ್ನಡ ವಾರಪತ್ರಿಕೆ'
ಇಎಂಎಸ್ ಭವನ, ನಂ: 37/ಎ, 8 ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಹತ್ತಿರ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560086. ಫೋ: 080-23491114

ಲೇಖನ-ವರದಿ ಮತ್ತು ಫೋಟೋಗಳನ್ನು ಮೈಲ್ ಮಾಡುವವರು ಪತ್ರಿಕೆಯ ಈ ಕೆಳಕಂಡ ಇ-ಮೈಲ್ ವಿಳಾಸಕ್ಕೆ ಕಳುಹಿಸುವುದು.

js_weekly@yahoo.com

ನಿಮ್ಮ ಲೇಖನ-ವರದಿಗಳು ನುಡಿ ತಂತ್ರಾಂಶ (nudi 01e)ದಲ್ಲಿರಲಿ.

-ಸಂಪಾದಕರು

ಸಂಪರ್ಕಕ್ಕೆ :
ಆರ್. ರಾಮಕೃಷ್ಣ : 9448505789

ಕುಂದಾಪುರ: ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ರಾಜೀನಾಮೆಗೆ ಆಗ್ರಹ



13 ಶಾಸಕರು ರಾಜೀನಾಮೆ ನೀಡಿರುವುದರಿಂದ ಸರಕಾರ ಬಹುಮತ ಕಳಕೊಂಡಿದೆ. ಬಹುಮತ ಇಲ್ಲದ ಸರಕಾರ ರಾಜೀನಾಮೆ ನೀಡಿ ವಿಧಾನ ಸಭೆಯನ್ನು ವಿಸರ್ಜಿಸಿ, ಚುನಾವಣೆ ನಡೆಸಬೇಕೆಂದು ಸಿಪಿಐ(ಎಂ) ಕುಂದಾಪುರ ತಾಲೂಕು ಸಮಿತಿಯ ನೇತೃತ್ವದಲ್ಲಿ ಶಾಸ್ತ್ರಿ ಸರ್ಕಲಿನ ಬಳಿ ನಡೆದ ಪ್ರತಿಭಟನೆಯಲ್ಲಿ ಸರಕಾರವನ್ನು ಒತ್ತಾಯಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರಾದ ಕೆ. ಶಂಕರ್, ತಾಲೂಕು ಕಾರ್ಯದರ್ಶಿಯವರಾದ ಮಹಾಬಲ ವಡೇರಹೋಬಳಿ, ಜಿಲ್ಲಾ ಸಮಿತಿಯ ಸದಸ್ಯರಾದ ಯು. ದಾಸ ಭಂಡಾರಿ, ಎಚ್. ನರಸಿಂಹ, ವೆಂಕಟೇಶ ಕೋಣಿ ಹಾಗೂ ಸುರೇಶ ಕಲ್ಲಾಗರ್ ವಹಿಸಿದ್ದರು.

ಭ್ರಷ್ಟ ಬಿಜೆಪಿ ಸರಕಾರ ತೊಲಗಬೇಕು, ಹೊಸತಾಗಿ ಚುನಾವಣೆ ನಡೆಯಿಸಿ ಜನಾದೇಶವನ್ನು ಪಡೆಯಬೇಕೆಂದು ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ. ಶಂಕರ್ ಒತ್ತಾಯಿಸಿದರು. ಮಹಾಬಲ ವಡೇರ ಹೋಬಳಿಯವರು ಸ್ವಾಗತಿಸಿದರು. ಕೊನೆಯಲ್ಲಿ ವೆಂಕಟೇಶ ಕೋಣಿಯವರು ಧನ್ಯವಾದ ಅರ್ಪಿಸಿದರು.

ಗಜೇಂದ್ರಗಡ : ಬಡವರಿಗೆ ಸಾಲ ನೀಡದ ರಾಷ್ಟ್ರೀಕೃತ ಬ್ಯಾಂಕುಗಳ ಧೋರಣೆ ಖಂಡಿಸಿ ಪ್ರತಿಭಟನೆ

ಕಡಿಮೆ ಬಡ್ಡಿದರದ ರಾಷ್ಟ್ರೀಕೃತ ಬ್ಯಾಂಕುಗಳ ಸಾಲವು ನಿಜಕ್ಕೂ ಅಗತ್ಯವಾಗಿರುವುದು ನಮ್ಮ ಸಮಾಜದ ಬಡವರಿಗೆ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದುರ್ಬಲರಾದ ಜನ ವಿಭಾಗಗಳಿಗೆ. ಖಾಸಗಿ ಅಲ್ಲದ ರಾಷ್ಟ್ರೀಕೃತ ಸರ್ಕಾರಿ ಬ್ಯಾಂಕುಗಳಲ್ಲಿ ಕೂಡ ಬಹಳಷ್ಟು ಸಂದರ್ಭಗಳಲ್ಲಿ ಈ ವಿಭಾಗಗಳ ಜನರು, ಸ್ತ್ರೀ ಶಕ್ತಿ ಸಂಘಗಳ ಮಹಿಳೆಯರು, ಗ್ರಾಮೀಣ ಕರಕುಶಲಿಗರು, ಸ್ವಯಂ ಉದ್ಯೋಗ ಮಾಡಬಯಸುವ ಯುವಜನರು, ದುಡಿಮೆಗಾರರು ಈ ಬ್ಯಾಂಕುಗಳ ಸಾಲ ಪಡೆದುಕೊಳ್ಳುವುದು ಅಷ್ಟೇನು ಸಲೀಸಲ್ಲ. ಸಾಲ ಸಿಗುವುದೇ ಇದ್ದರೆ ಅದು ಹಲವಾರು ಸಾರಿ ಮಧ್ಯವರ್ತಿಗಳ ಮೂಲಕ ಮಾತ್ರ. ಸರ್ಕಾರವೆಂಬ ಮೇಲಿನ 'ದೇವರು' ಅಲ್ಪ ಸ್ವಲ್ಪ ಕೊಟ್ಟಿದ್ದರೂ ನಡುವಿನ ಪೂಜಾರಿಗಳು ಕೊಡರು. ಪೂರ್ಣ ರೊಕ್ಕ ಜನರ ಕೈಗೆ ಹತ್ತುವುದೇ ಇಲ್ಲ. ಈ ಮಧ್ಯಸ್ಥದಾರರನೇ ಎಷ್ಟೋ ಮುಕ್ಕಿ ಉಳಿದದ್ದು 'ಫಲಾನುಭವಿ'ಗೆ ಕೈಗೆ ಹಾಕುತ್ತಾನೆ. ಸರ್ಕಾರಗಳಿಂದ ಸಿಗುವ ಸಹಾಯಧನದ ಮುಕ್ಕಾಲು ಪಾಲು ಇವನೇ ನುಂಗುತ್ತಾನೆ. ಸಾಲ ಮಂಜೂರು ಮಾಡುವ ಬ್ಯಾಂಕಿನ ವ್ಯವಸ್ಥೆ ಈ ಏರ್ಪಾಟಿಗೆ ಚೆನ್ನಾಗಿ 'ಹೊಂದಿಕೊಂಡು' ಬಿಟ್ಟಿರುತ್ತದೆ.

'ಬಡವ ನೀನು ಮಡಗಿದಂಗೆ ಇರು' ಎಂಬ ಗಾದೆ ಮಾತನ್ನು ನೆನಸಿಕೊಳ್ಳದೇ, 'ಅದೃಷ್ಟ', 'ಎಲ್ಲಾ ದೈವೇಚ್ಛೆ', 'ಹಣೆಬರಹ', 'ಯೋಗಾಯೋಗ' ಎಂಬೆಲ್ಲಾ ಮಾತುಗಳನ್ನು ಪಕ್ಕಕ್ಕಿಟ್ಟು ಇಂತಹ ಬ್ಯಾಂಕುಗಳ ಬಡವರ ವಿರೋಧಿ ಸಾಲ ನೀತಿಯ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದು ಗದಗ ಜಿಲ್ಲೆ ರೋಣ ತಾಲ್ಲೂಕು ಗಜೇಂದ್ರ ಗಡದ ಜನವಾದಿ ಮಹಿಳಾ ಸಂಘಟನೆ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳು.

ಜನವರಿ 10,2013 ರಂದು ಪಟ್ಟಣದ ಮೌನೇಶ್ವರ ದೇವಾಲಯದ ಬಳಿಯಿಂದ ಪ್ರತಿಭಟನಾ ಮೆರವಣಿಗೆಯಲ್ಲಿ ಗಣನೀಯ ಸಂಖ್ಯೆಯ ಮಹಿಳೆಯರು ಸೇರಿದಂತೆ ನೂರಾರು



ಜನರು ಹೊರಟು ದುರ್ಗಾವೃತ್ತ, ಜೋಡು ರಸ್ತೆ, ಕಾಲಕಾಲೇಶ್ವರ ವೃತ್ತದ ಮೂಲಕ ಸಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಶಾಖೆಗಳ ಮುಂದೆ ನಿಂತು ಘೋಷಣೆ ಕೂಗಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಬೇಡಿಕೆ ಪಟ್ಟಿ ಕೊಟ್ಟು ಸಮಸ್ಯೆಯ ಪರಿಹಾರಕ್ಕೆ ಆಗ್ರಹಿಸಲಾಯಿತು.

ಸಾವಿತ್ರಮ್ಮ ಹೊಲಗಿ, ರೇಣುಕಾ ಚಿಟಗಿ, ದೇವಕ್ಕಾ ಬಾಗೋತ್ತರ ಮುಂತಾದವರು ಮಾತನಾಡಿ ಸಾಲಕ್ಕಾಗಿ ಎಲ್ಲ ದಾಖಲೆಗಳೊಂದಿಗೆ ಎರಡು ವರ್ಷಗಳಿಂ ಓಡಾಡಿದರೂ ಪ್ರಯೋಜನವಾಗಿಲ್ಲ. ಸ್ವಸಹಾಯ ಸಂಘಗಳಿಗೆ ಸಾಲ ನೀಡುವ ವಿಚಾರದಲ್ಲಿ ಸೂಚನೆಗಳನ್ನು ನಿಯಮಗಳನ್ನು ಇಲ್ಲಿ ಗಾಳಿಗೆ ತೂರಲಾಗಿದೆ ಎಂದು ಖಂಡಿಸಿದರು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಬಾಲು ರಾಥೋಡ, ಶಿವು ರಾಥೋಡ, ಪೀರು ರಾಥೋಡ ಮುಂತಾದವರು ಮಾತನಾಡಿ ರೈತರಿಗೆ ಬೆಳೆ ಸಾಲ, ಮನೆ ಸಾಲ, ಶಿಕ್ಷಣ ಸಾಲ ಎಲ್ಲ ಸಾಲಗಳಿಗೂ ಮಧ್ಯವರ್ತಿಗಳನ್ನು ಅವಲಂಬಿಸಬೇಕಾಗಿದೆ. ಈ ಪರಿಸ್ಥಿತಿ ತಪ್ಪಿಸಬೇಕು. ಸಾಲ ಸೌಲಭ್ಯಗಳ ಬಗೆಗೆ ಬ್ಯಾಂಕುಗಳಲ್ಲಿ ಫಲಕಗಳನ್ನು ಹಾಕಬೇಕು ಎಂದು ಆಗ್ರಹಿಸಿದರು. ಪಾ ಅಜ್ಮೀರ, ರೇಣುಕಾ ರಾಥೋಡ, ಹಸೇನ ಬಾನು ಕಾತರಕಿ, ಮಾನವ್ವಾ ಮಳೋತ್ತರ, ಗುಜರವ್ವಾ ಚವ್ಹಾಣ ಚಂದವ್ವ ಮಳೋತ್ತರ, ಶಾಂತಬಾಯಿ ರಾಥೋಡ ಮುಂತಾವರು ನೇತೃತ್ವ ವಹಿಸಿದ್ದರು.

'...ಇತಿಹಾಸದಲ್ಲಿಯೇ ದಾಖಲಾಗಲಿದೆ ಈ ಮಹಾ ಮುಷ್ಕರ'

ಪುಟ 2 ರಿಂದ

ಕಂಪನಿಗಳು. ಯೂನಿಯನ್ ರಚಿಸಲು ಅವಕಾಶ ನೀಡುತ್ತಿಲ್ಲ, ಅಂತಹ ಪ್ರಯತ್ನಗಳನ್ನು ದಮನಿಸಲಾಗುತ್ತಿದೆ. 1926ರಲ್ಲೇ ಕಾರ್ಮಿಕ ಸಂಘಗಳನ್ನು ರಚಿಸಿಕೊಳ್ಳುವ ಹಕ್ಕನ್ನು ಗೆದ್ದದ್ದಾಯಿತು. ನಮ್ಮ ಸಂವಿಧಾನ ಅಂಗೀಕರಿಸುವ ಮುನ್ನ ಬ್ರಿಟೀಷರು ಈ ಕಾನೂನು ತಂದರು. ಆದರೆ ಈಗಲೂ ಇಲ್ಲಿ ಅವಕಾಶವಿಲ್ಲದಿರುವುದು ಏನನ್ನು ತೋರಿಸುತ್ತದೆ. ನಮ್ಮದು ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದು ಹೆಗ್ಗಳಿಕೆಯಿಂದ ಜನವರಿ 26ರಂದು ಹೇಳಿಕೊಳ್ಳಲು ಏನಾದರೂ ಅರ್ಥವಿದೆಯೇ?. ಆದ್ದರಿಂದ ಸರಕಾರ ಮತ್ತು ಉದ್ದಿಮೆಗಳ ದಮನ, ಶೋಷಣೆಗಳು ಸೃಷ್ಟಿಸಿರುವ ಧಾರುಣದ ವಿರುದ್ಧ ಹೋರಾಟ ಅನಿವಾರ್ಯ.

ಹಾಗಾಗಿ ನಮಗೆ ನೀತಿಗಳಲ್ಲಿ ಬದಲಾವಣೆ ಬೇಕು, ಈ ಕಾರ್ಪೋರೇಟ್ ಕಂಪನಿಗಳು ದೇಶವನ್ನು ಲೂಟಿ ಮಾಡುವುದು ಬೇಕಿಲ್ಲ. ದೇಶದ ಕಾರ್ಮಿಕರು, ಕೂಲಿಕಾರರು,ರೈತರು ಮಹಿಳೆಯರು, ಆದಿವಾಸಿಗಳು, ದಲಿತರು, ವಿದ್ಯಾರ್ಥಿ ಯುವಜನರು, ಮುಂ. ಎಲ್ಲಾ ಸಾಮಾನ್ಯ ಜನ್ರ ಜೀವನ ಉತ್ತಮಗೊಳ್ಳಬೇಕಿದೆ. ಅದಕ್ಕಾಗಿ ಈ ಎಲ್ಲಾ ವಿಭಾಗಗಳು ಜನತೆ ಒಂದಾಗಿ ವಿಶಾಲ ವೇದಿಕೆಗಳನ್ನು ತಮ್ಮ ತಮ್ಮ ಪ್ರದೇಶಗಳಲ್ಲಿ ರಚಿಸಿಕೊಂಡು ಕಾರ್ಯವೆಸಗಬೇಕಾಗಿದೆ.

ಹೋರಾಟದಲ್ಲಿ ತೊಡಗುವ ದೆಸೆಯಲ್ಲಿ ಈ ಜನವಿಭಾಗಗಳ ಮನೋಭಾವ, ಸ್ಪಂದನೆ ಹೇಗಿದೆ?

ಈ ಫೆಬ್ರವರಿ 20,21 ರ ಮುಷ್ಕರವನ್ನು ಅತ್ಯಂತ ಯಶಸ್ವಿಗೊಳಿಸುವ ಉತ್ಸಾಹ ಎಲ್ಲೆಡೆ ಕಾಣುತ್ತೇವೆ. ಇದಕ್ಕೆ ಸಣ್ಣ ವ್ಯಾಪಾರಿಗಳನ್ನು ಒಳಗೊಂಡು ಇತರರು ಸ್ಪಂದಿಸುತ್ತಿದ್ದಾರೆ. ಮುಖ್ಯವಾಗಿ ಕಾರ್ಮಿಕರು ತಮ್ಮ ವೇತನವನ್ನು ಕಳೆದುಕೊಂಡಾದರೂ ಸರಿಯೇ ಮುಷ್ಕರದಲ್ಲಿ ತೊಡಗಬೇಕೆಂಬ ಭಾವನೆ ವ್ಯಕ್ತವಾಗಿದೆ. ಕೋಟ್ಯಾಂತರ ಕಾರ್ಮಿಕರು ,ಇತರೆ ವಿಭಾಗಗಳ ಜನತೆಯಲ್ಲಿ ಹೋರಾಟದ ಪ್ರತಿಕ್ರಿಯೆ ನೀಡುವಂತಹ ಮನೋಭಾವವನ್ನು ದೇಶಾದ್ಯಂತ ಗುರುತಿಸಿದ್ದೇವೆ. ಕೇಂದ್ರೀಯ 11 ಕಾರ್ಮಿಕ ಸಂಘಟನೆಗಳು ಒಂದಾಗಿ ಸಮಾವೇಶಗಳು, ಸಭೆಗಳನ್ನು ನಡೆಸಿದ್ದೇವೆ. ಆಯಾ ರಾಜ್ಯ, ಜಿಲ್ಲೆಗಳಲ್ಲಿಯೂ ಸಿದ್ಧತೆ ಪ್ರಚಾರಾಂದೋಲನ ಜಂಟಿಯಾಗಿಯೂ, ಆಯಾ ಸಂಘಟನೆಗಳ ಮಟ್ಟದಲ್ಲಿಯೂ ನಡೆದಿದೆ. ಅರುಣಾಚಲ ಪ್ರದೇಶ,ಅಸ್ಸಾಂ, ಜಮ್ಮು ಕಾಶ್ಮೀರದಂತಲ್ಲಿಯೂ ಸಿದ್ಧತೆ ಸ್ಪೂರ್ತಿದಾಯಕ. ಫೆಬ್ರವರಿ 14ರಂದು ವಿಧಾನಸಭಾ ಚುನಾವಣೆಗಳಿರುವಾಗಲೂ ತ್ರಿಪುರಾವೂ ಸ್ಪಂದಿಸಲಿದೆ. 15ನೇ ಡಿಶೆಂಬರ್‌ನಲ್ಲಿ ಚೆನ್ನೈನಲ್ಲಿ ನಡೆದ ಸಾರ್ವಜನಿಕ ಉದ್ದಿಮೆಗಳ ಸಂಘಟನೆಗಳು ಸಹ ಪೂರ್ಣಪ್ರಮಾಣದಲ್ಲಿ ತೊಡಗಲು ನಿರ್ಧರಿಸಿವೆ. ಸಿಐಟಿಯುವಿನ ಸಮ್ಮೇಳನಗಳು ನಡೆದಿದ್ದರೂ ಇನ್ನು ಅದಕ್ಕೆ ತಾತ್ಕಾಲಿಕ ಬಿಡವು ನೀಡಿ ಸಿದ್ಧತೆ ತೀವ್ರಗೊಳಿಸಲಾಗುವುದು. ಹೀಗೆ ಹಲವೆಡೆ ಈ ಮುಷ್ಕರ ಹರತಾಳವಾಗಿ ಮಾರ್ಪಡಬಹುದು

ಕೊನೆಯದಾಗಿ, ಇಲ್ಲಿಯವರೆಗಿನ ಇಂತಹ ಸಾರ್ವತ್ರಿಕ ಮುಷ್ಕರಗಳು ಮುಂದೆ ದೇಶದ ರಾಜಕೀಯದಲ್ಲಿ ಬದಲಾವಣೆ ತರುವಲ್ಲಿ ಪರಿಣಾಮ ಬೀರಿವೆ. ಈ ಮುಷ್ಕರದ ರಾಜಕೀಯ ಪರಿಣಾಮದ ಬಗ್ಗೆ ಏನು ಹೇಳ ಬಯಸುವಿರಿ?

ನಮ್ಮ ಈ ಮುಷ್ಕರವು ನಿರ್ದಿಷ್ಟ ಬೇಡಿಕೆಗಳ ಪಟ್ಟಿಯಾಧಾರದಲ್ಲಿದೆ. ತಕ್ಷಣದ ಅಥವಾ ರಾಜಕೀಯ ಬೇಡಿಕೆಯನ್ನೇನೂ ಇರಿಸಿಕೊಂಡಿಲ್ಲ. ಆದರೆ ಜನತೆಯ ಇಂತಹ ಆಂದೋಲನಗಳು ಆಳುವವರ ಮೇಲೆ ಒತ್ತಡವನ್ನು ಸೃಷ್ಟಿಸುತ್ತವೆ. ಇಂತಹ ಪ್ರಬಲ ಹೋರಾಟಗಳಿಂದಾಗಿಯೇ ಕೇಂದ್ರದ ಸರಕಾರ ತರಬೇಕೆಂದಿದ್ದ ಉದಾರೀಕರಣದ ಹತ್ತಾರು ವಿಷಯಗಳನ್ನು ಕೂಡಲೇ ತರಲಾಗಲಿಲ್ಲ. ನಮ್ಮ ಬ್ಯಾಂಕ್, ವಿಮೆ, ಸಾರ್ವಜನಿಕ ಉದ್ದಿಮೆ ಯಂತಹ ಕ್ಷೇತ್ರಗಳಲ್ಲಿ ಬಂಡವಾಳ ಹಿಂತೆಗೆತ ಮಾಡುವ ಪ್ರಯತ್ನ, ಖಾಸಗೀಕರಣ, ವಿದೇಶಿ ಬಂಡವಾಳ ನೇರ ಬಂಡವಾಳ ಹೂಡಿಕೆ ಯ ಪ್ರಯತ್ನಗಳನ್ನು 1991 ರಲ್ಲೇ ಮಾಡ ಬಯಸಿದ್ದರು.ಆದರೆ ನಮ್ಮ ಪ್ರತಿರೋಧದಿಂದ ಅದು ಅವರು ಅಂದುಕೊಂಡಂತೆ ಆಗಲಿಲ್ಲ. ನಾವು ಪ್ರತಿರೋಧ ಒಡ್ಡುತ್ತಾ ಹೋದಂತೆ, ಸರಕಾರಗಳು ಧಾಳಿಗಳನ್ನು ನಡೆಸುತ್ತಿರುವಂತೆ ಸಹಜವಾಗಿ ಜನತೆ ನಮ್ಮ ಹೋರಾಟವನ್ನು, ಆಳುವವರ ನೀತಿಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. ಇದು ಒಂದು ರಾಜಕೀಯ ಬದಲಾವಣೆಗೆ, ನಿಜ ಪರ್ಯಾಯಕ್ಕೆ ಒತ್ತಾಸೆ ಆಗಬಹುದು. ಅದೇ ಈ ಹಿಂದೆಯೂ ಆಗಿದೆ.

ನಾವು ಆಳುವವರಲ್ಲಿ ನೀತಿಗಳ ಬದಲಾವಣೆಯನ್ನು ಬಯಸುತ್ತೇವೆ. ಸುಧಾರಣೆ, ಅಭಿವೃದ್ಧಿ ಹೆಸರಿನಲ್ಲಿಯ ವಿನಾಶಕಾರೀ ನೀತಿಗಳ ಜಾರಿಯನ್ನು ಹಿಮ್ಮೆಟ್ಟಿಸಬಯಸುತ್ತೇವೆ. ಆದ್ದರಿಂದ ನಮ್ಮ ಲಕ್ಷ್ಯ ಜನತೆಯನ್ನು ಜಾಗೃತಗೊಳಿಸುವುದು, ಸಂಘರ್ಷದಲ್ಲಿ ತೊಡಗಿಸುವುದು, ಬದಲಾವಣೆಗೆ ಪ್ರೇರಣೆ ನೀಡುವುದು. ಹೀಗಿರುವಾಗ ಮುಷ್ಕರಗಳಲ್ಲಿ ಭಾಗವಹಿಸಿದ ಎಲ್ಲಾ ಕಾರ್ಮಿಕರು, ಎಲ್ಲಾ ಜನ ವಿಭಾಗಗಳು ನವ ಉದಾರೀಕರಣದ ನೀತಿಗಳನ್ನು, ಅದರ ಘೋರ ಪರಿಣಾಮಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದಾರೆಂದು ಅರ್ಥವಲ್ಲ. ಅವರು ಇಂತಹ ಹಲವು ಪ್ರಕ್ರಿಯೆಗಳ ಮೂಲಕ ಅರಿಯುತ್ತಾರೆ. ಇದೂ ಕೂಡ ಶಿಕ್ಷಣದ ಬಹು ಮುಖ್ಯ ಕ್ರಿಯೆಯಾಗಿದೆ. ಅಂತಿಮವಾಗಿ,ಈ ಚಾರಿತ್ರಿಕ ಮಹಾ ಮುಷ್ಕರದಲ್ಲಿ ಎಲ್ಲಾ ದೇಶಪ್ರೇಮಿ ಜನತೆ ಭಾಗವಹಿಸಬೇಕಾಗಿ ವಿನಂತಿಸುತ್ತೇನೆ.

ಹೀಗೆ ಸಂಗಾತಿ ಏ.ಕೆ.ಪಿ. ಯವರು ಬೆಂಬಲ ಕೋರಿಕೆಯ ಹಂಬಲ, ಆತ್ಮವಿಶ್ವಾಸದೊಂದಿಗೆ ಮುಗುಳು ನಗುತ್ತಾ ಸಮ್ಮೇಳನದ ಕಲಾಪಗಳತ್ತ ಹೆಜ್ಜೆ ಹಾಕುತ್ತಾ ಹೊರಟರು.

ಓದುಗರಿಗಾಗಿ ಸಮಯ ನೀಡಿದ ಅವ ಜನಶಕ್ತಿ ಥ್ಯಾಂಕ್ಸ್ ಹೇಳಿತು.

29 ಜನವರಿ2012

ಬಹುಮತ ಹೋದರೂ ಬಜೆಟ್ ಮಂಡಿಸುವ

ಬಿಜೆಪಿ ಸರ್ಕಾರದ ದಿವಾಳಿಕೋರತನ

ಜಿ.ವಿ.ಶ್ರೀರಾಮರೆಡ್ಡಿ

ಕಳೆದ ಒಂದು ತಿಂಗಳಿಂದ ರಾಜಕೀಯ ದೊಂಬರಾಟ ನಡೆದು ರಾಜ್ಯದಲ್ಲಿನ ಜಗದೀಶ್‌ಶೆಟ್ಟರ್ ಸರ್ಕಾರ ಉಳಿಯುತ್ತಾ ? ಉರಳುತ್ತಾ ? ಜಗದೀಶೆಟ್ಟರ್ ತಮ್ಮ ಚೊಚ್ಚಲ ಬಜೆಟ್ ಮಂಡಿಸುತ್ತಾರ ! ಈ ವಿಷಯಗಳೇ ಮಾಧ್ಯಮದ ಚರ್ಚೆ ವರದಿಗಳ ಪ್ರಧಾನ ಅಂಶಗಳಾಗಿದ್ದವು. ಬಿಜೆಪಿಗೆ ಎಷ್ಟು ಜನ ಶಾಸಕರು ರಾಜಿನಾಮೆ ಕೊಡುತ್ತಾರೆ. ಯಡಿಯೂರಪ್ಪನವರ ಕೆಜೆಪಿ ಜೊತೆ ಎಷ್ಟು ಜನ ಶಾಸಕರು ಇರುತ್ತಾರೆ. ಈ ಅಂಶಗಳು ರಾಜ್ಯದಲ್ಲಿ ಕೆಲವರಿಗೆ ಆತಂಕವನ್ನೂ ಕೆಲವರಿಗೆ ಕುತೂಹಲವನ್ನೂ ಉಂಟು ಮಾಡಿದ್ದವು. ಈ ಬೆಳವಣಿಗೆಗಳಿಂದಾಗಿ ಒಂದು ಕಡೆ ಜಗದೀಶ್‌ಶೆಟ್ಟರ್ ಸರ್ಕಾರ ಉಸಿರಾಟದ ತೊಂದರೆಗೆ ಸಿಕ್ಕಿ ಕೋಮಾದಲ್ಲಿದೆ. ಇನ್ನೊಂದು ಕಡೆ ರಾಜ್ಯದ ಜನತೆ ಬರಗಾಲದ ಬವಣೆಯಿಂದ, ಬೆಲೆಯೇರಿಕೆಯಿಂದ, ಭೀಕರವಾದ ಕುಡಿಯುವ ನೀರಿನ ಸಮಸ್ಯೆಗಳಿಂದ ತತ್ತರಿಸುತ್ತಿದ್ದಾರೆ.


ಕೋಮಾದಲ್ಲಿ ಸರ್ಕಾರ

ಬಿಜೆಪಿಯಲ್ಲಿನ ಗುಂಪುಗಾರಿಕೆಯಿಂದ ಆಡಳಿತ ಯಂತ್ರ ಸಂಪೂರ್ಣ ನಿಷ್ಕ್ರಿಯಗೊಂಡು ಆಡಳಿತ ಕುಸಿದು ಹೋಗಿದೆ. ವಾಸ್ತವವಾಗಿ ರಾಜ್ಯದಲ್ಲಿ ಜನತೆಯ ಪಾಲಿಗೆ ಸರ್ಕಾರವೇ ಇಲ್ಲದಂತಾಗಿದೆ. ಇಡೀ ರಾಜ್ಯ ದಿಕ್ಕು ಕಾಣದ ಅನಾಥಸ್ಥಿತಿಗೆ ತಳ್ಳಲ್ಪಟ್ಟಿದೆ. ಯಂತ್ರಗಳ ಸಹಾಯದಿಂದ ಕೃತಕ ಉಸಿರಾಟದಲ್ಲಿರುವ ಸರ್ಕಾರ ಒಂದು ತನ್ನ ಕಡೆಯ ಅಧಿವೇಶನವನ್ನು ಪ್ರಾರಂಭಿಸಿದೆ. ಜನವರಿ 4ನೇ ತಾರೀಖಿನಂದು ಶಾಸನ ಸಭೆಯ ಜಂಟಿ ಅಧಿವೇಶನ ಪ್ರಾರಂಭವಾಗಿದೆ. ಈ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣ ಮರಣಶಯ್ಯೆಯಲ್ಲಿರುವ ಸರ್ಕಾರದ ಚರಮಗೀತೆಯಂತಿದೆ.

ಬಿಜೆಪಿ ಸರ್ಕಾರದ ಸಿದ್ದಪಡಿಸಿಕೊಟ್ಟು ರಾಜ್ಯಪಾಲರು ಸದನದಲ್ಲಿ ಮಂಡಿಸಿದ ಭಾಷಣದಲ್ಲಿ ಭರವಸೆ ಮೂಡಿಸುವ ಒಂದೇ ಒಂದು ಅಂಶವು ಕೂಡ ಇಲ್ಲ. ಅದು ನಾಲ್ಕೂವರೆ ವರ್ಷಗಳ ಬಿಜೆಪಿ ಸರ್ಕಾರದ ಡೋಂಗಿ ಅಭಿವೃದ್ಧಿಯ ಸುಳ್ಳಿನ ಕಂತೆಯಂತೆ ಇದೆ. ರಾಜ್ಯಪಾಲರ ಭಾಷಣವೆಂದರೆ ಅದು ಸರ್ಕಾರ ಒಂದರ ಕಾರ್ಯಸೂಚಿಯಾಗಿರಬೇಕು. ಆದರೆ ಅದು ನಿರರ್ಥಕ ಮತ್ತು ನಿರುಪಯೋಗಿಯಾದ ಚರಮಗೀತೆ ಆಗಿದೆ.

ಈ ಸರ್ಕಾರಕ್ಕೆ ವಾಸ್ತವವಾಗಿ ಅಧಿವೇಶನ ನಡೆಸುವ ಅರ್ಹತೆಯೂ ಇಲ್ಲ. ಬಹುಮತವೂ ಇಲ್ಲ. ವಿಧಾನಸಭಾಧ್ಯಕ್ಷರ ಸ್ಥಾನವನ್ನು ದುರುಪಯೋಗ ಮಾಡಿಕೊಂಡು ತನ್ನ ಪತನವನ್ನು ಅದು ತಡೆ ಹಿಡಿದುಕೊಂಡಿದೆ. 12 ಜನ ಶಾಸಕರ ರಾಜಿನಾಮೆಯನ್ನು ಅಂಗೀಕರಿಸಿರುವ ಸಭಾಧ್ಯಕ್ಷರು ಇನ್ನು ಇಬ್ಬರು ಶಾಸಕರ ರಾಜಿನಾಮೆಯನ್ನು ಯಾಕೆ ಅಂಗೀಕರಿಸಲಿಲ್ಲ ? ಇದು ಸಭಾಧ್ಯಕ್ಷರ ಪಕ್ಷಪಾತ ಧೋರಣೆಯ ನಗ್ನ ಪ್ರದರ್ಶನವಲ್ಲವೆ ? **ಏನಾದರೂ 'ಡೀಲಿಂಗಾ' ? ಅಥವಾ ಜಾತಿ ವಾಸನೆಯಾ ?**

ಜಗದೀಶ್‌ಶೆಟ್ಟರ್‌ರವರಿಗೆ ಯಾವುದೇ ಕಾರಣಕ್ಕೂ ತನ್ನ ಚೊಚ್ಚಲ ಬಜೆಟ್‌ನ್ನು ಮಂಡಿಸಲು ಅವಕಾಶ ಕೊಡುವುದಿಲ್ಲವೆಂದು ಹಟ ತೊಟ್ಟವರಂತೆ ಮಾತನಾಡುತ್ತಿದ್ದ ಯಡಿಯೂರಪ್ಪ ಕಡೆಯ ಗಳಿಗೆಯಲ್ಲಿ ಜಗದೀಶ್ ಶೆಟ್ಟರ್ ಬಡ್ಜೆಟ್ ಮಂಡಿಸಲು ತೊಂದರೆ ಇಲ್ಲ ಎಂದು ಹೇಳಿ ಸುಮ್ಮಾನಾಗಿದ್ದು ಏಕೆ? ಸರ್ಕಾರ ಉರುಳಿಸಲು ಬೇಕಾದ ಶಾಸಕರ ಬೆಂಬಲ ಇಲ್ಲದ್ದಕ್ಕಾ? ಅಥವಾ ಜಗದೀಶ್‌ಶೆಟ್ಟರ್



ಸರ್ಕಾರವನ್ನು ಉರುಳಿಸಿದರೆ ಯಾವ ಲಿಂಗಾಯುತ ಜನಾಂಗವನ್ನು ನಂಬಿಕೊಂಡು ಹೊಸಪಕ್ಷವನ್ನು ಕಟ್ಟಿದರೋ ಆ ಜನಾಂಗದವರು ಇನ್ನೊಬ್ಬ ಲಿಂಗಾಯುತ ಮುಖ್ಯಮಂತ್ರಿಯ ಸರ್ಕಾರವನ್ನು ಉರುಳಿಸಿದ ಅಪಖ್ಯಾತಿಗೆ ಒಳಗಾದರೆ ತನಗೆ ಕೈಕೊಡುವರು ಎಂಬ ಭಯದಿಂದಲಾ? ಅಥವಾ ಕೆಲವು ಮಾಧ್ಯಮಗಳಲ್ಲಿ ವರದಿಯಾಗಿರುವ ಪ್ರಕಾರ ಜಗದೀಶ್‌ಶೆಟ್ಟರ್‌ರೊಂದಿಗೆ 'ಡೀಲಿಂಗ್' ಏನಾದರೂ ಆಗಿದಿಯಾ? ಈ ಎಲ್ಲಾ ಪ್ರಶ್ನೆಗಳಿಗೂ ಯಡಿಯೂರಪ್ಪ ಉತ್ತರ ಕೊಡಬೇಕಾಗಿದೆ. ಇಲ್ಲದಿದ್ದರೆ ಹಿಂದೆ ಕೆಲ ಮುಖ್ಯಮಂತ್ರಿಗಳಾಗಿದ್ದವರು ಹೊಸಪಕ್ಷಗಳನ್ನು ಕಟ್ಟಿ ಇತಿಹಾಸದ ಕಸದ ಬುಟ್ಟಿಗೆ ಸೇರಿಹೋದಂತೆ ಕರ್ನಾಟಕದ ಜನತೆ ಯಡಿಯೂರಪ್ಪನನ್ನು ಕಸದ ಬುಟ್ಟಿಗೆ ಹಾಕುತ್ತಾರೆ.

ಕಾಂಗ್ರೆಸ್‌ನ ಅಸಹಾಯಕತೆ...

ಇನ್ನು "ಕೃಷ್ಣೆಯ ಕಡೆಗೆ ನಡಿಗೆ" "ಸಾಮರಸ್ಯದ ಕಡೆಗೆ ನಡಿಗೆ" ಎಂದು ತನ್ನ ಅಂತರಿಕ ಗುಂಪುಗಾರಿಕೆಗಳಿಂದ ಹೊರಬರಲಾಗದೆ ಬೀದಿಗೆ ಬಿದ್ದಿರುವ ಕಾಂಗ್ರೇಸ್ ಪಕ್ಷವೆಂಬ ಪ್ರಮುಖ ವಿರೋಧಪಕ್ಷ ಬಹುಮತವಿಲ್ಲದ ಸರ್ಕಾರ ಒಂದು ಅಕ್ರಮವಾಗಿ ಬಡ್ಜೆಟ್‌ನ್ನು ಮಂಡಿಸಲು ಮುಂದಾಗಿದ್ದರೆ ಏನನ್ನೂ ಮಾಡಲು ಸಾಧ್ಯವಾಗದ ಅಸಹಾಯಕ ಸ್ಥಿತಿಗೆ ತಲುಪಿದೆಯೇ? ಅಥವಾ ತನ್ನ ಸ್ವಯಂಕೃತಾಪರಾಧಗಳಿಂದಲೇ ಮರಣಶಯ್ಯೆಯಲ್ಲಿರವವರನ್ನು ಕೊಲೆ ಮಾಡಿದರೆ ಕರ್ನಾಟಕದ ಜನ ತಮ್ಮನ್ನು ಶಿಕ್ಷಿಸುತ್ತಾರೆ ಎಂಬ ಭಯದಿಂದಲೋ ಇನ್ನು ದಿನ ಬೆಳಗಾದರೆ ಟಿ.ವಿ.ಗಳ ಮುಂದೆ ಮತ್ತು ಮಾಧ್ಯಮಗಳ ಮುಂದೆ ಅಪ್ರಬುದ್ಧ ಅಸಂಬದ್ಧ ಹೇಳಿಕೆಗಳನ್ನು ಕೊಟ್ಟು ಒಂದು ರೀತಿ ಬ್ಲಾಕ್ ಮೇಲ್ ರಾಜಕಾರಣ ಮಾಡುತ್ತಿರುವ ಜೆಡಿ(ಎಸ್) ಪಕ್ಷ ಸುಮ್ಮನಿರಲು ಕಾರಣವೇನು? ಈ ಎರಡು ರಾಜಕೀಯ ಪಕ್ಷಗಳು ಕಳೆದ ನಾಲ್ಕೂವರೆ ವರ್ಷದಲ್ಲಿ ಒಂದೇ ಒಂದು ದಿನ ತಾವು ವಿರೋಧ ಪಕ್ಷವೆಂದು ರಾಜ್ಯದ ಜನತೆಗೆ ಸಾಬೀತು ಮಾಡಲಾರದೆ ಹೋದವು. ಇಡೀ ರಾಜ್ಯದ ಸಂಪತ್ತನ್ನು ಬಿಜೆಪಿಯೆಂಬ ಮಹಾನ್ ಭ್ರಷ್ಟ ಸರ್ಕಾರವು ಲೂಟಿ ಹೊಡೆಯುತ್ತಿದ್ದರೆ ಇವರು ಹೊಣೆಗೇಡಿಗಳ ರೀತಿಯಲ್ಲಿ ವರ್ತಿಸಿದರು. ಬಿಜೆಪಿಯ ಕೋಮುವಾದಿ ಫ್ಯಾಶಿಸ್ಟ್ ಪಕ್ಷವು ರಾಜ್ಯದ ಕೆಲವು ಭಾಗಗಳಲ್ಲಿ ಬಿಜೆಪಿ ಮತ್ತು ಸಂಘಪರಿವಾರದ ಶಕ್ತಿಗಳು ಕೋಮು ಗಲಭೆಗಳನ್ನು ಸೃಷ್ಟಿಸಿ ಭಯೋತ್ಪಾದಕರಂತೆ ಅಟ್ಟಹಾಸ ಮಾಡಿದಾಗಲೂ ತುಟಿ ಬಿಚ್ಚಲಿಲ್ಲ. ಕಳೆದ 3 ವರ್ಷಗಳಿಂದ ರಾಜ್ಯವು ಎಂದು ಕಾಣದ ಭೀಕರ ಅತಿವೃಷ್ಟಿ ಮತ್ತು ಬರಗಾಲಕ್ಕೆ ತುತ್ತಾಗಿದ್ದರೆ ಒಂದು ದಿವಸವೂ ಈ ಸರ್ಕಾರದ ವಿರುದ್ಧ ಶಾಸನ ಸಭೆಯ ಒಳಗಾಗಲೀ, ಹೊರಗಾಗಲೀ ಹೋರಾಟವನ್ನು ನಡೆಸಲಿಲ್ಲ. ಇದರ ಪರಿಣಾಮ ಇಡೀ ರಾಜ್ಯ ಮತ್ತು ರಾಜ್ಯದ ಜನತೆ ಕಂಗಾಲಾಗಿ ಹೋಗಿದ್ದಾರೆ. ಬಿಜೆಪಿ ಸರ್ಕಾರದ ಆಡಳಿತದ ಅವಧಿಯಲ್ಲಿ ಇಡೀ ರಾಜ್ಯವು ಆರ್ಥಿಕವಾಗಿ ದಿವಾಳಿ ಆಗಿದೆ. ಭ್ರಷ್ಟಾಚಾರದಲ್ಲಿ ಇಡೀ ದೇಶದಲ್ಲೇ ಒಂದನೇ ಸ್ಥಾನಕ್ಕೆ ಹೋಗಿದೆ. ಜನರ ಜೀವನ ಅಸ್ತವ್ಯಸ್ಥವಾಗಿದೆ. ಕಾನೂನಿನ ಪರಿಸ್ಥಿತಿ ಅರಾಜಕತೆ ಸ್ಥಿತಿಗೆ ತಲುಪಿ, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ದಬ್ಬಾಳಿಕೆ ಮತ್ತು ಸಾಮೂಹಿಕ ಅತ್ಯಾಚಾರಗಳು ನಡೆದು ಮಹಿಳೆಯರ ಮೇಲಿನ ದೌರ್ಜನ್ಯದಲ್ಲಿ ದೆಹಲಿಯ ನಂತರದ ಸ್ಥಾನಕ್ಕೆ ಹೋಗಿದೆ. ಇನ್ನೊಂದು ಕಡೆ ರೈತರು ಕೃಷಿಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರು ತಮ್ಮ ಬದುಕಿಗಾಗಿ ನಿರಂತರ ಹೋರಾಟಗಳನ್ನು ನಡೆಸಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಜನರ ಪಾಲಿಗೆ ಸರ್ಕಾರವೇ ಇಲ್ಲವಾಗಿದೆ. ಸರ್ಕಾರದ ಎಲ್ಲ ಹಂತದಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಯಾವ ಮಂತ್ರಿಯ ಮಾತುಗಳನ್ನೂ ಅಧಿಕಾರಿಗಳು ಕೇಳುತ್ತಿಲ್ಲ. ಮುಖ್ಯ ಮಂತ್ರಿಯ ಮಾತುಗಳನ್ನು ಮಂತ್ರಿಗಳು ಕೇಳುತ್ತಿಲ್ಲ. ರಾಜ್ಯ ಇಂತಹ ವಿಷಾದನೀಯ ಸ್ಥಿತಿ ತಲುಪಿದೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಎಂದೂ ಇಂತಹ ದು:ಸ್ಥಿತಿ ಬಂದಿರಲಿಲ್ಲ. ಬಿಜೆಪಿ ಎಂಬ ಫ್ಯಾಶಿಸ್ಟ್ ಪಕ್ಷವು ಪ್ರಜಾಪ್ರಭುತ್ವದ ಎಲ್ಲಾ ಮೌಲ್ಯಗಳನ್ನು ನಾಶಮಾಡಿ ಅಕ್ರಮಗಳಿಂದ ಅಧಿಕಾರಕ್ಕೆ ಬಂದು ಸಂಸದೀಯ ವ್ಯವಸ್ಥೆಯ ಎಲ್ಲಾ ಮೌಲ್ಯಗಳು, ರೀತಿ ರಿವಾಜುಗಳನ್ನು ಗಾಳಿಗೆ ತೂರಿ ಸಂಪತ್ತನ್ನು ಕೊಳ್ಳೆಹೊಡೆದಿದೆ.

ಕಾನೂನು ಬಾಹಿರ ಮತ್ತು ಅನೈತಿಕ

ಇಂತಹ ಸ್ಥಿತಿಯಲ್ಲಿ ಅಲ್ಪಮತಕ್ಕೆ ಬಿದ್ದಿರುವ ಸರ್ಕಾರ ಒಂದು ರಾಜ್ಯದ ಅಭಿವೃದ್ಧಿಗೆ ಸೂಚಕವಾದ ಅಯ-ವ್ಯಯವನ್ನು ಮಂಡಿಸುತ್ತಿದೆ. ಬಹುಮತವಿಲ್ಲದ ಸರ್ಕಾರವೊಂದು ಮಂಡಿಸಿದ ಅಯ-ವ್ಯಯ ಕಾನೂನು ಬಾಹಿರ ಮತ್ತು ಅನೈತಿಕ. ಇದಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಜಗದೀಶ್‌ಶೆಟ್ಟರ್ ಮಂಡಿಸುವ ಅಯ-ವ್ಯಯ ಕೇವಲ ಭ್ರಷ್ಟ ದಿವಾಳಿಕೋರ ಬಿಜೆಪಿ ಪಕ್ಷದ ಚುಣಾವಣಾ ಪ್ರಣಾಳಿಕೆಯಷ್ಟೆ ಆಗುತ್ತದೆ. ಬಡ್ಜೆಟ್ ಶಾಸನ ಸಭೆಯಲ್ಲಿ ಅಂಗೀಕಾರವಾದರೂ ಈ ಸರ್ಕಾರದ ಅವಧಿ ಇನ್ನು ಎರಡು ತಿಂಗಳು ಮಾತ್ರ. ಅಯ-ವ್ಯಯದಲ್ಲಿನ ಯಾವ ಅಂಶವನ್ನೂ ಜಾರಿ ಮಾಡಲು ಆಗುವುದಿಲ್ಲ. ಇದರಿಂದ ರಾಜ್ಯಕ್ಕೂ ಮತ್ತು ಜನತೆಗೂ ಯಾವ ಪ್ರಯೋಜನವೂ ಇಲ್ಲ. ಕಳೆದ ವರ್ಷ ಬಡ್ಜೆಟ್‌ನಲ್ಲಿ ತೋರಿಸಿದ್ದ 1 ಲಕ್ಷ 4 ಸಾವಿರ ಕೋಟಿ ರೂ.ಗಳ ಬಡ್ಜೆಟ್

ಪುಟ 10ಕ್ಕೆ

ಸೌಜನ್ಯ ಕೊಲೆ ಪ್ರಕರಣ ಸಿಬಿಐ ತನಿಖೆಗೆ ಆಗ್ರಹಿಸಿ ಧರಣಿ ಸತ್ಯಾಗ್ರಹ

ಕರ್ನಾಟಕದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿದ್ದು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ರಾಜ್ಯ ಸರಕಾರ ಸಂಪೂರ್ಣ ವಿಫಲವಾಗಿದೆ ಎಂದು ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿ ಉಪಾಧ್ಯಕ್ಷೆ ಗೀತಾ ಆರೋಪಿಸಿದರು. ಅವರು ಫೆಬ್ರವರಿ 4 ರಂದು ಬೆಳ್ತಂಗಡಿ ತಾಲೂಕು ಕಚೇರಿ ಮುಂದೆ ಡಿವೈಎಫ್ಐ ಬೆಳ್ತಂಗಡಿ ತಾಲೂಕು ಸಮಿತಿ ನೇತೃತ್ವದಲ್ಲಿ ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಸಿಬಿಐ ತನಿಖೆಗೆ ಒತ್ತಾಯಿಸಿ ನಡೆದ 24 ಗಂಟೆಗಳ ಹಗಲು-ರಾತ್ರಿ ಧರಣಿ ಸತ್ಯಾಗ್ರಹವನ್ನು ಫೆಬ್ರವರಿ 4 ರಂದು ಉದ್ಘಾಟಿಸಿ ಮಾತನಾಡಿದರು.

ಧರಣಿ ಸತ್ಯಾಗ್ರಹದಲ್ಲಿ ಹಲವಾರು ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಲೇಖಕಿ ಅಮೃತ ಶೆಟ್ಟಿ ಅತ್ರಾಡಿ, ಜೈ ಕನ್ನಡಮ್ಮ ವಾರಪತ್ರಿಕೆಯ ಸಂಪಾದಕ ದೇವಿಪ್ರಸಾದ್, ಡಿಎಸ್ಎಸ್ (ಅಂಬೇಡ್ಕರ್‌ವಾದ) ಜಿಲ್ಲಾ ಸಂಚಾಲಕ ಎಲ್.ಚಂದು, ಜಿಲ್ಲಾ ಸಂಘಟನಾ ಸಂಚಾಲಕ ಸಂಜೀವ. ಆರ್, ಪ್ರಗತಿಪರ ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಕಾರ್ಯದರ್ಶಿ ಬಿ.ಕೆ.ವಸಂತ ಮೊದಲಾದವರು ಭಾಗವಹಿಸಿ ಬೆಂಬಲ ಸೂಚಿಸಿದರು.

ದಲಿತ ಹಕ್ಕುಗಳ ತಾಲೂಕು ಸಮಿತಿ ಅಧ್ಯಕ್ಷ ಶೇಖರ ಲಾಯಿಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಿವೈಎಫ್ಐ ಬೆಳ್ತಂಗಡಿ ತಾಲೂಕು ಅಧ್ಯಕ್ಷ ಲೋಕೇಶ್ ಕುಲ್ಯಾಡಿ, ಕಾರ್ಯದರ್ಶಿ ಲೋರೆನ್ಸ್ ಕೈಕಂಭ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಸಿಪಿಐ(ಎಂ) ಮುಖಂಡರಾದ ಬಿ.ಎಂ.ಭಟ್, ಶಿವ ಕುಮಾರ್, ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.



ಪ್ರತಿಭಟನಾಕಾರರು ಬೆಳ್ತಂಗಡಿ ಮೂರು ಮಾರ್ಗದಿಂದ ಮೆರವಣಿಗೆಯಲ್ಲಿ ಹೊರಟು, ಘೋಷಣೆ ಕೂಗುತ್ತಾ ನಗರದ ಮುಖ್ಯ ರಸ್ತೆಗಳಲ್ಲಿ ಸಂಚರಿಸಿ, ತಾಲೂಕು ಕಚೇರಿಯ ಮುಂದೆ ಧರಣಿ ಆರಂಭಿಸಿದರು.

ಫೆಬ್ರವರಿ 5 ರಂದು 24 ಗಂಟೆಗಳ ಧರಣಿ ಸತ್ಯಾಗ್ರಹ ಕೊನೆಗೊಂಡಾಗ, ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ ಸಮಾರೋಪ ಭಾಷಣ ಮಾಡಿದರು. ಸೌಜನ್ಯಾ ಕೊಲೆ ಪ್ರಕರಣ ಸಿಬಿಐ ತನಿಖೆಗೆ ಒಳಪಡುವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಅವರು ಆಡಳಿತಕ್ಕೆ ಎಚ್ಚರಿಕೆ ನೀಡಿದರು.

ಆಹಾರ ಮರೀಚಿಕೆ – ಕೃಷ್ಣಪ್ಪ ಸಾಲ್ಯಾನ್ ಎಚ್ಚರಿಕೆ

ಆಹಾರ ಧಾನ್ಯಗಳ ಬೆಲೆ ದಿನ ಕಳೆದಂತೆ ಏರಿಕೆಯಾಗುತ್ತಿರುವುದರಿಂದ ಆಹಾರ, ವಸತಿ, ಉತ್ತಮ ಆರೋಗ್ಯ ಜನಸಾಮಾನ್ಯರಿಗೆ ಮರೀಚಿಕೆಯಾಗಲಿದೆ.



ಆಹಾರ ಪಡಿತರ ವ್ಯವಸ್ಥೆಯನ್ನು ಸಾರ್ವಜನಿಕಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಜನರು ಒತ್ತಾಯಿಸಿ ಚಳುವಳಿ ನಡೆಸಬೇಕಾಗಿದೆ ಎಂದು ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಕರೆ ನೀಡಿದರು.

ಅವರು ತೊಕ್ಕೊಟು ಜಂಕ್ಷನ್‌ನಲ್ಲಿ ಸಿಪಿಐ(ಎಂ) ಪಕ್ಷದ ವತಿಯಿಂದ ಪಡಿತರ ವ್ಯವಸ್ಥೆ ಸಾರ್ವಜನಿಕಗೊಳಿಸುವಂತೆ ಆಗ್ರಹಿಸುವ ಜನವರಿ ತಿಂಗಳ ಕೊನೆಯಲ್ಲಿ ನಡೆದ ಸಹಿ ಸಂಗ್ರಹ ಸಪ್ತಾಹದಲ್ಲಿ ಭಾಗವಹಿಸಿ ಮಾತನಾಡಿದರು.

ಡಿವೈಎಫ್ಐ ಉಳ್ಳಾಲ ವಲಯದ ಅಧ್ಯಕ್ಷ ಮಹಾಬಲ ದೆಪ್ಪಲಿಮಾರು, ಕಾರ್ಯದರ್ಶಿ ಅಶೋಕ್ ಶೆಟ್ಟಿ ಮತ್ತು ಉಳ್ಳಾಲ ವಲಯದ ಸಿಪಿಐ(ಎಂ) ಪಕ್ಷದ ಹಲವಾರು ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಹಲವು ಊರುಗಳಲ್ಲಿ ಸಹಿ ಸಂಗ್ರಹ ಸಪ್ತಾಹವನ್ನು ಸಿಪಿಐ(ಎಂ) ಮತ್ತು ಡಿವೈಎಫ್ಐ ಸಂಘಟನೆಗಳನ್ನು ಆಚರಿಸಿ ಜನಸಂಪರ್ಕ ಮಾಡುತ್ತಿರುವ ವರದಿಗಳು ಬಂದಿವೆ.

★

ತೊಕ್ಕೊಟಿನಲ್ಲಿ ದ.ಕ.ಜಿಲ್ಲಾ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಮ್ಮೇಳನ:

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಫೆಡರೇಶನ್ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ 2ನೇ ಸಮ್ಮೇಳನವು ಫೆಬ್ರವರಿ 3 ರಂದು ಉಳ್ಳಾಲದ ತೊಕ್ಕೊಟಿನಲ್ಲಿ ನಡೆಯಿತು. ಕಟ್ಟಡ ಕಾರ್ಮಿಕರ ಸಂಘದ ರಾಜ್ಯ ಫೆಡರೇಶನನ್ನಿನ ಅಧ್ಯಕ್ಷ ಬಿ.ಮಾಧವ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಟ್ಟಡ ಕಾರ್ಮಿಕರ ದ.ಕ.ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಎಂ.ಭಟ್ ವಹಿಸಿದ್ದರು.

ಬಿ.ಎಂ.ಭಟ್ ಅವರು ಮಾತನಾಡುತ್ತಾ, ನೆರಳು, ಶಿಕ್ಷಣ, ಆರೋಗ್ಯ, ಸಂಪತ್ತು ಹೀಗೆ ಭೂಮಿಯಲ್ಲಿರುವ ಜನರಿಗೆ ಸಿಗಬೇಕಾದ ಪ್ರತಿ ಸೌಕರ್ಯ-ವಸ್ತುವಿನ ಹಿಂದೆ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಶ್ರಮವಿದೆ. ಆದರೆ ಅವರಿಗೆ ಸೂಕ್ತ ಪ್ರತಿಫಲ ಸಿಗುತ್ತಿಲ್ಲ; ಸರ್ಕಾರದ ಬೊಕ್ಕಸಕ್ಕೆ ಕಾರ್ಮಿಕರು ತೆರಿಗೆ ರೂಪದಲ್ಲಿ ಕೋಟ್ಯಾಂತರ ರೂಪಾಯಿ ಸಂದಾಯ ಮಾಡುತ್ತಿದ್ದಾರೆ, ಕಟ್ಟಡ ಕಾರ್ಮಿಕರ ಮಕ್ಕಳಿಗಾಗಲೀ, ಮನೆ ಮಂದಿಗಾಗಲೀ ಯಾವುದೇ ಆಶ್ರಯ ನೀಡಲು ಸರ್ಕಾರ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನಿನ ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಕಾರ್ಯದರ್ಶಿಗಳಾದ ಸುನಿಲ್ ಕುಮಾರ್ ಬಜಾಲ್, ರಾಮಣ್ಣ ವಿಟ್ಲ, ಅಶೋಕ್ ಶೆಟ್ಟಿ, ಯೋಗೀಶ್ ಜಪ್ಪಿನಮೊಗ್ರು, ಗುಡ್ಡಪ್ಪ ರೈ, ಸಿಐಟಿಯು ಉಳ್ಳಾಲ ವಲಯ ಅಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಸ್ವಾಗತ ಸಮಿತಿಯ ಗೌರವಾಧ್ಯಕ್ಷ ಸುಂದರ ಅಮೀನ್ ತೊಕ್ಕೋಟು, ಅಧ್ಯಕ್ಷ ಸುರೇಶ್ ಬಿ.ಸಾಲ್ಯಾನ್ ತೊಕ್ಕೋಟು, ಉಳ್ಳಾಲ ವಲಯ ಕಟ್ಟಡ ನಿರ್ಮಾಣ ಕಾರ್ಮಿಕ ಸಂಘದ ಅಧ್ಯಕ್ಷ ಶಶೀಂದ್ರ ಕುಕ್ಯಾನ್, ಯು.ಜಯಂತ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಸಾಯಂಕಾಲ ತೊಕ್ಕೋಟು ಜಂಕ್ಷನ್‌ನಿಂದ ಅಂಬೇಡ್ಕರ್ ಮೈದಾನದವರೆಗೆ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ರ್‍ಯಾಲಿ, ಬಳಿಕ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಬಿ.ಮಾಧವ, ಬಿ.ಎಂ.ಭಟ್ ಮಾತನಾಡಿದರು.



ಮತ್ತೊಮ್ಮೆ ಅಸಹಿಷ್ಣುತೆಯ ಅಲೆ

2004 ರ ಸಾರ್ವತ್ರಿಕ ಚುನಾವಣೆಗಳ ಮೊದಲು ಕರ್ಕಶ ಕೋಮುವಾದಿ ಮತ್ತು ಧಾಮಿಕ ಅಸಹಿಷ್ಣುತೆಯದ್ದೇ ಮೇಲುಗೈಯಿತ್ತು. ಆ ಚುನಾವಣಾ ತೀರ್ಪಿನೊಂದಿಗೆ ಇವೆಲ್ಲ ಬದಲಾಗಿ ಚರ್ಚೆಗಳು ಜನತೆಯ ಬದುಕಿನ ಮೇಲೆ ನೇರ ಮತ್ತು ಗಂಭೀರ ಪರಿಣಾಮ ಬೀರುವ ವಿಷಯಗಳ ಮೇಲೆ ನಡೆಯಲಾರಂಭಿಸಿದವು. ಆದರೆ ಈಗ ಮತ್ತೊಮ್ಮೆ ದೇಶದಲ್ಲೆಲ್ಲ ಸಾಂಸ್ಕೃತಿಕ ಮತ್ತು ಧಾರ್ಮಿಕ ಅಸಹಿಷ್ಣುತೆಯ ಅಲೆಗಳು ಎದ್ದಿರುವಂತೆ ಕಾಣುತ್ತದೆ. ಇಂತಹ ಸನ್ನಿವೇಶದಲ್ಲಿ ಆರೆಸ್ಸೆಸ್ ನೇತೃತ್ವದ ಬಿಜೆಪಿ ದಿಲ್ಲಿಯಲ್ಲಿ ಸರಕಾರದ ಲಗಾಮನ್ನು ಮತ್ತೆ ಪಡೆಯಲು ಕೋಮುವಾದಿ ಭಾವೋದ್ರೇಕಗಳನ್ನು ಬಡಿದೆಬ್ಬಿಸಲು ಮತ್ತೆ ತನ್ನ ಹಿಂದುತ್ವ ಅಜೆಂಡಾಕ್ಕೆ ಆತು ಕೊಳ್ಳಲು ಸಿದ್ಧವಾಗುತ್ತಿದೆ. ನಮ್ಮ ದೇಶಕ್ಕಾಗಿ, ಮತ್ತು ನಮ್ಮ ಜನತೆಯ ಒಳಿತಿಗಾಗಿ, ಇಂತಹ ಕೋಮುವಾದಿ ಧ್ರುವೀಕರಣವನ್ನು ನಿರ್ಣಾಯಕವಾಗಿ ಸೋಲಿಸಬೇಕಾಗಿದೆ.


ಸೀತಾರಾಂ ಯೆಚೂರಿ

ಎಲ್ಲ ಭವಿಷ್ಯವಾಣಿಗಳು ಮತ್ತು ಅಭಿಪ್ರಾಯ ಸಂಗ್ರಹಗಳನ್ನು ಹುಸಿಗೊಳಿಸಿ ನಮ್ಮ ದೇಶದ ಮತದಾರರು 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ಒಂದು ನಿರ್ಣಾಯಕ ತೀರ್ಪು ಡಿದರು-ದೇಶದಲ್ಲಿ ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಕೂಟ ಸರಕಾರ ರಚಿಸಬೇಕು ಎಂದು. ಬಿಜೆಪಿ ನೇತೃತ್ವದ ಕೋಮುವಾದಿ ಶಕ್ತಿಗಳು "ಹೊಳೆಯುತ್ತಿರುವ ಭಾರತ" ಮತ್ತು "ಫೀಲ್ ಗುಡ್"(ಒಳ್ಳೆಯ ಭಾವನೆ) ಎಂದು ಭರದ ಪ್ರಚಾರ ನಡೆಸಿದರೂ ಮತದಾರರು ಅವರನ್ನು ಸೋಲಿಸಿದರು. ಎನ್‌ಡಿಎ ಆಗ ತನ್ನ ವಿಜಯದ ಬಗ್ಗೆ ಎಂತಹ ಭರವಸೆಯನ್ನು ಹೊಂದಿತ್ತೆಂದರೆ, ತನ್ನ ಅಧಿಕಾರದ ಅವಧಿ ಇನ್ನೂ ಇದ್ದರೂ ಚುನಾವಣೆಗಳನ್ನು ಕೆಲವು ತಿಂಗಳ ಮೊದಲೇ ನಡೆಸಿತು. ಮತದಾರರ ತೀರ್ಪು ಹೇಗಿತ್ತೆಂದರೆ, ಎಡಪಕ್ಷಗಳ ನಿರ್ಣಾಯಕ ಬೆಂಬಲದಿಂದ ಮಾತ್ರವೇ ಒಂದು ಜಾತ್ಯಾತೀತ ಸರಕಾರ ಸಾಧ್ಯವಿತ್ತು. ಎಡಪಕ್ಷಗಳು ಒಂದು ಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ದ ಆಧಾರದಲ್ಲಿ ಸರಕಾರ ರಚಿಸಲು ಯುಪಿಎಗೆ ಬೆಂಬಲ ನೀಡಲು ನಿರ್ಧರಿಸಿದವು.

ಈ ತೀರ್ಪಿನ ಒಂದು ಪರಿಣಾಮ ಬಹಳ ಮಹತ್ವದ್ದಾಯಿತು. ದೇಶದ ರಾಜಕೀಯ ಸಂವಾದದ ಮಾದರಿಯಲ್ಲಿ ಒಂದು ನಾಟಕೀಯ, ಸ್ವಾಗತಾರ್ಹ ಪಲ್ಲಟವನ್ನು ತಂದ ಅಂಶವಿದು. ಆ ವೇಳೆಯಲ್ಲಿ ಕರ್ಕಶ ಕೋಮುವಾದಿ ಮತ್ತು ಧಾರ್ಮಿಕ ಅಸಹಿಷ್ಣುತೆಯದ್ದೇ ಮೇಲುಗೈಯಿತ್ತು. ದೇಶವಿನ್ನೂ ಗುಜರಾತಿನ ಕೋಮುವಾದಿ ನರಹತ್ಯಾಕಾಂಡದ ಗಂಭೀರ ಗಾಯಗಳನ್ನು ಸವರುತ್ತಿತ್ತು, ಪಾಕಿಸ್ತಾನೀ ಗಝಲ್ ಗಾಯಕ ಗುಲಾಂ ಅಲಿ ಮುಂಬಯಿಯಲ್ಲಿ ಹಾಡುವ ಕಾರ್ಯಕ್ರಮವನ್ನು ನಿಲ್ಲಿಸಲು ಹೊಲಸು ಪ್ರಚಾರ ನಡೆಯುತ್ತಿತ್ತು, ಪಾಕಿಸ್ತಾನಿ ಕ್ರಿಕೆಟ್ ತಂಡ ಭಾರತದಲ್ಲಿ ಆಡುವುದನ್ನು ತಡೆಯಲು ಶಿವಸೇನೆ ಪಿಚ್‌ಗಳನ್ನು ಅಗೆದು ಹಾಕಿತ್ತು, ವಿಧವಾ ವಿವಾಹ ಮುಂತಾದವುಗಳ ಕುರಿತ ಚಿತ್ರಗಳ ಮೇಲೆ ನಿಷೇಧ ಇತ್ಯಾದಿಗಳೆಲ್ಲ ದೇಶವನ್ನು ಆವರಿಸಿದ್ದ ಕಾಲಘಟ್ಟವದು.

2004ರ ಚುನಾವಣಾ ತೀರ್ಪಿನೊಂದಿಗೆ ಇವೆಲ್ಲ ಬದಲಾಗಿ ಚರ್ಚೆಗಳು ಜನತೆಯ ಬದುಕಿನ ಮೇಲೆ ನೇರ ಮತ್ತು ಗಂಭೀರ ಪರಿಣಾಮ ಬೀರುವ ವಿಷಯಗಳ ಮೇಲೆ ನಡೆಯುಲಾರಂಭಿಸಿದವು- ಗ್ರಾಮೀಣ ಉದ್ಯೋಗ ಭರವಸೆ, ಅರಣ್ಯ ಭೂಮಿಯ ಮೇಲೆ ಬುಡಕಟ್ಟು ಜನಗಳ ಹಕ್ಕು, ಮಾಹಿತಿ ಹಕ್ಕು, ಸಾಲಗ್ರಸ್ತ ರೈತರಿಗೆ ಸಾಲಮನ್ನಾ ಮುಂತಾದ ವಿಷಯಗಳ ಮೇಲೆ. ಇಂತಹ ಹಲವು ಜನ-ಪರ ಪ್ರಶ್ನೆಗಳ ಮೇಲೆ ಯುಪಿಎ ಸರಕಾರ ಮಹತ್ವದ ಧೋರಣೆಯ ನಿರ್ಣಯಗಳನ್ನು ಜಾರಿಗೊಳಿಸುವಂತೆ ಎಡಪಕ್ಷಗಳು ಒತ್ತಡ ತಂದವು. ಅದೇ ರೀತಿ ದೇಶ ತನ್ನ ಅಮೂಲ್ಯ ಸಾರ್ವಜನಿಕ ಆಸ್ತಿಗಳನ್ನು ಕಳಕೊಳ್ಳದಂತೆ ತಡೆಯಲಾಯಿತು, ಹಣಕಾಸು ಉದಾರೀಕರಣದ ಧೋರಣೆಗಳಿಗೆ ಎಡಪಕ್ಷಗಳ ವಿರೋಧದಿಂದಾಗಿ ದೇಶ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಜೂಜುಕೋರತನಕ್ಕೆ ಬಲಿಯಾಗದಂತೆ ತಡೆಯಲು ಸಾಧ್ಯವಾಯಿತು.

ದುರದೃಷ್ಟವಶಾತ್, ಇತಿಹಾಸ ಈಗ ಒಂದು ಪೂರ್ಣ ಸುತ್ತು ತಿರುಗಿರುವಂತೆ ಕಾಣುತ್ತಿದೆ. ಮತ್ತೊಮ್ಮೆ ದೇಶದಲ್ಲೆಲ್ಲ ಸಾಂಸ್ಕೃತಿಕ ಮತ್ತು



ಧಾರ್ಮಿಕ ಅಸಹಿಷ್ಣುತೆಯ ಅಲೆಗಳು ಎದ್ದಿರುವಂತೆ ಕಾಣುತ್ತದೆ. ಇತ್ತೀಚೆಗೆ ವಿಶ್ವ ಹಿಂದೂ ಪರಿಷದ್‌ನ ಮುಖಂಡ ಕೋಮುದ್ವೇಷದ ವಿಷ ಕಾರಿದ್ದಾರೆ. ಒಂದು ತಿಂಗಳ ಮೊದಲು, ಡಿಸೆಂಬರ್ 22, 2012 ರಂದು ಆಂಧ್ರಪ್ರದೇಶದ ಆದಿಲಾಬಾದ್ ಜಿಲ್ಲೆಯ ನಿರ್ಮಲ್ ಪಟ್ಟಣದಲ್ಲಿ ಎಂಐಎಂ(ಮಜ್ಲಿಸ್-ಎ-ಇತ್ತೆಹಾದುಲ್-ಮುಸಲ್‌ಮೀನ್)ನ ಶಾಸಕ ಅಕ್ಬರುದ್ದೀನ್ ಓವೈಸಿ ಉದ್ರೇಕಕಾರಿ ದ್ವೇಷಭಾಷಣ ಮಾಡಿದರು. ಈಗ ಆತನ ಬಂಧನವಾಗಿದೆ. ಜನವರಿ 22, 2013ರಂದು ಪ್ರವೀಣ್ ತೊಗಾಡಿಯ, ವಿಹೆಚ್‌ಪಿ ಮುಖಂಡ, ತನ್ನ ದ್ವೇಷಭಾಷಣವನ್ನು ಅರ್ಪಿಸಿದ್ದಾರೆ, ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಭೋಕರ್ ಎಂಬಲ್ಲಿ. ಇದು ನಿರ್ಮಲ್ ಪಟ್ಟಣದಿಂದ ಕೇವಲ 80 ಕಿ.ಮೀ. ದೂರದಲ್ಲಿರುವ ಇನ್ನೊಂದು ಪಟ್ಟಣ. ಕಳೆದ ವಾರ ಈ ಅಂಕಣದಲ್ಲಿ ಹೇಳಿದಂತೆ, ಕೋಮುವಾದ ಮತ್ತು ಮೂಲಭೂತವಾದ ಪರಸ್ಪರ ಪೋಷಿಸುತ್ತವೆ, ತನ್ಮೂಲಕ ಒಂದು ಇನ್ನೊಂದರ ಶಕ್ತಿ ಹೆಚ್ಚಿಸುತ್ತವೆ, ಆದರೆ ಈ ಪ್ರಕ್ರಿಯೆಯಲ್ಲಿ ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ ಅಡಿಗಲ್ಲನ್ನೇ ನಾಶಪಡಿಸುತ್ತವೆ.

ಸಾಂಸ್ಕೃತಿಕ ಕ್ಷೇತ್ರದಲ್ಲೂ

ಕಲೆ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲೂ ಇಂತಹುದೇ ಅಸಹಿಷ್ಣುತೆ ಹೆಚ್ಚುತ್ತಿದೆ. ಕಮಲ್ ಹಾಸನ್‌ರ ಚಿತ್ರ 'ವಿಶ್ವರೂಪಂ'ನ್ನು ತಮಿಳುನಾಡು ರಾಜ್ಯದಲ್ಲಿ ನಿಷೇಧಿಸಲಾಯಿತು. ನಂತರ ಈ ಚಿತ್ರಕ್ಕೆ ಆಕ್ಷೇಪಗಳನ್ನು ಎತ್ತಿದ್ದ ಕೆಲವು ವಿಭಾಗಗಳೊಂದಿಗೆ ಚಿತ್ರ ತಯಾರಿಸಿದವರು ಕೆಲವು ರಾಜಿ ಮಾಡಿಕೊಂಡು ಪ್ರದರ್ಶನಕ್ಕೆ ಬಿಡುಗಡೆಯಾಗಿದೆ. ಇದು ಒಂದು ಚಿತ್ರವನ್ನು ಸೆನ್ಸಾರ್ ಮಂಡಳಿ ಪ್ರದರ್ಶನಕ್ಕೆ ಅನುಮತಿ ನೀಡಿದ ಮೇಲೆ ನಿಷೇಧಿಸುವ ಗಂಭೀರ ಪ್ರಶ್ನೆಯನ್ನು ಎತ್ತಿದೆ.


ಶ್ರೀನಗರದಲ್ಲಿ ಹುಡುಗಿಯರ ರಾಕ್ ಸಂಗೀತ ತಂಡ 'ಪ್ರಾಗಾಷ್' ಅಲ್ಲಿಯ ಮಹಾ ಮೌಲ್ವಿ ಮುಫ್ತಿ ಬಶೀರ್-ಉದ್-ದೀನ್ ರ ಫತ್ವಾದ ಬೆದರಿಕೆಯ ನಂತರ ತನ್ನನ್ನು ವಿಸರ್ಜಿಸಿಕೊಂಡಿತು. ಇದು 'ಧರ್ಮನಿಂದಕ ಚಟುವಟಿಕೆ' ಎಂಬುದು ಆತನ ಆದೇಶ.

ಪಶ್ಚಿಮ ಬಂಗಾಲದಲ್ಲಿ ಅಲ್ಲಿನ ಮುಖ್ಯಮಂತ್ರಿಯ ನಿರ್ದೇಶನದಂತೆ ನಡೆದದ್ದು ಉತ್ತರಪ್ರದೇಶದಲ್ಲಿ ಪುನರಾವರ್ತನೆಗೊಂಡಿದೆ. ಆಗ್ರಾದಲ್ಲಿ ಪೋಲೀಸರು ಒಬ್ಬ ವ್ಯಕ್ತಿಯನ್ನು ಪ್ರಧಾನ ಮಂತ್ರಿಗಳು ಮತ್ತು ಸಮಾಜವಾದಿ ಪಕ್ಷದ ಮುಖ್ಯಸ್ಥ ಮುಲಾಯಂ ಸಿಂಗ್ ಯಾದವ್ ಸೇರಿದಂತೆ ರಾಜಕೀಯ ಮುಖಂಡರ 'ಅಸಹ್ಯ' ವ್ಯಂಗ್ಯಚಿತ್ರಗಳನ್ನು ಅಂತರ್ಜಾಲದಲ್ಲಿ ಹಾಕಿದ ಆರೋಪದ ಮೇಲೆ ಬಂಧಿಸಲಾಗಿದೆ.

ನವದೆಹಲಿಯಲ್ಲಿ ನವ್ಯ ನಗ್ನ ಕಲೆಯ ಒಂದು ಸಂಸ್ಮರಣಾ ಪ್ರದರ್ಶನವನ್ನು ವಿಹೆಚ್‌ಪಿಯ ಮಹಿಳಾ ವಿಭಾಗ, 'ದುರ್ಗಾವಾಹಿನಿ' ನಡೆಸಿದ ಪ್ರತಿಭಟನೆಯಿಂದಾಗಿ ಗ್ಯಾಲರಿಯವರು ತಾತ್ಕಾಲಿಕವಾಗಿ ಮುಚ್ಚಿದರು. ಅಮೃತಾ ಶೇರ್-ಗಿಲ್, ರಾಜಾ ರವಿ ವರ್ಮ, ಅಂಜೊಲಿ-ಇಳಾ ಮೆನನ್, ಎಂ.ಎಫ್.ಹುಸೇನ್, ಜೋಗೆನ್ ಚೌಧುರಿ ಮುಂತಾದ ಅಂತರ್ರಾಷ್ಟ್ರೀಯ ಖ್ಯಾತಿಯ ಭಾರತೀಯ ಚಿತ್ರಕಾರರ ಕೃತಿಗಳ ಪ್ರದರ್ಶನವದು.

ಅದೇ ರೀತಿ ಬೆಂಗಳೂರಿನಲ್ಲಿ, ಒಬ್ಬ ದಿಲ್ಲಿಯ ಕಲಾವಿದ ಮೂರು ಹಿಂದೂ ದೇವ-ದೇವಿಯರ ಚಿತ್ರಕೃತಿಗಳನ್ನು ತೆಗೆಯಬೇಕಾಯಿತು, ಕರ್ನಾಟಕದ ಈಗಿನ ಖ್ಯಾತಿಯ 'ಸಂಸ್ಕೃತಿ ಪೋಲೀಸರು' ಅವು ಆಕ್ಷೇಪಾರ್ಹ ಎಂದು ಪರಿಗಣಿಸಿದ್ದರಿಂದ. ಈ ಪ್ರದರ್ಶನವನ್ನು ಒಂದು ದಿನದ ಹಿಂದೆ ಕರ್ನಾಟಕದ ರಾಜ್ಯಪಾಲ ಹೆಚ್.ಆರ್. ಭಾರದ್ವಾಜ್ ಉದ್ಘಾಟಿಸಿದ್ದರು.

ಪಶ್ಚಿಮ ಬಂಗಾಲ ಸರಕಾರ ಅಂತರ್ರಾಷ್ಟ್ರೀಯ ಖ್ಯಾತಿಯ ಲೇಖಕ, ಸಲ್ಮಾನ್ ರಶ್ದಿ ಒಂದು ಸಾಹಿತ್ಯೋತ್ಸವದಲ್ಲಿ ಪಾಲ್ಗೊಳ್ಳಲು ಕೊಲ್ಕತಾಕ್ಕೆ ಭೇಟಿ ನೀಡುವುದನ್ನು ತಡೆದಿದೆ. ಇದುವರೆಗೆ ತನ್ನ ಈ ನಿರ್ಣಯಕ್ಕೆ ಯಾವುದೇ ಆಧಾರವನ್ನು ಶ್ರುತಪಡಿಸಿಲ್ಲ. ತನ್ನ ಸಮರ್ಥನೆಗೆ ಅದು ಹಿಂದಿನ ಎಡರಂಗ ಸರಕಾರ ಬಾಂಗ್ಲಾದೇಶಿ ಲೇಖಕಿ ತಸ್ಲಿಮಾ ನಸ್ರೀನ್‌ರೊಂದಿಗೆ ನಡೆದುಕೊಂಡ ರೀತಿಯನ್ನು ಉದಾಹರಿಸಿದೆ. ಎಂದಿನಂತೆ, ಟಿಎಂಸಿ ನಿಜಸಂಗತಿಗಳೇನೆಂದು ಹೇಳ ಹೋಗಿಲ್ಲ. ತಸ್ಲಿಮಾ ನಸ್ರೀನ್ ಕೊಲ್ಕತಾಕ್ಕೆ ಬಂದರು. ಅವರನ್ನು ಎಡರಂಗ ಸರಕಾರ ತಡೆಯಲಿಲ್ಲ. ಅವರ ಪುಸ್ತಕ ಬಾಂಗ್ಲಾದೇಶಿ ಪ್ರಕಟಣೆಯಲ್ಲಿ ಇಲ್ಲದ ಕೆಲವು ವಿಭಾಗಗಳೊಂದಿಗೆ ಪ್ರಕಟವಾದಾಗ ಪ್ರತಿಭಟನೆಗಳು ಎದ್ದು ಬಂದವು. ಅಂತಿಮವಾಗಿ, ವ್ಯಾಪಕ ಹಿಂಸಾಚಾರವನ್ನು ತಡೆಯಲು ರಾಜ್ಯ ಸರಕಾರ ಸೇನೆಯನ್ನು ಕರೆಯಬೇಕಾಯಿತು.



ಪರಿಸ್ಥಿತಿ ಇಂತಹ ಪ್ರಮಾಣ ತಲುಪಿದಾಗಲಷ್ಟೇ, ರಾಜ್ಯಸರಕಾರದ ಎಲ್ಲ ಪ್ರಯತ್ನಗಳು, ಪ್ರತಿಭಟನಾಕಾರರೊಂದಿಗೆ ಮಾತುಕತೆಗಳು ವಿಫಲವಾದ ನಂತರವೇ ಎಡರಂಗ ಸರಕಾರ, ರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆಗಾಗಿ ಆಕೆಯನ್ನು ಕೊಲ್ಕತಾದಿಂದ ಬೇರೆಡೆಗೆ ವರ್ಗಾಯಿಸುವಂತೆ ಕೇಂದ್ರ ಸರಕಾರಕ್ಕೆ ಸೂಚಿಸಿತು. ಈಗಿನ ಸಂದರ್ಭದಲ್ಲಿ, ಇಂತಹ ಯಾವುದೇ ಪ್ರಯತ್ನಗಳನ್ನು ನಡೆಸದೆ ಅಥವ ರಾಜ್ಯ ಸರಕಾರದ ಸಂದೇಹಗಳನ್ನು ಸಾರ್ವಜನಿಕರ ಗಮನಕ್ಕೆ ತರದೆ, ಸಲ್ಮಾನ್ ರಶ್ದಿಯವರು ಕೊಲ್ಕತಾಕ್ಕೆ ಬರುವುದೇ ಬೇಡ ಎಂದು ಹೇಳಲಾಗಿದೆ.

ಪುಟ 10ಕ್ಕೆ




ಇಂದಿನ ಸಾಂಸ್ಕೃತಿಕ ಸಂದರ್ಭ ಮತ್ತು ಸವಾಲುಗಳು



ಜಿ.ಎನ್. ನಾಗರಾಜ್

79 ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವ ಈ ಸಮಯದಲ್ಲಿ ಕನ್ನಡ ಸಾಹಿತ್ಯದ ಸಂದರ್ಭದ ಬಗ್ಗೆ, ಅದು ಇಂದು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಚಿಂತಿಸಬೇಕಾಗಿದೆ. ಇಂದು ಸಾಹಿತ್ಯದಲ್ಲಿ ಬಂಡಾಯ-ದಲಿತ, ನವ್ಯ ಮೊದಲಾದ ಯಾವ ಚಳುವಳಿಯೂ ಇಲ್ಲ. ಆದ್ದರಿಂದ ಯಾವ ಒತ್ತಡವೂ ಇಲ್ಲದೆ ಯಾರು ಏನು ಬೇಕಾದರೂ ಬರೆಯಬಹುದು ಎಂಬ ಮುಕ್ತ ವಾತಾವರಣವಿದೆ. ಇದೇ ನೈಜ ಸಾಹಿತ್ಯ ಸೃಷ್ಟಿಗೆ ಅನುಕೂಲ ಪರಿಸ್ಥಿತಿ ಎಂಬ ಮಾತುಗಳೂ ಕೇಳಿ ಬರುತ್ತಿವೆ. ಆಧುನಿಕೋತ್ತರವಾದ, ದೇಶೀವಾದ, ಕೋಮುವಾದ, ಅಸ್ಮಿತೆಯವಾದ ಅಥವಾ ಐಡೆಂಟಿಟಿವಾದ ಇಂತಹ ಕೆಲವು ವಾದಗಳು ಸಾಹಿತ್ಯ ಚರ್ಚೆಯ ಸಂದರ್ಭಗಳಲ್ಲಿ ಕೇಳಿ ಬರುತ್ತದೆ.

ಅದೇ ಸಂದರ್ಭದಲ್ಲಿ ಮೆರೆಯುತ್ತಿರುವ ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರ, ಕಾಂಗ್ರೆಸ್ ಪಕ್ಷದ ವಿರಾಟ್ ಭ್ರಷ್ಟಾಚಾರ ಪ್ರಜ್ಞಾವಂತ ಜನರನ್ನು ಬೆಚ್ಚಿ ಬೀಳಿಸಿದೆ. ಈ ಪ್ರಮಾಣದ ಭ್ರಷ್ಟಾಚಾರಕ್ಕೆ ಕಾರಣಗಳೇನು? ಅದರ ನಿಯಂತ್ರಣ ಹೇಗೆ ? ಈ ಬಗ್ಗೆ ಆಳವಾದ ಅಧ್ಯಯನವಿಲ್ಲದೆ ಕೇವಲ ಮೇಲು ಮೇಲಿನ ವಾಖ್ಯಾನಗಳಲ್ಲಿ, ತಕ್ಷಣಕ್ಕೆ ತಮ್ಮ ಸಿಟ್ಟು, ರೊಚ್ಚುಗಳನ್ನು ಹೊರಹಾಕುವುದರಲ್ಲಿ ತೃಪ್ತರಾಗುತ್ತಿದ್ದಾರೆ.



ಕುವೆಂಪು



ದೇವನೂರು ಮಹದೇವ



ಬರಗೂರು ರಾಮಚಂದ್ರಪ್ಪ

ಜೊತೆಗೆ ರಾಜ್ಯದ ರಾಜಕೀಯದಲ್ಲಿ ಆಗುತ್ತಿರುವ ಬೆಳವಣಿಗೆಗಳು, ಒಡಕುಗಳು ಸಾಹಿತಿಗಳನ್ನು ದಿಕ್ಕುಗೆಡಿಸಿದೆ. ಪ್ರಗತಿಪರ ಸಾಹಿತಿಗಳೆನ್ನಿಸಿ ಕೊಂಡಿರುವವರೂ ಕೂಡ ಇಂದಿನ ಸಂದರ್ಭದಲ್ಲಿ ಪ್ರಗತಿ ಎಂದರೇನೆಂದು ನಿರ್ವಚಿಸಿಕೊಳ್ಳುವುದರಲ್ಲಿ ಸೋತಿರುವ ಅನೇಕ ಉದಾಹರಣೆಗಳನ್ನು ಕಾಣುತ್ತಿದ್ದೇವೆ.

ಕೋಮುವಾದಿ ಶಕ್ತಿಗಳು ರಾಜ್ಯವನ್ನು ನಾಲ್ಕಾರು ವರ್ಷಗಳಿಂದ ಆಳುತ್ತಿರುವ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ಮೂಢ ನಂಬಿಕೆಗಳನ್ನು ಪ್ರೋತ್ಸಾಹಿಸುವ, ಪುರೋಹಿತಶಾಹಿಯನ್ನು ಎತ್ತಿಹಿಡಿಯುವ, ಜಾತೀವಾದವನ್ನು ಬೆಳೆಸುವ ನಿರಂತರ ಪ್ರಯತ್ನದಲ್ಲಿ ತೊಡಗಿದ್ದಾರೆ. ಇವುಗಳ ಭಾಗವಾಗಿಯೇ ಮಠ ಮಾನ್ಯಗಳಿಗೆ ಹಣ, ಅವರ ಮೇಲೆ ಸರ್ಕಾರದ ಅವಲಂಬನೆ. ಸಂಘ ಪರಿವಾರದ

ವಚನಕಾರರ ನಾಡು... ಬರದ ಬೀಡು...

ವಚನಕಾರ ಬಸವಣ್ಣನವರು ಜನಿಸಿದ, ತಮ್ಮ ಜಾತಿ ಸೂತಕದ ಸಂಕೇತವಾದ ಜನಿವಾರವನ್ನು ಕಿತ್ತೆಸೆದ ಬಿಜಾಪುರ ಜಿಲ್ಲೆಯಲ್ಲಿ 79 ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಸರಿಸುಮಾರು ಅದೇ ಸಮಯದಲ್ಲಿ ಬಿಜಾಪುರದಲ್ಲಿದ್ದು ಕೊಂಡೇ ಇಡೀ ದೇಶದ ಗಮನವನ್ನು ಸೆಳೆದುಕೊಂಡ ಪ್ರತಿಭಾಶಾಲಿಯಾಗಿದ್ದ ಗಣಿತ ಶಾಸ್ತ್ರಜ್ಞ 'ಲೀಲಾವತಿ' ಗ್ರಂಥದ ಕರ್ತೃ ಭಾಸ್ಕಾರಾಚಾರ್ಯರನ್ನೂ ನೆನಪಿಸಿಕೊಳ್ಳಬೇಕು. ಇವುಗಳ ಜೊತೆಗೆ ಒಂದು ಕಡೆ ಚಾಲುಕ್ಯ ಸಾಮ್ರಾಟರ ಮತ್ತೊಂದು ಕಡೆ ಆದಿಲ್‌ಶಾಹಿ ಸುಲ್ತಾನರ ವಾಸ್ತು ಶಿಲ್ಪಗಳು ಅದಕ್ಕಾಗಿ ತಮ್ಮ ಜೀವವನ್ನೇ ತೇಯ್ದ ಶಿಲ್ಪಿಗಳು, ತಂತ್ರಜ್ಞರು ಕನ್ನಡ ನಾಡಿನ ಸಂಸ್ಕೃತಿಯ ಹಿರಿಮೆಯನ್ನು ಅಜಂತಾ, ಎಲ್ಲೋರಗಳಲ್ಲಿ ಹೈದರಾಬಾದ್, ಗೋಲ್ಕೊಂಡಾಗಳಲ್ಲಿ, ದೇಶದ ಇತರೆಡೆಗಳಲ್ಲಿ ಮೆರೆದ ಹಿರಿಮೆಯೂ ಬಿಜಾಪುರದ ನಾಡಿಗಿದೆ.

ಇಂತಹ ಹೆಮ್ಮೆಯ ಬಿಜಾಪುರ ನಾಡು ಇಂದು ಕರ್ನಾಟಕದಲ್ಲಿ ಹಿಂದುಳಿದ ಪ್ರದೇಶವೆಂದು ಪರಿಗಣಿಸಲ್ಪಡುವಂತಹ ದುಸ್ಥಿತಿಗೆ ಈಡಾಗಿದೆ.

'ಒಲವಿನಲಿ ಬೆರೆದಿರೆ ಮಲಪ್ರಭೆ ವರ ಸಹೋದರಿ ಕೃಷ್ಣೆಯು ಸಲಿಲ ಸಂಗಮ ಪರಿಹರಿಸಿಹುದು ಬಯಲ ಸೀಮೆಯ ತೃಷ್ಣೆಯ' ಎಂದು ಕವಿಗಳು ಹಾಡಿ ಹೊಗಳಿದ ನಾಡು ಇಂದು ಬರದ ಬೀಡಾಗಿದೆ. ಕನ್ನಡ ನಾಡಿಗೆಲ್ಲ ನೀರೆರೆವ ಕೃಷ್ಣಾ, ಮಲಪ್ರಭಾ, ಮೊದಲಾದ ಐದು ನದಿಗಳು ಹರಿವ ನಾಡೆಂದು ಹೆಸರಾದರೂ ಇಂತಹ ಪರಿಸ್ಥಿತಿ. ಇಲ್ಲಿಯ ಮಾನವ ಅಭಿವೃದ್ಧಿ ಸೂಚ್ಯಾಂಕ ಕೆಳಮಟ್ಟದಿಂದ ಎಣಿಸಿಕೊಳ್ಳುತ್ತಾ ಬರಬೇಕಾಗಿದೆ. ಶಿಕ್ಷಣ, ಆರೋಗ್ಯದ ಸೂಚ್ಯಾಂಕಗಳು ಮತ್ತಷ್ಟು ಕೆಳಮಟ್ಟದಲ್ಲಿವೆ. ಇದು ಬಿಜಾಪುರದ ಪರಿಸ್ಥಿತಿ ಮಾತ್ರವಲ್ಲ ಬಿಜಾಪುರದ ಸುತ್ತ ಮುತ್ತಲಿನ ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳ ಜಿಲ್ಲೆಗಳ ಪರಿಸ್ಥಿತಿಯೂ ಹೌದು. ಕೆಲವು ಕಡೆ ನೀರಾವರಿ ಇದ್ದರೂ ಮಾನವ ಅಭಿವೃದ್ಧಿ ಸೂಚ್ಯಾಂಕ ಬಹಳ ಭಿನ್ನವಾಗೇನೂ ಇಲ್ಲ. ಈ ಪರಿಸ್ಥಿತಿಯಲ್ಲಿ ಸಾಕ್ಷರತೆ, ಶಿಕ್ಷಣ ಬಹಳ ಜನರಿಗೆ ವಂಚಿತವಾಗಿರುವ ಸಂದರ್ಭದಲ್ಲಿ ಸಾಹಿತ್ಯದ ಓದು, ರಚನೆಗೆ ಸಿಗುವ ಅವಕಾಶ ಎಷ್ಟು ?


ಸಾಹಿತ್ಯ ಸಮ್ಮೇಳನ ಸಾಹಿತ್ಯದ ಬಗ್ಗೆ ಅಭಿಮಾನವನ್ನು ಹುಟ್ಟಿಸಲು ನೆರವಾಗಬಹುದು. ಆದರೆ ಅದನ್ನು ಓದಲು, ಸವಿಯಲು ಅವಕಾಶ ಕಲ್ಪಿಸುವ ಬಗ್ಗೆ ಚಿಂತಿಸಬೇಕಲ್ಲವೇ ? ಜನಜೀವನವನ್ನು ಉತ್ತಮಗೊಳಿಸುವ ಬಗ್ಗೆ ಯೋಚಿಸ ಬೇಕಲ್ಲವೇ ?



ಚಟುವಟಿಕೆಗಳ ಉಲ್ಬಣದ ಜೊತೆಗೆ ಸರ್ಕಾರವನ್ನು ಬಳಸಿ ಶಿಕ್ಷಣದ ಕೋಮುವಾದೀಕರಣದ ಮೂಲಕ ಕೂಡ ವೈಚಾರಿಕತೆ,ವೈಜ್ಞಾನಿಕ ಚಿಂತನೆಯನ್ನು ಹಿಂದೆ ತಳ್ಳಿ ವೈದಿಕ ಚಿಂತನೆಯನ್ನು ಬೆಳೆಸುವ ಪ್ರಯತ್ನಿಸಿದ್ದಾರೆ.


ಕೋಮುವಾದಿಗಳ, ಕಟ್ಟಾ ಸಂಪ್ರದಾಯವಾದಿಗಳ ಬಿತ್ತುವ ಬೀಜಗಳಿಗೆ ನಮ್ಮ ಟೀವಿ ಛಾನೆಲ್‌ಗಳು ವಾಸ್ತು, ಭವಿಷ್ಯದ ಕಾರ್ಯಕ್ರಮಗಳು, ಇತರ ಮೂಢ ನಂಬಿಕೆಗಳಿಗೆ ಇಂಬು ಕೊಡುವಂತಹ ಕಾರ್ಯಕ್ರಮಗಳ ಮೂಲಕ ನೂರೆಂಟು ರೀತಿಯಲ್ಲಿ ನೀರು, ಗೊಬ್ಬರ ಹಾಕಿ ಬೆಳೆಸುತ್ತಿವೆ.

ದಲಿತ– ಬಂಡಾಯ ಸಾಹಿತ್ಯ ಚಳುವಳಿಯ ಭಾಗವಾಗಿರುವ, ಅದರ ಪ್ರಭಾವಕ್ಕೊಳಗಾಗಿರುವ ಸಾಹಿತಿಗಳು, ಲಂಕೇಶ್ ಪತ್ರಿಕೆಯ ಪ್ರಭಾವದಲ್ಲಿ ಬೆಳೆದವರು, ತೇಜಸ್ವಿಯವರ ಪ್ರಭಾವಕ್ಕೊಳಗಾದ ಸಾಹಿತಿಗಳು, ನವೋದಯ ಸಾಹಿತ್ಯದ ಮುಖ್ಯವಾಗಿ ಕುವೆಂಪುರವರ ಸಾಹಿತ್ಯದ ಅಧ್ಯಯನದಿಂದ ದೀಪ್ತರಾದವರು ಕೋಮುವಾದವನ್ನು ವಿರೋಧಿಸುತ್ತಾರೆ. ರೈತ, ದಲಿತ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳ ಪ್ರಭಾವಕ್ಕೊಳಗಾದವರು ಕೂಡ ಕೋಮುವಾದದಿಂದ ಗಣನೀಯ ಪ್ರಮಾಣದಲ್ಲಿ ದೂರ ಉಳಿದಿದ್ದಾರೆ. ಆದರೆ ಇದೇ ಮಾತನ್ನು ಜಾತೀವಾದದ ಬಗ್ಗೆ ಹೇಳಬಹುದೇ ? ಮೂಢ ನಂಬಿಕೆಗಳ ಬಗೆಗೂ ಇವರ ಪ್ರತಿಕ್ರಿಯೆಗಳು ಒಬ್ಬೊಬ್ಬರದೂ ಒಂದೊಂದು ರೀತಿ. ಇನ್ನು ಭ್ರಷ್ಟಾಚಾರದ ವಿಷಯ-ವಿವಿಧ ಪಕ್ಷಗಳ ಭ್ರಷ್ಟಾಚಾರದ ಬಗ್ಗೆ ಒಂದೊಂದು ರೀತಿಯ ಪ್ರತಿಕ್ರಿಯೆಯನ್ನು ದಿನದಿನವೂ ಕಾಣುತ್ತಿದ್ದೇವೆ. ಜಾತಿಗಳ ಪ್ರಶ್ನೆ ಕೂಡ ಭ್ರಷ್ಟಾಚಾರದ ಬಗ್ಗೆ ನಿರ್ದಿಷ್ಟ ನಿಲುವುಗಳನ್ನು ತೆಗೆದುಕೊಳ್ಳಲು ಅಡ್ಡ ಬರುತ್ತಿದೆ. ನಮ್ಮ ಜಾತಿಯವರ ಭ್ರಷ್ಟಾಚಾರ ಬೇರೆ ಜಾತಿಯವರು ಮಾಡುವ ಭ್ರಷ್ಟಾಚಾರ ಬೇರೆ ಬೇರೆಯದಾಗಿ ಕಾಣತೊಡಗುತ್ತದೆ. ಇತ್ತೀಚೆಗೆ ರಾಜಾಸ್ಥಾನದ ಜಯಪುರದಲ್ಲಿ ನಡೆದ ಸಾಹಿತ್ಯ ಸಮಾವೇಶವೊಂದರಲ್ಲಿ ಪ್ರೀತೀಶ್ ನಂದಿ ಹುಟ್ಟು ಹಾಕಿದ ವಿವಾದ ಮೇಲುಜಾತಿ-ಕೆಳ ಜಾತಿಗಳ ಭ್ರಷ್ಟಾಚಾರದ ಪ್ರಶ್ನೆಯನ್ನು ಎತ್ತಿದೆ. ಈಗಾಗಲೇ ಹೇಳಿದಂತೆ ರಾಜಕೀಯದ ಬೆಳವಣಿಗೆಗಳು, ಒಡಕುಗಳು ಸಾಕಷ್ಟು ಗೊಂದಲ ಹುಟ್ಟಿಸುತ್ತಿವೆ.


ಪಿ. ಲಂಕೇಶ್

ಸಮಾಜದಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಇಂತಹ ಕ್ರಿಯೆಗಳಿಗೆ ಚಿಂತನಾ ಲೋಕದಲ್ಲಿ ದೃಢವಾದ, ಆಳವಾದ ಎದುರುವಾದಗಳು ಮೂಡಿಬರುತ್ತಿದೆಯೇ? ಇಂದು ಕೇಳಿಬರುತ್ತಿರುವ ಆಧುನಿಕೋತ್ತರವಾದ ಆಳವಾದ ಚಿಂತನೆಗಳ ಅವಶ್ಯಕತೆಯನ್ನೇ ನಿರಾಕರಿಸುತ್ತಾ ಅವೆಲ್ಲಾ ಆಧುನಿಕತೆಯ ಪರಿಕಲ್ಪನೆಗಳು–ಇಡೀ ಸಮಾಜದ ಬಗ್ಗೆ, ಅದರ ಚರಿತ್ರೆಯ ಬಗ್ಗೆ, ಅದರಿಂದ ಕಲಿಯಬೇಕಾದ ಪಾಠಗಳ ಬಗ್ಗೆ ಚರ್ಚೆ ಮಾಡುವುದೇ ವ್ಯರ್ಥ. ಲೋಕ ಒಬ್ಬೊಬ್ಬರಿಗೆ ಒಂದೊಂದು ತೆರನಾಗಿ ಕಾಣುತ್ತದೆ ಎನ್ನುತ್ತದೆ. ಆಧುನಿಕತೆಯ ಪ್ರಭಾವಕ್ಕೊಳಗಾಗಿ ಒಂದು ಸಾಂಸ್ಕೃತಿಕ ಮರೆವು ಆವರಿಸಿದೆ. ಪಶ್ಚಿಮದ ಜ್ಞಾನ ದುರಹಂಕಾರವನ್ನು ಎದುರಿಸಬೇಕು ಎನ್ನುತ್ತ ಲಂಕೇಶ್ ರವರೆಂದಂತೆ ವೈದಿಕ ಪುರೋಹಿತಶಾಹಿಯ ಚಿಂತನೆಯನ್ನು ವಿವಿಧ ರೂಪಗಳಲ್ಲಿ ಪುನರುತ್ಥಾನಗೊಳಿಸುವ ಕೆಲಸ ಮಾಡುತ್ತಿವೆ. ಇಂತಹ ವಾದಗಳನ್ನು ಹೂಡುವ ಒಂದು ಗುಂಪು ಜಾತಿ ವ್ಯವಸ್ಥೆಯೆಂಬುದೇ ಇಲ್ಲ. ಅದೆಲ್ಲ ಕೇವಲ ಬ್ರಿಟಿಷರ, ಇತರ ಪಾಶ್ಚಿಮಾತ್ಯರ ಸೃಷ್ಟಿ ಭಾರತದಲ್ಲಿರುವುದು ಕೇವಲ ವಿವಿಧ ಕೆಲಸಗಳನ್ನು ಮಾಡುವ ಗುಂಪುಗಳಷ್ಟೇ. ಅಸ್ಪೃಶ್ಯತೆ ಎಂಬುದು ಕೂಡ ಆಯಾ ದಲಿತ ಜಾತಿಗಳು ತಾವೇ ತಮ್ಮನ್ನು ಇತರರಿಂದ ಪ್ರತ್ಯೇಕಗೊಳಿಸಿಕೊಳ್ಳಲು ಮಾಡಿಕೊಂಡ ಆಚರಣೆಗಳು ಎನ್ನುತ್ತಿದ್ದಾರೆ. ವಾಸ್ತವವನ್ನು ಕಣ್ಬಿಟ್ಟು ನೋಡಿ ಎಂದರೆ ನೀವಿನ್ನೂ ಹಳೆಯ ವಾದಗಳ ಮಂಪರಿನಲ್ಲಿದ್ದೀರಿ. ಈಗ ಹೊಸ ವಾದಗಳನ್ನು ತಿಳಿದುಕೊಳ್ಳಿ ಎಂಬ ಪ್ರತಿವಾದ ಹೂಡುತ್ತಿದ್ದಾರೆ.


ನೇಮಿ ಚಂದ್ರ


ಸಮ್ಮೇಳನದ ಅಧ್ಯಕ್ಷ
ಕೋ. ಚನ್ನಬಸಪ್ಪ

ಇನ್ನು ಐಡೆಂಟಿಟಿ ಅಥವಾ ಅಸ್ಮಿತೆಯವಾದ ವಿವಿಧ ಜಾತಿ, ಬುಡಕಟ್ಟುಗಳ, ಧರ್ಮ, ಲಿಂಗಗಳ ಜನರು ತಂತಮ್ಮ ಅಸ್ಮಿತೆಗಾಗಿ ಪ್ರಯತ್ನಿಸಬೇಕು ಎಂದು ಪ್ರತಿಪಾದಿಸುತ್ತಾ ಜನರೆಲ್ಲ ಒಗ್ಗಟ್ಟಾಗಿ ಪುರೋಹಿತಶಾಹಿಯ ವಿರುದ್ಧ, ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯ ಹೂಡುವುದೇ ಕಷ್ಟಕರವಾಗುವ ಪರಿಸ್ಥಿತಿಯನ್ನು ಮೂಡಿಸುತ್ತಿದೆ. ಹೀಗೆ ರಾಜಕೀಯದಲ್ಲಿ ದೊಡ್ಡ ಪ್ರಮಾಣದ ಹಾನಿಯನ್ನುಂಟು ಮಾಡುತ್ತಿರುವ ಜಾತೀವಾದವನ್ನು ಪರೋಕ್ಷವಾಗಿ ಬೌದ್ಧಿಕವಾಗಿ ಬೆಂಬಲಿಸುವ ವಾದವಾಗಿ ಕಾಣಿಸುತ್ತಿದೆ.

ಇವುಗಳ ಜೊತೆಗೆ ಸಾಹಿತಿಗಳಲ್ಲಿ ವಿವಿಧ ಕಾರಣಗಳಿಗಾಗಿ ವಿಜ್ಞಾನ, ತಂತ್ರಜ್ಞಾನಗಳನ್ನು ವಿರೋಧಿಸುವ ಭಾವನೆ ವ್ಯಾಪಕವಾಗುತ್ತಿದೆ. ಬ್ರಿಟನ್, ಅಮೇರಿಕಗಳ ಸಾಮ್ರಾಜ್ಯಶಾಹೀ ಶೋಷಣೆಗಳ ಜೊತೆಗೆ ಪಶ್ಚಿಮದ ನಾಗರಿಕತೆ, ವಿಜ್ಞಾನ ತಂತ್ರಜ್ಞಾನಗಳನ್ನು ಕಲಸಿ ಗೊಂದಲಗೊಂಡು ಇವೆಲ್ಲವನ್ನೂ ವಿರೋಧಿಸುವ ಪ್ರವೃತ್ತಿಗಳು ವ್ಯಾಪಕವಾಗಿವೆ ಅವರ ಕಥೆ, ಕಾದಂಬರಿಗಳಲ್ಲಿ, ಭಾಷಣ, ಬರಹಗಳಲ್ಲಿ ಕಾಣುತ್ತಿದೆ. ಇಂದಿನ ನಮ್ಮ ಶಿಕ್ಷಣ ಪದ್ಧತಿಯಲ್ಲಿ ವಿಜ್ಞಾನ ಶಿಕ್ಷಣ ಮಾನವಿಕ-ಸಾಹಿತ್ಯದ ಶಿಕ್ಷಣ ಎಂಬ ವಿಭಜನೆ, ಇದರಿಂದಾಗಿ ಸಾಹಿತಿಗಳನೇಕರು ವಿಜ್ಞಾನದ ಆಳವಾದ ತಿಳುವಳಿಕೆಯಿಂದ ವಂಚಿತರಾಗಿರುವುದು. ತಂತ್ರಜ್ಞಾನದ ಹೊಸ ಆವಿಷ್ಕಾರಗಳಿಂದ ಹಳೆಯ ಜೀವನ ಪದ್ಧತಿ ಅಲ್ಲೋಲ ಕಲ್ಲೋಲ ವಾಗುತ್ತಿರುವುದು ಕೆಲವು ಕಾರಣಗಳು. ಜೊತೆಗೆ ವಿಜ್ಞಾನ–ತಂತ್ರಜ್ಞಾನಗಳ ಮೇಲೆ ಮಾಲೀಕತ್ವ ಸ್ಥಾಪಿಸಿದ ಬಂಡವಾಳಶಾಹಿಗಳು ದುರ್ಲಾಭ ಗಳಿಸುವ ಆತುರದಲ್ಲಿ ಪರಿಸರದ ಮೇಲೆ ಎಸಗುತ್ತಿರುವ ಅತ್ಯಾಚಾರಗಳು ಕೂಡ ವಿಜ್ಞಾನ ವಿರೋಧೀ ಭಾವನೆಗಳಿಗೆ ಕಾರಣವಾಗಿದೆ.


ಸಾರಾ ಅಬೂಬಕರ್

ಇಂತಹ ಪರಿಸ್ಥಿತಿಯಲ್ಲಿ ವೈಜ್ಞಾನಿಕ, ವೈಚಾರಿಕ ಚಿಂತನೆಯನ್ನು ಎತ್ತಿ ಹಿಡಿಯುವುದು, ಬೆಳೆಸಿಕೊಳ್ಳುವುದು ಅತ್ಯಂತ ಜರೂರಾಗಿದೆ. ಈ ಹಿನ್ನೆಲೆಯಲ್ಲಿ ಕುವೆಂಪುರವರು ಉತ್ಸಾಹದಿಂದ ವಿಜ್ಞಾನದ ಅಧ್ಯಯನ ಮಾಡಿರುವುದಲ್ಲದೆ ಎಲ್ಲ ಸಾಹಿತಿಗಳಿಗೂ ವಿಜ್ಞಾನದ ಅಧ್ಯಯನ ಮಾಡಲು ಹಾಗೂ ವೈಜ್ಞಾನಿಕ, ವೈಚಾರಿಕ ಮನೋಭಾವವನ್ನು ರೂಪಿಸಿಕೊಳ್ಳಲು ಮತ್ತೆ ಮತ್ತೆ ನೀಡಿದ ಕರೆಯನ್ನು ಇಂದು ನೆನೆಪಿಸಿಕೊಳ್ಳಬೇಕಾಗಿದೆ. ಪುನರಾವಲೋಕನಕ್ಕೆ ಒಳಪಡಿಸಬೇಕಾಗಿದೆ.

"ಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಿ"

ಬೆಳಗಾವಿ ಸಿಐಟಿಯು ಜಿಲ್ಲಾ ಸಮ್ಮೇಳನದಲ್ಲಿ ಎಸ್. ಪ್ರಸನ್ನ ಕುಮಾರ್

ದುಡಿಯುವ ಜನತೆಯ ಪರವಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರ ಯಾವುವೂ ಕೆಲಸವೂ ಮಾಡಿಲ್ಲ. ರಾಜ್ಯದಲ್ಲಿ ವಿರೋಧ ಪಕ್ಷದವರೂ ಸಹ ಮೌನವಾಗಿದ್ದಾರೆ. ಇವರೆಲ್ಲರಿಗೆ ಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕೆಂದು ಸಿಐಟಿಯು 4 ಬೆಳಗಾವಿ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ ಕರೆ ನೀಡಿದರು.

ಬೆಳಗಾವಿ ಜಿಲ್ಲೆಗೆ ಹೋರಾಟದ ದೊಡ್ಡ ಚರಿತ್ರೆ ಇದೆ. ರಾಜ್ಯದಲ್ಲಿಯೇ ಬೆಳಗಾವಿ ಜಿಲ್ಲೆಯಲ್ಲಿ ದೊಡ್ಡ ಹಾಗೂ ಸಣ್ಣ ಕೈಗಾರಿಕೆಗಳು ಗಣನೀಯ ಸಂಖ್ಯೆಯಲ್ಲಿವೆ. ಒಟ್ಟು 65,000 ಸಂಘಟಿತ ಕಾರ್ಮಿಕರು ಇರುವಂತಹ ನಗರ ಬೆಳಗಾವಿ. ಈ ಎಲ್ಲ ಕಾರ್ಮಿಕರನ್ನೂ ಸಂಘಟಿಸುವ ಕೆಲಸ ಮಾಡಿದರೆ ಬೆಳಗಾವಿಯಲ್ಲಿ ಚಳುವಳಿ ಉತ್ಕರ್ಷಕ್ಕೆ ಬರುವುದು ಗ್ಯಾರಂಟಿ ಎಂದು ಹಿರಿಯ ಕಾರ್ಮಿಕ ಮುಖಂಡ ವ್ಹಿ. ಪಿ. ಕುಲಕರ್ಣಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಕೆ.ಎಲ್.ಇ. ಆಸ್ಪತ್ರೆಯಂತಹ ಆಸ್ಪತ್ರೆಯಲ್ಲೇ ದುಡಿಯುವ ನರ್ಸ್‌ಗಳ ಸಂಘಟನೆ ಸಿಐಟಿಯು ಗೆ ತೆಕ್ಕೆಗೆ ಬಂದಿದೆ ಎಂದರೆ ಸಿಐಟಿಯುನ ಸಂಘಟನೆ ಬೆಳಗಾವಿ ಜಿಲ್ಲೆಯಲ್ಲಿ ವಿಸ್ತರಿಸಿದೆ ಎಂದರ್ಥ. ಸಮ್ಮೇಳನಕ್ಕೆ ಬಂದ ಪ್ರತಿನಿಧಿ ಸಂಗಾತಿಗಳು ಸಂಘಟನೆಯನ್ನು



ಬಲಿಷ್ಠಗೊಳಿಸಲು ಶ್ರಮಿಸಬೇಕೆಂದು ಅಧ್ಯಕ್ಷತೆ ವಹಿಸಿದ್ದ ಸಿ.ಎ. ಖರಾಡೆ ಹೇಳಿದರು.

ಮುಂಬರುವ ಮೂರು ವರ್ಷದ ಅವಧಿಯಲ್ಲಿ ಬೆಳಗಾವಿ ಜಿಲ್ಲೆಯ ಕಾರ್ಮಿಕರು ಈಗಿರುವ ಸದಸ್ಯತ್ವವನ್ನು ಮೂರು ಪಟ್ಟು ಬೆಳೆಸಲು ಪ್ರಯತ್ನಿಸಬೇಕೆಂದು ಸಿಐಟಿಯು ರಾಜ್ಯ ಕಾರ್ಯದರ್ಶಿಯಾದ ಕೆ. ಮಹಾಂತೇಶ ವಿನಂತಿಸಿದರು.

ಕಾರ್ಮಿಕರಿಗೆ ಕೆಲಸದ ಭದ್ರತೆ, ಭವಿಷ್ಯ ನಿಧಿ ಜಾರಿ, ಗುತ್ತಿಗೆ ಪದ್ಧತಿ ರದ್ದುಪಡಿಸಲು, ಖಾಸಗೀಕರಣದ ನೀತಿ ಕೈಬಿಡಲು ಹಾಗೂ ಕನಿಷ್ಠ ವೇತನ ರೂ. 10,000/- ನೀಡಬೇಕೆಂದು ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ 4 ನೇ ಸಿಐಟಿಯು ಜಿಲ್ಲಾ ಸಮ್ಮೇಳನ ಒತ್ತಾಯಿಸಿತು. ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಸ್ವಾಗತಿಸಿದರು. ಕೊನೆಯಲ್ಲಿ ಗೈಬು ಜೈನೆಖಾನ ವಂದಿಸಿದರು.

ಗೌರವಾಧ್ಯಕ್ಷರಾಗಿ ಸಿ. ಎ. ಖರಾಡೆ, ಅಧ್ಯಕ್ಷರಾಗಿ ಗಿರೀಶ ಶೆಟ್ಟಿ, ಪ್ರಧಾನ ಕಾರ್ಯದರ್ಶಿಯಾಗಿ ಗೈಬು ಎಮ್. ಜೈನೆಖಾನ, ಖಜಾಂಚಿಯಾಗಿ ವ್ಹಿ.ಎಸ್. ಜುಮನ್ನಾಳ ಆಯ್ಕೆಗೊಂಡಿದ್ದಾರೆ.

ವರದಿ – **ಗೈಬು ಜೈನೆಖಾನ**

...ಅಸಹಿಷ್ಣುತೆಯ ಅಲೆ

ಪುಟ 7 ರಿಂದ

ದುಷ್ಟ ಲಕ್ಷಣಗಳು

ಇವೆಲ್ಲ ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಮತ್ತು ನಮ್ಮ ಸಮಾಜದ ಜಾತ್ಯಾತೀತ ಹಂದರಕ್ಕೆ ಬೆದರಿಕೆಯೊಡ್ಡುವ ದುಷ್ಟ ಲಕ್ಷಣಗಳು. ಗಂಭೀರ ಆಂತರಿಕ ಕಿತ್ತಾಟಗಳಲ್ಲಿ ಮತ್ತು ಭಾರತದ ಮುಂದಿನ ಪ್ರಧಾನ ಮಂತ್ರಿಯೆಂದು ಯಾರನ್ನು ಬಿಂಬಿಸಬೇಕು ಎಂಬ ಸ್ಪರ್ಧೆಯಲ್ಲಿ ಸಿಲುಕಿರುವ ಆರೆಸ್ಸೆಸ್ ನೇತೃತ್ವದ ಬಿಜೆಪಿ ದಿಲ್ಲಿಯಲ್ಲಿ ಸರಕಾರದ ಲಗಾಮನ್ನು ಮತ್ತೆ ಪಡೆಯುವ ಹತಾಶ ಪ್ರಯತ್ನಗಳನ್ನು ನಡೆಸುತ್ತಿದೆ. ಕೋಮುವಾದಿ ಭಾವೋದ್ರೇಕಗಳನ್ನು ಬಡಿದೆಬ್ಬಿಸಲು ಮತ್ತೆ ತನ್ನ ಹಿಂದುತ್ವ ಅಜೆಂಡಾಕ್ಕೆ ಆತು ಕೊಳ್ಳಲು ಸಿದ್ಧವಾಗುತ್ತಿದೆ. ಇದರಿಂದಾಗುವ ಕೋಮು ಧ್ರುವೀಕರಣ ತನಗೆ ರಾಜಕೀಯ, ಚುನಾವಣಾ ಪ್ರಯೋಜನಗಳನ್ನು ತಂದುಕೊಡಬಹುದು ಎಂಬ ನಿರೀಕ್ಷೆ ಅದರದ್ದು.

ಆದರೆ, ಈ ಪ್ರಕ್ರಿಯೆಯಲ್ಲಿ ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಅಡಿಪಾಯವೇ, ಮತ್ತೊಮ್ಮೆ ತೀವ್ರ ಒತ್ತಡಕ್ಕೆ ಒಳಗಾಗಲಿದೆ. ಈಗಿನ ಸರಕಾರದ ಆರ್ಥಿಕ ಪ್ರಹಾರಗಳಿಗೆ ಎದುರಾಗಿ ಜನತೆ ಮತ್ತು ದೇಶ ಒಂದು ಗಂಭೀರ ಸಮರದಲ್ಲಿರುವಾಗ, ಇಂತಹ ಕೋಮುವಾದಿ ಧ್ರುವೀಕರಣ, ಜನತೆ ತಮ್ಮ ಗಮನವನ್ನು ತಮ್ಮ ಬದುಕನ್ನು ಉತ್ತಮಗೊಳಿಸುವ ಹೋರಾಟಗಳನ್ನು ಇನ್ನಷ್ಟು ಬಲಗೊಳಿಸುವತ್ತ ಹರಿಸುವುದನ್ನು ಬಿಟ್ಟು ಬೇರೆಡೆಗೆ ಸೆಳೆಯುವ ಅಪಾಯವೂ ಇದೆ. ಆದ್ದರಿಂದ, ನಮ್ಮ ದೇಶಕ್ಕಾಗಿ, ಮತ್ತು ನಮ್ಮ ಜನತೆಯ ಒಳಿತಿಗಾಗಿ, ಇಂತಹ ಕೋಮುವಾದಿ ಧ್ರುವೀಕರಣವನ್ನು ನಿರ್ಣಾಯಕವಾಗಿ ಸೋಲಿಸಬೇಕಾಗಿದೆ.

ಜನವಿರೋಧಿ ನೀತಿಗಳನ್ನು ಸೋಲಿಸಲು ಕಾರ್ಮಿಕರು ಪಣತೊಡಲಿ – ಬಿ.ಎಸ್. ಸೊಪ್ಪಿನ

ರಾಜ್ಯದಲ್ಲಿಯೂ, ಕೇಂದ್ರದಲ್ಲಿಯೂ ಇಲ್ಲಿಯವರೆಗೆ ಆಳಿದ ಸರಕಾರಗಳು ಯಾವತ್ತೂ ರೈತರ ಪರವಾಗಿ, ಕಾರ್ಮಿಕರ ಪರವಾಗಿ, ದುಡಿಯುವವರ ಪರವಾಗಿ ಕಾರ್ಯ ಮಾಡಿಲ್ಲ. ಅವೇನಿದ್ದರೂ ಶ್ರೀಮಂತರ ಪರವಾಗಿ ಕೆಲಸ ಮಾಡಿದ ಸರಕಾರಗಳು. ತೊಂಭತ್ತರ ದಶಕದ ನಂತರ ಜಾರಿಗೆ ಬಂದಿರುವ ನವ ಉದಾರವಾದ ಆರ್ಥಿಕ ನೀತಿಗಳು ಖಂಡಿತವಾಗಿ ದುಡಿಯುವ ಪರವಾಗಿಲ್ಲ. ಉದ್ಯೋಗ ಕಡಿತ, ಹುದ್ದೆಗಳಿಗೆ ನೇಮಕಾತಿ ನಿಲುಗಡೆ, ಖಾಸಗೀಕರಣ ಕ್ರಮಗಳು ಶ್ರಮಿಕರ ವಿರೋಧಿಯಾಗಿವೆ. ಇಂಥ ನೀತಿಗಳನ್ನು ಸೋಲಿಸಲು ಕಾರ್ಮಿಕರು ಪಣತೊಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಧಾರವಾಡ ಜಿಲ್ಲಾ ಅಧ್ಯಕ್ಷರಾದ ಬಿ.ಎಸ್. ಸೊಪ್ಪಿನ ಹೇಳಿದರು. ಜನವರಿ 05, 2013 ರಂದು ರಾಮದುರ್ಗ ತಾಲೂಕ ಸೋರೇಬಾನದಲ್ಲಿ ನಡೆದ ರಾಮದುರ್ಗ ತಾಲೂಕ ಸಿಐಟಿಯು ನ ದ್ವಿತೀಯ ಸಮ್ಮೇಳನದ ಅಂಗವಾಗಿ ನಡೆದ ಬಹಿರಂಗ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು. ಅಂಗನವಾಡಿ ಬಿಸಿಯೂಟ, ಗ್ರಾಮ ಪಂಚಾಯತ್ ನೌಕರರು, ಕಟ್ಟಡ ಕಾರ್ಮಿಕರು, ಮಹಾಲಕ್ಷ್ಮೀ ಶುಗರ್ಸ್ ಕಾರ್ಖಾನೆಯ ಕಾರ್ಮಿಕ ಸಂಘ ಹಾಗೂ ಇತರ ಸಂಘಟನೆಗಳಿಂದ ಸು. 900 ಕಾರ್ಮಿಕರು ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು. ಅದಕ್ಕೂ ಮೊದಲು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾರ್ಮಿಕ ಮುಖಂಡರಾದ ವ್ಹಿ.ಪಿ. ಕುಲಕರ್ಣಿ ವಹಿಸಿದ್ದರು. ಸವದತ್ತಿಯ ಫಕ್ರುಸಾಬ ನದಾಫ್ ಅತಿಥಿಗಳಾಗಿ ಪಾಲ್ಗೊಂಡಿದ್ದರು. ವೇದಿಕೆಯ ಮೇಲೆ ಎಸ್.ಬಿ. ಹಳ್ಳಿ, ನಾಗಪ್ಪ ಸಂಗೊಳ್ಳಿ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಪಾಟೀಲ, ಸುರೇಬಾನ ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀಶೈಲ ಉಳ್ಳಿಕೇರಿ ಹಾಗೂ ಎಲ್.ಎಸ್. ನಾಯ್ಕ ಇದ್ದರು.



ಬಹಿರಂಗ ಸಭೆಯ ನಂತರ ಶಬರಿ ದೇವಾಲಯದ ಸಭಾಂಗಣದಲ್ಲಿ ಪ್ರತಿನಿಧಿಗಳ ಅಧಿವೇಶನದ ಉದ್ಘಾಟನೆಯನ್ನು ನೆರವೇರಿಸಿದ ಸೊಪ್ಪಿನವರು ಖಾಸಗೀಕರಣ ನೀತಿಯಿಂದಾಗಿ ಸಂವಿಧಾನದತ್ತವಾದ ಮೀಸಲಾತಿ ತನ್ನ ಅರ್ಥ ಕಳೆದು ಕೊಳ್ಳುವಂತಾಗಿದೆ ಎಂದರು. ಕಾರ್ಯದರ್ಶಿ ಜೈನೇಖಾನ ವರದಿ ಮಂಡಿಸಿದರು. ನಂತರ ವರದಿಯ ಮೇಲೆ ಚರ್ಚೆ ನಡೆಯಿತು. ಎಸ್.ಬಿ. ಹಳ್ಳಿ, ನಾಗಪ್ಪ ಸಂಗೊಳ್ಳಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ನಂತರ ಪದಾಧಿಕಾರಿಗಳ ಆಯ್ಕೆ ನಡೆಯಿತು. ಅಧ್ಯಕ್ಷರಾಗಿ ನಾಗಪ್ಪ ಸಂಗೊಳ್ಳಿ, ಕಾರ್ಯದರ್ಶಿಯಾಗಿ ಯು.ಎಫ್. ದಂಡಿನ ಚುನಾಯಿತರಾದರು. ▲

ಬಿಜೆಪಿ ಸರ್ಕಾರದ ದಿವಾಳಿಕೋರತನ

ಪುಟ 5 ರಿಂದ

ನಿರುಪಯುಕ್ತವಾಗಿ ಬಿಟ್ಟಿದೆ. ಅದರಲ್ಲೂ ಕಾಲು ಭಾಗವೂ ಜಾರಿ ಅಗಲಿಲ್ಲ. ಇನ್ನು ಈ ಬಜೆಟ್‌ನಲ್ಲಿನ ಯಾವುದನ್ನು ಜಾರಿ ಮಾಡಲು ಸಾಧ್ಯ? ಯಾವ ಘನ ಉದ್ದೇಶಕ್ಕಾಗಿ ಈ ಸರ್ಕಾರ ಬಜೆಟ್‌ನ್ನು ಮಂಡಿಸಬೇಕು? ಇಂತಹ ಸ್ಥಿತಿಯಲ್ಲಿ ಈ ಅಲ್ಪಮತದ ಸರ್ಕಾರವನ್ನು ನಡೆಸುತ್ತಿರುವ ಬಿಜೆಪಿಗೆ ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯಲ್ಲಿ ಕನಿಷ್ಠ ನಂಬಿಕೆ ಇದ್ದುದಾದರೆ ಗೌರವಯುತವಾಗಿ ಜಗದೀಶ್‌ಶೆಟ್ಟರ್ ಸರ್ಕಾರ ರಾಜಿನಾಮೆ ನೀಡಿ ಹೊಸ ಜನಾದೇಶ ಪಡೆಯಬೇಕಿತ್ತು.

ಇನ್ನು ಮುಂದೆ ಅಧಿಕಾರದ ಕನಸನ್ನು ಕಾಣುತ್ತಿರುವ ವಿರೋಧ ಪಕ್ಷಗಳು ಕಡೆ ಕಾಲದಲ್ಲಾದರೂ ರಾಜಕೀಯ ಪ್ರಬುದ್ಧತೆಯನ್ನು ತೋರಿ ಅಲ್ಪಮತದ ಸರ್ಕಾರಕ್ಕೆ ಆಯ-ವ್ಯಯವನ್ನು ಮಂಡಿಸಲು ಅವಕಾಶ ಕೊಡದೆ ಇದ್ದಿದ್ದರೆ ರಾಜ್ಯದ ಭವಿಷ್ಯಕ್ಕೆ ಸ್ವಲ್ಪವಾದರೂ ಪ್ರಯೋಜನವಾಗುತ್ತಿತ್ತು. ಸರ್ಕಾರವನ್ನು ಉರುಳಿಸಿದರೆ ತಮಗೆ ಅಪಖ್ಯಾತಿ ಬರುತ್ತದೆ ಜನ ನಮಗೆ ಓಟು ನೀಡುವುದಿಲ್ಲವೆಂದು ಓಟಿನ ರಾಜಕಾರಣಕ್ಕಾಗಿ ರಾಜ್ಯದ ಭವಿಷ್ಯವನ್ನು ಹಾಳು ಮಾಡಿದ ಈ ಎಲ್ಲಾ ರಾಜಕೀಯ ಪಕ್ಷಗಳಿಗೂ ಜನರು ಬುದ್ಧಿ ಹೇಳಿ ಜನಪರವಾದ ಹೊಸ ರಾಜಕೀಯ ಪರ್ಯಾಯವನ್ನು ಬೆಳೆಸಲು ನಿರಂತರ ಹೋರಾಟಗಳನ್ನು ನಡೆಸುತ್ತಿರುವ ಸಿಪಿಐ(ಎಂ) ಪಕ್ಷದ ನೇತೃತ್ವದ ಎಡ ಪಕ್ಷಗಳಿಗೆ ಬೆಂಬಲ ಕೊಡುವ ಅನಿವಾರ್ಯತೆ ನಿರ್ಮಾಣವಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ದಲಿತರೇ ಏಕೆ ಕಸ ಎತ್ತಬೇಕು?

ಹಾಸನ ನಗರದಲ್ಲೂ ಜಿಲ್ಲೆಯಲ್ಲೂ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ದಲಿತ ಪೌರ ಕಾರ್ಮಿಕರ ಪಾಡು ಮನದಾಳದ ನೋವುಗಳನ್ನು ಇಲ್ಲಿ ದಾಖಲಿಸಿದ್ದಾರೆ

ಎಚ್.ಆರ್. ನವೀನ ಕುಮಾರ್, ಹಾಸನ

ಹೀಗೆಂದು ಪ್ರಶ್ನಿಸಿದವರು ಬೇರಾರು ಅಲ್ಲ. ಸ್ವತಃ ಕಳೆದ 15 ವರ್ಷಗಳಿಂದ ಹಾಸನ ನಗರಸಭೆಯಲ್ಲಿ ಸ್ವಚ್ಛತೆಯ ಕೆಲಸದಲ್ಲಿ ದುಡಿಯುತ್ತಿರುವ ಮುನ್ಸಿಪಲ್ ಗುತ್ತಿಗೆ ಕಾರ್ಮಿಕರಾದ ಅನುರಾಧ. ಪೌರ.ಕಾರ್ಮಿಕರ ಸ್ಥಿತಿಗತಿಗಳ ಕುರಿತು ಮಾತನಾಡಲು ಅವರುಗಳು ಹೆಚ್ಚಾಗಿ ವಾಸವಿರುವ ಹಾಸನ ನಗರದ ಹಳೇ ಮಟನ್ ಮಾರ್ಕೆಟ್ ಬಳಿ ಇರುವ ಪ್ರದೇಶಕ್ಕೆ ಭೇಟಿ ನೀಡಿ ಅವರ ಜೀವನವನ್ನು ನೇರವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಇಂತಹ ಸಂದರ್ಭದಲ್ಲಿ ನಾನು ಭೇಟಿಯಾಗಿದ್ದ ಪೌರಕಾರ್ಮಿಕರಾದ ಅನುರಾಧ ಕೇಳಿದ ಅತ್ಯಂತ ಸಹಜ ಪ್ರಶ್ನೆಯೆಂದರೆ ನಗರದ ಎಲ್ಲ ಕೊಳಕನ್ನು ನಮ್ಮ ಜಾತಿಯವರೇ (ದಲಿತರು) ಬಳಿಯಬೇಕೇ? ಈ ಕೆಲಸಗಳಿಗೆ ಬೇರೆಯವರನ್ನು ಯಾಕೆ ಸರ್ಕಾರ ನೇಮಿಸಿಕೊಳ್ಳುವುದಿಲ್ಲ, ಅಥವ ಬೇರೆಯವರು ಯಾಕೆ ಇಂತಹ ಕೆಲಸಗಳಿಗೆ ಹೆಚ್ಚಾಗಿ ಬರುವುದಿಲ್ಲ. ಇದು ಒಂದು ತರ ಶಾಶ್ವತ ಗುಲಾಮಗಿರಿಯೇ ಎಂದು ಪ್ರಶ್ನಿಸಿದರು. ಈ ಮಾತು ಒಂದು ಕ್ಷಣ ನನ್ನ ಮಾತುಗಳನ್ನು ಕಟ್ಟಿಹಾಕಿತು. ಇದಕ್ಕೆ ಕಾರಣವೇನೆಂದು ಅವರನ್ನೇ ಕೇಳುತ್ತಾ ಹೋದಂತೆಲ್ಲ ದಲಿತರ ಬದುಕಿನ ನೈಜ ಚಿತ್ರಣ ಅನಾವರಣವಾಯಿತು.

'ನಾವು ದಲಿತರಾಗಿ ಹುಟ್ಟಿದ್ದೇವೆನ್ನುವ ಕಾರಣಕ್ಕೆ ನಮ್ಮ ತಂದೆ ತಾಯಿಗಳಿಗೆ ಬೇರೆ ಎಲ್ಲೂ, ಬೇರೆ ಯಾವ ಕೆಲಸವೂ ಸಿಗಲಿಲ್ಲ. ಬೇರೆ ದಾರಿ ಇಲ್ಲದೇ ಜೀವನ ಸಾಗಿಸಬೇಕಾದ ಅನಿವಾರ್ಯತೆಗೆ ಸಿಲುಕಿ ನಗರಸಭೆಗಳಲ್ಲಿ ಕಸ ಗುಡಿಸುವ ಕೆಲಸಕ್ಕೆ ಸೇರಿಕೊಂಡರು. ಜೀವನವನ್ನ ನಡೆಸುವುದೇ ದುಸ್ತರವಾಗಿರುವಾಗ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕೆಂಬ ಕಲ್ಪನೆಯೂ ಇರಲಿಲ್ಲ. ಹೀಗಾಗಿ ಒಂದೆಡೆ ದಲಿತರೆನ್ನುವ ಕಾರಣಕ್ಕೆ ಮತ್ತೊಂದೆಡೆ ಶಿಕ್ಷಣ ಇಲ್ಲದ ಕಾರಣಕ್ಕೆ ನಾವೂ ಕೂಡ ಕಸ ಬಳಿಯುವ ಕೆಲಸಕ್ಕೆ ಸೇರಿಕೊಳ್ಳಬೇಕಾಯಿತು' ಎಂದರು.

ಇವರು ಪ್ರತಿ ದಿನ ಬೆಳಗ್ಗೆ ಊರು ಏಳುವ ಮುನ್ನ ನಸುಕಿನ ಜಾವ 4.30 ಕ್ಕೆ ಎದ್ದು ಹಿಂದಿನ ದಿನ ಬೆಳಗ್ಗಿನಿಂದ ರಾತ್ರಿಯ ಕಗ್ಗತ್ತಲೆಯಲ್ಲಿ ಮನುಷ್ಯರು ಮತ್ತು ಪ್ರಾಣಿಗಳು ಸೇರಿ ಮಾಡಿದ ಎಲ್ಲ ರೀತಿಯ ಕೊಳಕನ್ನು ಬಾಚಿ ನಗರವನ್ನು ಸ್ವಚ್ಛ ಗೊಳಿಸುವ ಮೂಲಕ ನಗರವನ್ನು ಎಚ್ಚರಗೊಳಿಸುತ್ತಾರೆ. ಅನುರಾಧ ಕೆಲಸಕ್ಕೆ ಸೇರಿದಾಗ ಆಕೆ ಎರಡನೇ ಹೆಣ್ಣು ಮಗುವಿನ ಬಾಣಂತಿ. 3 ತಿಂಗಳ ಹಸುಗೂಸನ್ನ ಪರಿಚಯಸ್ಥರ ಬಳಿ ನೋಡಿಕೊಳ್ಳಲು ಬಿಟ್ಟು ಈಕೆ ಕೆಲಸಕ್ಕೆ ಬರುತ್ತಿದ್ದರು. ಹೀಗೆ ಹೇಳುವಾಗ ಕೂಸಿಗೆ ನೀಡಬೇಕಾದ ತಾಯಿಯ ಪ್ರೀತಿ, ವಾತ್ಸಲ್ಯ ಮತ್ತು ಮಗುವಿನಿಂದ ನಾನು ಪಡೆಯಬೇಕಾಗಿದ್ದ ಪ್ರೀತಿ, ವಾತ್ಸಲ್ಯ ಎಲ್ಲವನ್ನೂ ಕಳೆದು ಕೊಂಡೆ. ಇದಕ್ಕೆ ಮುಖ್ಯ ಕಾರಣ ಕಿತ್ತು ತಿನ್ನುವ ಬಡತನ, ಗಂಡನ ದುಡಿಮೆ ಸಾಕಾಗುತ್ತಿರಲಿಲ್ಲ. ನಾನು ಕೆಲಸ ಮಾಡದಿದ್ದರೆ ಸಂಸಾರದ ಬಂಡಿ ಮುಂದೆ ಹೋಗುತ್ತಿರಲಿಲ್ಲ. ನಾನು 7ನೇ ತರಗತಿಯವರೆಗೆ ಮಾತ್ರ



ವಿದ್ಯಾಭ್ಯಾಸ ಮಾಡಿರುವುದು. ನನ್ನ ವಿದ್ಯಾಭ್ಯಾಸಕ್ಕೆ ಮತ್ತು ನಾನು ಹುಟ್ಟಿರುವ ಜಾತಿಗೆ ನಗರಸಭೆಯಲ್ಲಿ ಕಸಗುಡಿಸುವ ಕೆಲಸವಲ್ಲದೇ ಬೇರಾವ ಕೆಲಸವೂ ನನಗೆ ಸಿಗಲಿಲ್ಲ. ನಮಗೆ ಒಳ್ಳೆಯ ಕೆಲಸ ಕೊಡುವವರು ಯಾರು ? ನಾನು ಕೆಲಸಕ್ಕೆ ಸೇರಿದಾಗ ನನಗೆ ಸಿಗುತ್ತಿದ್ದುದು ತಿಂಗಳಿಗೆ ಕೇವಲ 1,400 ರೂ ಸಂಬಳ (ದಿನಕ್ಕೆ 46 ರೂ ಮಾತ್ರ). ಇದರಲ್ಲೇ ಮನೆ ಬಾಡಿಗೆ ಊಟ, ತಿಂಡಿ, ಮಕ್ಕಳ ವಿದ್ಯಾಭ್ಯಾಸ ಇವೆಲ್ಲವುಗಳನ್ನು ಸುಧಾರಿಸುವುದರಲ್ಲಿ ಜೀವನವೇ ಬೇಡವೇನೊ ಎನಿಸಿದ್ದುಂಟು" ಎಂದು ತಮ್ಮ ಒಡಲಾಳದ ನೋವನ್ನ ತೋಡಿಕೊಂಡರು.

ಅನುರಾಧ, ಜಿಲ್ಲೆಯ ರಾಜ್ಯದ ಮತ್ತು ದೇಶದ ದಲಿತ ಪೌರಕಾರ್ಮಿಕರ ಸಾಕ್ಷಿಪ್ರಜ್ಞೆಯಂತಿದ್ದಾರೆ ಇವರು ಅನುಭವಿಸಿದ ನೋವುಗಳನ್ನೇ ವಿವಿಧ ಸ್ವರೂಪಗಳಲ್ಲಿ ಹಾಸನ ಜಿಲ್ಲೆಯಲ್ಲಿರುವ ಸು. 500 ಕ್ಕೂ ಹೆಚ್ಚು ಗುತ್ತಿಗೆ ಪೌರಕಾರ್ಮಿಕರು ಅನುಭವಿಸುತ್ತಿದ್ದಾರೆ. ಇದರಲ್ಲಿ ಸರಿಸುಮಾರು ಅರ್ಧದಷ್ಟು ಹೆಂಗಸರಿದ್ದಾರೆ. ಕಳೆದ 20–25 ವರ್ಷಗಳಿಂದ ನಗರಸಭೆಯಲ್ಲಿ ಪ್ರಾಮಾಣಿಕವಾಗಿ ನಗರದ ಕಸ ಎತ್ತುವ ಕೆಲಸವನ್ನು ಮಾಡುತ್ತಿರುವ ಇವರನ್ನು ಕೆಲಸಕ್ಕೆ ಸೇರಿಸಿಕೊಂಡಾಗ ಯಾವುದೇ ಪತ್ರವನ್ನು ನೀಡಿರಲಿಲ್ಲ. ಮಾತ್ರವಲ್ಲ ಇಷ್ಟು ವರ್ಷಗಳಾದರೂ ಈಗಲೂ ಇವರು ನಗರಸಭೆಯ ಕಾರ್ಮಿಕರೆನ್ನಲು ಯಾವುದೇ ಗುರುತಿನ ಚೀಟಿಯನ್ನೂ ಸರ್ಕಾರ ನೀಡಿಲ್ಲ.

ಮನೆಯೆಂಬ ಪುಟ್ಟ ಗೂಡುಗಳು

ಅತ್ಯಂತ ಇಕ್ಕಟ್ಟಾದ ಸಣ್ಣ ಸಣ್ಣ ಬಾಡಿಗೆ ಮನೆಗಳಲ್ಲಿರುವ ಇವರುಗಳೆಲ್ಲ ವಾಸಮಾಡುವುದು ಕೊಳಚೆ ಪ್ರದೇಶದಂತಹ ಬಡಾವಣೆಗಳಲ್ಲಿ. ಅದಕ್ಕೆ ಸಾಕ್ಷಿ ಹಾಸನದ ಹಳೆ ಮಟನ್ ಮಾರ್ಕೆಟ್, ಚಿಕ್ಕನಾಳು, ಚಿಪ್ಪಿನಕಟ್ಟೆ, ಸಿದ್ದಯ್ಯನಗರ ಇಂತಹ ಪ್ರದೇಶಗಳು. ಇಲ್ಲಿ, ರಸ್ತೆ, ಚರಂಡಿ ಸೌಕರ್ಯಗಳಿರಲಿ ಕುಡಿಯಲೂ ಸಹ ಸರಿಯಾಗಿ ನೀರೂ ಸಿಗುವುದಿಲ್ಲ. ಅತ್ಯಂತ ಇಕ್ಕಟ್ಟಾದ ಮನೆಗಳು. ಅದರಲ್ಲೇ 2–3 ಸಂಸಾರ. ಸಂಬಂಧಿಕರು ಅಥವಾ ಪರಿಚಯಸ್ಥರು ಮನೆಗೆ ಬಂದರೆ ಅವರನ್ನು ಕೂರಿಸಲೂ ಜಾಗವಿಲ್ಲದಂತಹ ಪರಿಸ್ಥಿತಿ. ಇವರುಗಳು ಹೇಳುವ ಪ್ರಕಾರ ಕಳೆದ 15 ವರ್ಷದ ಹಿಂದೆ ಕೆಲಸಕ್ಕೆ ಸೇರಿದಾಗ ತಿಂಗಳಿಗೆ 1,400 'ರೂ ಸಂಬಳವಿತ್ತು. ಆದರೆ ಈಗ ಈ ಸಂಬಳ 5,333 ರೂ ಆಗಿದ್ದರೂ ವಿಪರೀತ ಬೆಲೆ ಏರಿಕೆಗಳಿಂದ ಜೀವನ ಮತ್ತಷ್ಟು ಬರ್ಬರವಾಗುತ್ತಿದೆ.

ನಾವು ಸ್ವಾತಂತ್ರ್ಯ ದಿನಾಚರಣೆಯಂದು ಜಿಲ್ಲಾ ಕ್ರೀಡಾಂಗಣವನ್ನು ಸ್ವಚ್ಛಗೊಳಿಸಿ ಆಸೆಯಿಂದ ಸ್ವಾತಂತ್ರೋತ್ಸವದ ಸಂಭ್ರಮದಲ್ಲಿ ಪಾಲ್ಗೊಳ್ಳಲು ನಿಂತಿದ್ದರೆ ಅಧಿಕಾರಿಗಳು ಬಂದು " ನೀವು ಇಲ್ಲಿ ನಿಲ್ಲಬೇಡಿ ತುಂಬ ವಾಸನೆ ಬರುತ್ತದೆ. ಮನೆಗೆ ಹೋಗಿ ಸ್ನಾನಮಾಡಿ" ಎಂದು ಕಳುಹಿಸುತ್ತಾರೆ.

ಇಲ್ಲಿ ಕೆಲಸ ಮಾಡುವವರಲ್ಲಿ ಹತ್ತನೇ ತರಗತಿಗಿಂತ ಹೆಚ್ಚು ವಿದ್ಯಾಭ್ಯಾಸ ಮಾಡಿರುವವರು ಯಾರು ಸಿಗುವುದಿಲ್ಲ. ಆದರೆ ತಮ್ಮ ಮಕ್ಕಳನ್ನು ಅವರು ಬಯಸುವಷ್ಟು ಓದಿಸಬೇಕೆಂಬ ಬೆಟ್ಟದಷ್ಟು ಕನಸುಗಳನ್ನು ಹೊತ್ತು ಸಾಗುತ್ತಿರುವವರು ಧಾರಾಳವಾಗಿ ಇದ್ದಾರೆ. ಆದರೆ ವಾಸ್ತವದ ಸಂಗತಿ ಎಂದರೆ ಇಡೀ ಜಿಲ್ಲೆಯಲ್ಲಿರುವ ಪೌರಕಾರ್ಮಿಕರ ಮಕ್ಕಳಲ್ಲಿ ಅತಿ ಹೆಚ್ಚು ವಿದ್ಯಾಭ್ಯಾಸ ಮಾಡಿರುವವರು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕೇವಲ ಇಬ್ಬರು ಕಾನೂನು ಪದವಿ ಪಡೆದಿದ್ದರೆ, ಹಾಸನ ತಾಲ್ಲೂಕಿನಲ್ಲಿ ಒಬ್ಬರು ಬಿ.ಬಿ.ಎಂ. ಅಭ್ಯಾಸ ಮಾಡುತ್ತಿದ್ದಾರೆ. ಉಳಿದವರೆಲ್ಲ ಎಸ್‌ಎಸ್‌ಎಲ್‌ಸಿ, ಪಿಯುಸಿ, ಹೆಚ್ಚೆಂದರೆ ಬೆರಳೆಣಿಕೆಯ ಜನ ಸಾಮಾನ್ಯ ಪದವಿ ಮಾಡಿದವರು ಸಿಗುತ್ತಾರೆ. ಇದರ ಬಗ್ಗೆ ಪೋಷಕರನ್ನು ವಿಚಾರಿಸಿದರೆ ಬರುವ ಸಂಬಳದಲ್ಲಿ ಜೀವನ ಸಾಗಿಸುವುದೇ ತುಂಬ ಕಷ್ಟವಾಗಿರುವಾಗ ಮಕ್ಕಳನ್ನು ದುಬಾರಿ ಫೀಸು, ಡೊನೇಷನ್ ಕೊಟ್ಟು ಎಲ್ಲಿ ಓದಿಸುವುದು ? "ಓದು–ಬರಹ ಎಲ್ಲಾ ದುಡ್ಡಿದ್ದೋರಿಗೆ ನಮ್ಮಂತ ಬಡವರಿಗಲ್ಲ" ಎನ್ನುತ್ತಾರೆ.

ಹಬ್ಬದ ಸಂಭ್ರಮವೂ ಇಲ್ಲದ ಕೆಲಸ

ನಾವು ನಗರದ ಕೊಳಕನ್ನು ಬಳಿದು ಅದನ್ನು ಸುಂದರವಾಗಿಡುತ್ತಿದ್ದರೂ ನಮ್ಮ ಬದುಕು ಮಾತ್ರ ಕತ್ತಲೆಯಲ್ಲೇ ಕೊಳೆಯುತ್ತಿದೆ. ವರ್ಷವಿಡೀ ಕೆಲಸ ಮಾಡುವ ನಮಗೆ ಯಾವುದೇ ಹಬ್ಬ, ಸರ್ಕಾರಿ ರಜೆಗಳು, ರಾಷ್ಟ್ರೀಯ ಹಬ್ಬಗಳಲ್ಲೂ. ರಜೆ ಎಂಬುದೇ ಇಲ್ಲ. ಕನಿಷ್ಠ ವಾರದಲ್ಲಿ ಒಂದು ದಿನವೂ ರಜೆ ಇಲ್ಲದೆ ವಾರದ 7 ದಿನವೂ ಬಿಡುವಿಲ್ಲದಂತೆ ಕೆಲಸ ಮಾಡುತ್ತೇವೆ. ಎಲ್ಲರೂ ಹಬ್ಬದ ಸಂಭ್ರಮದಲ್ಲಿದ್ದರೆ ಅಂದು ನಮಗೆ ಕೆಲಸ ವಿಪರೀತ. ನಾವು ಸ್ವಾತಂತ್ರ್ಯ ದಿನಾಚರಣೆಯಂದು ಜಿಲ್ಲಾ ಕ್ರೀಡಾಂಗಣವನ್ನು ಸ್ವಚ್ಛಗೊಳಿಸಿ ಆಸೆಯಿಂದ ಸ್ವಾತಂತ್ರೋತ್ಸವದ ಸಂಭ್ರಮದಲ್ಲಿ ಪಾಲ್ಗೊಳ್ಳಲು ನಿಂತಿದ್ದರೆ ಅಧಿಕಾರಿಗಳು ಬಂದು " ನೀವು ಇಲ್ಲಿ ನಿಲ್ಲಬೇಡಿ ತುಂಬ ವಾಸನೆ ಬರುತ್ತದೆ. ಮನೆಗೆ ಹೋಗಿ ಸ್ನಾನಮಾಡಿ" ಎಂದು ಕಳುಹಿಸುತ್ತಾರೆ. ಎಲ್ಲವನ್ನು ಸ್ವಚ್ಛಗೊಳಿಸಲು ನಾವು ಬೇಕು. ಆದರೆ ಆ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಮಾತ್ರ ನಾವು ಇವರಿಗೆ ಬೇಡ. ಇಂತಹ ಘಟನೆಗಳಿಂದ ನಮ್ಮ ದೇಶಕ್ಕೆ ಯಾವ ಸ್ವಾತಂತ್ರ್ಯ ಸಿಕ್ಕಿದೆ, ಅದರಿಂದ ಯಾರಿಗೆ ಪ್ರಯೋಜನವಾಗುತ್ತಿದೆ ಎಂಬ ಪ್ರಶ್ನೆಗಳನ್ನು ಇಟ್ಟು ಅವರಿಗಾದ ಅವಮಾನಗಳಿಗೆ ಕಾರ್ಮಿಕ ಪ್ರಕಾಶ್ ಕಣ್ಣೀರಿಟ್ಟರು.

ಕೊನೆಯಿಲ್ಲದೆ ಕಾಡುವ ಅಸ್ಪೃಶ್ಯತೆಯ ಭೂತ

ಮುಂ. ಪುಟಕ್ಕೆ

ತಮಿಳುನಾಡು: ಕೊಕ್ಕಂಪಟ್ಟಿಯಲ್ಲಿ ಅಸ್ಪೃಶ್ಯತೆಗೆ ಪೂರ್ಣ ವಿರಾಮ

ತಮಿಳುನಾಡಿನ ಅಸ್ಪೃಶ್ಯತಾ ನಿರ್ಮೂಲನಾ ರಂಗ (ಟಿಎನ್‌ಯುಇಎಫ್)ನ ಇತಿಹಾಸದಲ್ಲಿ ಮತ್ತೊಂದು ಯಶಸ್ಸಿನ ಅಧ್ಯಾಯ ಸೇರ್ಪಡೆಗೊಂಡಿದೆ.

ಕರೂರು ಜಿಲ್ಲೆಯ ಕೊಕ್ಕಂಪಟ್ಟಿ ಗ್ರಾಮ ಕರೂರು ಮುನ್ಸಿಪಲ್ ಕಾರ್ಪೊರೇಷನ್ ಹೊರವಲಯದಲ್ಲಿದೆ. ಇಲ್ಲಿ ಸುಮಾರು ಹಿಂದೂಗಳ 300 ಕುಟುಂಬಗಳು ಹಾಗೂ ಅರುಂಧತಿಯಾರ್ ವಿಭಾಗಕ್ಕೆ ಸೇರಿದ 23 ದಲಿತ ಕುಟುಂಬಗಳು ವಾಸಿಸುತ್ತವೆ. ಈ ಗ್ರಾಮದಲ್ಲಿ ಹಿಂದಿನಿಂದಲೂ ವಿಚಿತ್ರ ಹಾಗೂ ಅನಾಗರಿಕ ಪದ್ಧತಿ ಜಾರಿಯಲ್ಲಿತ್ತು. ದಲಿತ ಸಮುದಾಯದ ಒಂದು ಸಣ್ಣ ಗುಂಪಿನ ವಿರೋಧವಿದ್ದರೂ ಅಸ್ಪೃಶ್ಯತೆಯ ಕೆಟ್ಟ ಮುಖದ ಅನಾವರಣ ಇಲ್ಲಿ ಆಗುತ್ತಿತ್ತು. ಹಿಂದೂ ಸವರ್ಣೀಯ ಅಂದರೆ ಮೇಲ್ಜಾತಿಯ ಕುಟುಂಬಗಳು ನಡೆದಾಡುವ ದಾರಿಯಲ್ಲಿ ದಲಿತರು ಚಪ್ಪಲಿ ಹಾಕಿಕೊಂಡು ನಡೆಯುವಂತಿರಲಿಲ್ಲ. ನ್ಯಾಯಬೆಲೆ ಅಂಗಡಿಗಳಲ್ಲಿ ದಲಿತರಿಗೆ ಪ್ರತ್ಯೇಕ ಸಾಲು ಇರುತ್ತಿತ್ತು. ಮೇಲ್ಜಾತಿ ಕುಟುಂಬಗಳಿಗೆ ನೀಡಿ ಮಿಕ್ಕುಳಿದ ವಸ್ತುಗಳನ್ನು ರೇಷನ್ ಅಂಗಡಿಗಳಲ್ಲಿ ದಲಿತರಿಗೆ ನೀಡಲಾಗುತ್ತಿತ್ತು. ಗ್ರಾಮದಲ್ಲಿ ಎರಡು ವಿಭಾಗವನ್ನು ಪ್ರತ್ಯೇಕಿಸುವ ದಾರಿಯಲ್ಲಿ ದಲಿತರು ವಾಹನ ಚಲಾಯಿಸುವಂತಿರಲಿಲ್ಲ. ದಾರಿಗೆ ಅರ್ಧ ಕಿ.ಮೀ. ಮುಂಚೆಯೇ ವಾಹನದಿಂದ ಇಳಿದು ತಳ್ಳಿಕೊಂಡು ಬರಬೇಕಿತ್ತು.

ಅಂಗನವಾಡಿ, ಬಿಸಿಯೂಟ ಕೇಂದ್ರಗಳಲ್ಲಿ ದಲಿತರ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಪ್ರತ್ಯೇಕ ತಟ್ಟೆ ಹಾಗೂ ಲೋಟವನ್ನು ಇಡಲಾಗುತ್ತಿತ್ತು. ಅವರು ಅದನ್ನು ತೆಗೆದುಕೊಂಡು ಮರುದಿನ ವಾಪಸ್ ತರಬೇಕಿತ್ತು.

2012 ಡಿಸೆಂಬರ್‌ನಲ್ಲಿ ನಡೆದ ಉತ್ಸವದ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವ ಜಾಗದಲ್ಲಿ ಕೃಷ್ಣಮೂರ್ತಿ ಎಂಬ ದಲಿತ ಯುವಕ ಚಪ್ಪಲಿ ಹಾಕಿಕೊಂಡಿದ್ದ. ಇದನ್ನು ನೋಡಿದ ಮೇಲ್ಜಾತಿಗಳ ಜನರ ಒಂದು ಗುಂಪು ಈತನ ಮೇಲೆ ಹಲ್ಲೆ ನಡೆಸಿತ್ತು. ಈ ಸುದ್ದಿ ತಿಳಿಯುತ್ತಿದ್ದಂತೆಯೇ ಟಿಎನ್‌ಯುಇಎಫ್, ಆದಿ ತಮಿಳರ್ ಪಿರವೈ, ಚಿರುತೈಗಳ್ ಕಚ್ಚಿ ಮತ್ತು ಇತರ ಸಂಘಟನೆಗಳು ಮಧ್ಯಪ್ರವೇಶ ಮಾಡಿದವು. ಸಂಘಟನೆಗಳ ನಾಯಕರು ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ವಾಸ್ತವ ಪರಿಸ್ಥಿತಿಯನ್ನು ಅಧ್ಯಯನ ಮಾಡಿದವು.

ನಾಗರಿಕ ಸಮಾಜದಲ್ಲಿ ಊಹೆಗೂ ನಿಲುಕದ ಅಮಾನವೀಯ ಹಾಗೂ ಅತ್ಯಂತ ಹೇಯ ಪದ್ಧತಿಗಳು ಇಲ್ಲಿ ಆಚರಣೆಯಲ್ಲಿದ್ದವು. ಈ ಕ್ರೌರ್ಯವನ್ನು ವಿರೋಧಿಸಿ ತಹಶೀಲ್ದಾರ್ ಕಚೇರಿಯ ಮುಂದೆ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯ ನಂತರವೂ ಪರಿಸ್ಥಿತಿ ಬದಲಾಗಲಿಲ್ಲ. ಅಧಿಕಾರಿಗಳಿಂದ ಯಾವುದೇ ಸ್ಪಂದನೆ ಸಿಗಲಿಲ್ಲ. ಇದರಿಂದಾಗಿ, ಜನವರಿ 9ರಂದು ಎರಡನೇ ಹಂತದ ಹೋರಾಟ ನಡೆಸಲು ತೀರ್ಮಾನಿಸಲಾಯಿತು.

ಈ ಹೋರಾಟದಲ್ಲಿ ಗಣರಾಜ್ಯದ ದಿನ ಅಸ್ಪೃಶ್ಯತೆ ಆಚರಣೆಯಲ್ಲಿದ್ದ ಗ್ರಾಮದ ದಾರಿಗಳಲ್ಲಿ ಬೃಹತ್ ನಡಿಗೆಯನ್ನು ಹಮ್ಮಿಕೊಳ್ಳುವ ಘೋಷಣೆ ಮಾಡಲಾಯಿತು. ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಕೆ. ವರದರಾಜನ್ ಈ ಹೋರಾಟದ ನೇತೃತ್ವ ವಹಿಸುವ ಪ್ರಕಟಣೆಯನ್ನೂ ಮಾಡಲಾಯಿತು.

ಇಷ್ಟಾದರೂ ಜಿಲ್ಲಾಡಳಿತ ಈ ಸಮಸ್ಯೆಯನ್ನು ಬಗೆಹರಿಸುವ ಗೋಜಿಗೆ ಹೋಲಿಲ್ಲ. ಅದಕ್ಕೆ ಬದಲಾಗಿ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನವನ್ನು ನಡೆಸಿತು.

ಜನವರಿ 26ರಂದು ಸಿಪಿಐ(ಎಂ), ಟಿಎನ್‌ಯುಇಎಫ್, ಆದಿ ತಮಿಳರ್ ಪಿರವೈ, ವಿಸಿಕೆ ಮತ್ತು ಇತರ ಸಂಘಟನೆಗಳು, ಮಹಿಳೆಯರ ಸಂಘಟನೆಗಳ ಕಾರ್ಯಕರ್ತರು ಗ್ರಾಮದ ಮುಖ್ಯ ರಸ್ತೆಯಲ್ಲಿ ಸೇರಿದರು. ಕೆ. ವರದರಾಜನ್, ಕಿಲ್ವೆಲೂರು ಶಾಸಕ ನಾಗೈಮಾಲಿ, ಟಿಎನ್‌ಯುಇಎಫ್ ಪ್ರಧಾನ ಕಾರ್ಯದರ್ಶಿ ಕೆ. ಸ್ಯಾಮ್ಯುವೆಲ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಂದಸ್ವಾಮಿ ಮೊದಲಾದವರು ಹೋರಾಟವನ್ನು ಮುನ್ನಡೆಸಿದರು.

ಈ ಹೋರಾಟಕ್ಕೆ ಸಿಕ್ಕ ಅಭೂತಪೂರ್ವ ಜನಬೆಂಬಲ ವ್ಯಾಪಕ ಸ್ಪಂದನೆಯನ್ನು ಉಂಟುಮಾಡಿತು. ನಿದ್ರಾವಸ್ಥೆಯಲ್ಲಿದ್ದ ಜಿಲ್ಲಾಡಳಿತಕ್ಕೆ ಬಿಸಿ ಮುಟ್ಟಿತು. ಅಧಿಕಾರಿಗಳು ಎಚ್ಚೆತ್ತು ತಕ್ಷಣ ಮಾತುಕತೆಗೆ ಮುಂದಾಗುವಂತೆ ಅನಿವಾರ್ಯ ಪರಿಸ್ಥಿತಿಯನ್ನು ಈ ಹೋರಾಟ ನಿರ್ಮಿಸಿತು. ಜಿಲ್ಲಾಡಳಿತ ಸೌಹಾರ್ದ ಮಾತುಕತೆಗೆ ಆಹ್ವಾನಿಸಿತು. ಲಿಖಿತ ಆಹ್ವಾನ ನೀಡುವಂತೆ ಹೋರಾಟ ಸಮಿತಿಯ ನಾಯಕರು ಒತ್ತಾಯ ಮಾಡಿದರು.

ಇದರ ಪರಿಣಾಮವಾಗಿ ಹೋರಾಟ ಒಳ್ಳೆಯ ಅಂತ್ಯ ಕಂಡಿತು. ಶಾಸಕ ನಾಗೈಮಾಲಿ ಮತ್ತು ಅಧಿಕಾರಿಗಳ ತಂಡ ಗ್ರಾಮಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಉಭಯ ಗುಂಪುಗಳ ನಡುವೆ ಒಪ್ಪಂದವೊಂದನ್ನು ಮಾಡಲಾಯಿತು. ಸವರ್ಣೀಯ ಕುಟುಂಬಗಳ ಬೀದಿಯಲ್ಲೂ ದಲಿತರು ಚಪ್ಪಲಿ ಹಾಕಿ ನಡೆಯುವಂತಾಯಿತು. ಈ ಗ್ರಾಮದಲ್ಲಿ ಇದ್ದ ಎಲ್ಲ ಅಸ್ಪೃಶ್ಯತಾ ಪದ್ಧತಿಗಳಿಗೆ ಇತಿಶ್ರೀ ಹಾಡಲಾಯಿತು.

ಅಸ್ಪೃಶ್ಯತಾ ವಿರೋಧಿ ಹೋರಾಟಕ್ಕೆ ಸಂದ ಈ ಅಭೂತಪೂರ್ವ ಯಶಸ್ಸನ್ನು ಗ್ರಾಮದಲ್ಲಿ ಆಚರಿಸಲಾಯಿತು. ಪೆರಿಯಾರ್ ಅವರ ಪ್ರತಿಮೆಗೆ ಹಾರ ಹಾಕಿದ ಕೆ. ವರದರಾಜನ್, ಹೋರಾಟದಲ್ಲಿ ಪಾಲ್ಗೊಂಡ ಜನರಿಗೆ ಅಭಿನಂದನೆ ಸಲ್ಲಿಸಿದರು. ಕೊಕ್ಕಂಪಟ್ಟಿಯಲ್ಲಿ ನಡೆದ ಈ ಹೋರಾಟವು ಅಸ್ಪೃಶ್ಯತೆ ವಿರೋಧಿ ಹೋರಾಟದ ಅಂತ್ಯವಲ್ಲ, ಇನ್ನುಳಿದ ಗ್ರಾಮಗಳಲ್ಲೂ ಈ ಹೋರಾಟ ಮುಂದುವರಿಯಲಿದ್ದು, ದಲಿತರ ಮೇಲಿನ ದೌರ್ಜನ್ಯಕ್ಕೆ ಶಾಶ್ವತ ವಿದಾಯ ಹೇಳುವ ದಿನ ದೂರವಿಲ್ಲ ಎಂದು ನಾಯಕರು ಇಲ್ಲಿ ಘೋಷಿಸಿದರು.

ದಲಿತರೆ ಕಸ ಎತ್ತ ಬೇಕೆ?

ಪುಟ 11 ರಿಂದ


"ಇಷ್ಟು ಮಾತ್ರವಲ್ಲದೇ ನಾವು ಕೆಲಸ ಮಾಡುವ ಬೀದಿಗಳಲ್ಲಿರುವ ಮನೆಗಳಲ್ಲಿ ಕುಡಿಯಲು ನೀರು ಕೇಳಿದರೆ ಕೊಡಲು ಹಿಂದೆ ಮುಂದೆ ನೋಡುತ್ತಾರೆ. ಸ್ವಲ್ಪ ಒತ್ತಾಯ ಮಾಡಿದರೆ ನೀರನ್ನು ತಂದು ಮೇಲಿನಿಂದ ಬೊಗಸೆಗೆ ಸುರಿಯುತ್ತಾರೆ. ಇಲ್ಲದಿದ್ದರೆ ಸ್ನಾನದ ಮನೆಯಲ್ಲಿರುವ ಪ್ಲಾಸ್ಟಿಕ್ ಚೆಂಬಿನಲ್ಲಿ ಕೊಡುತ್ತಾರೆ. ಹೋಟೆಲ್‌ಗಳಲ್ಲಿ ಕಾಫಿ–ಟೀ ಕುಡಿಯಲು ಹೋದರೆ ನಾವುಗಳು ಎಲ್ಲರಂತೆ ಹೋಗಿ ಟೇಬಲ್‌ಗಳ ಮೇಲೆ ಕುಳಿತುಕೊಂಡರೆ ಹೋಟೆಲ್ ಮಾಲೀಕ ನಮ್ಮನ್ನು ನೋಡುವ ವಿಧಾನವನ್ನೇ ಬದಲಾಯಿಸುತ್ತಾನೆ. ಮಾತ್ರವಲ್ಲ ಅಲ್ಲಿ ಎಲ್ಲರಿಗೂ ಸ್ಟೀಲ್ ಲೋಟಗಳಲ್ಲಿ ಕಾಫಿ–ಟೀ ಕೊಟ್ಟರೆ ನಮಗೆ ಪ್ಲಾಸ್ಟಿಕ್ ಲೋಟದಲ್ಲಿ ನೀಡುತ್ತಾರೆ. ಎಲ್ಲಿ ಹೋದರೂ ನಮ್ಮನ್ನು ಮನುಷ್ಯರಂತೆ ಕಾಣುವ ಪರಿಸ್ಥಿತಿ ಇಲ್ಲ. ಇದೆಲ್ಲ ನೋಡಿದಾಗ ನಾವು ಮನುಷ್ಯರು ಹೌದೋ ಅಲ್ಲವೂ ಅಥವಾ ಇದು ನಾಗರೀಕ ಸಮಾಜ ಹೌದೋ ಅಲ್ಲವೋ ಎಂದು ಅನುಮಾನಗಳು ಬರುತ್ತವೆ" ಎಂದರು ಪ್ರಕಾಶ್. ಅವರ ಮಗನಾದ ಮಂಜುನಾಥ್‌ನನ್ನು ಮಾತನಾಡಿಸಿದಾಗ ಅವನು ಹೇಳಿದ್ದು "ನಮ್ಮ ತಂದೆ ತಾಯಿ ತುಂಬ ಕಷ್ಟಪಟ್ಟು ಅವರು ಉಪವಾಸವಿದ್ದು ಕಸಗುಡಿಸಿ ನಮ್ಮನ್ನು ಬೆಳೆಸಿ ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಆದರೆ ಈಗಲೂ ಅವರು ಪಡುವ ಕಷ್ಟ ಮತ್ತು ಅವಮಾನಗಳನ್ನು ನೋಡಿದರೆ ನಮಗೆ ಈ ಅನಿಷ್ಟ ಜಾತಿ ವ್ಯವಸ್ಥೆಯ ಮೇಲೆ ಎಲ್ಲಿಲ್ಲದ ಸಿಟ್ಟು ಬರುತ್ತದೆ, ನಾವು ಓದಿದ ಪಠ್ಯಪುಸ್ತಕದಲ್ಲಿ ಜೀತಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆ ಎಂದು ಓದಿದ್ದೆವು. ಆದರೆ ನಮ್ಮ ಅಪ್ಪ ಅಮ್ಮ ಮತ್ತಿತರೆ ಪೌರಕಾರ್ಮಿಕರನ್ನು ನೋಡಿದರೆ ಜೀತಪದ್ಧತಿ ಇನ್ನೂ ಜೀವಂತವಾಗಿದೆಯೇನೂ ಅನ್ನಿಸುತ್ತದೆ. ನಾನು ಅಪ್ಪ ಅಮ್ಮ ಮಾಡುತ್ತಿರುವ ಈ ಕೆಲಸವನ್ನು ಎಂದಿಗೂ ಮಾಡಲು ಬಯಸುವುದಿಲ್ಲ. ಇದು ಇಲ್ಲಿಗೇ ಕೊನೆಯಾಗಬೇಕು. ನಾವುಗಳು ಅಪ್ಪನ ಆಲದ ಮರಕ್ಕೆ ನೇಣು ಹಾಕಿಕೊಳ್ಳುವುದು ತಪ್ಪಿ ನಾವು ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಗಳಿಸಿ ಎಲ್ಲರಂತೆ ಉತ್ತಮ ಜೀವನ ನಡೆಸಬೇಕೆಂಬುದೇ ನಮ್ಮೆಲ್ಲರ ಆಸೆ" ಎಂದರು.

ಮತ್ತೊರ್ವ ಕಾರ್ಮಿಕರಾದ ಮಂಗಳಮ್ಮ ತಮ್ಮ ಅನುಭವವನ್ನು ಹಂಚಿಕೊಂಡರು. ಒಮ್ಮೆ ಅವರು ನಗರದ ರಸ್ತೆಯ ಬದಿಯಲ್ಲಿ ಕಸ ಗುಡಿಸುತ್ತಿದ್ದರಂತೆ. ಆಗ ಆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಒಬ್ಬ ನಾಗರೀಕ ಧೂಳು ಬರುತ್ತಿದೆ. ಕಸ ಗುಡಿಸುವುದನ್ನು ನಿಲ್ಲಿಸು, ನಾನು ಹೋದ ಮೇಲೆ ಗುಡಿಸು ಎಂದ, ನನಗೆ ಆ ಕ್ಷಣ ಹೊಳೆದದ್ದೇನೆಂದರೆ–ಒಂದು ನಿಮಿಷ ಈಚೆಯಿಂದ ಆಚೆಗೆ ಹೋಗಲು ವಿಪರೀತ ಧೂಳು ಎಂದು ಆತ ಹೇಳಿ ಮೂಗು ಮುಚ್ಚಿಕೊಂಡು ಹೋಗುವುದಾದರೆ ಧೂಳಿನ ಸಾಮ್ರಾಜ್ಯದಂತಿರುವ ಹಾಸನ ನಗರದಲ್ಲಿ ಕಳೆದ 15 ವರ್ಷಗಳಿಂದ ನಾನು ಇದೇ ರಸ್ತೆಗಳಲ್ಲೇ ಕಸ ಗುಡಿಸುತ್ತಿದ್ದೇನಲ್ಲ ನಾನು ಇನ್ನೆಷ್ಟು ಧೂಳನ್ನು ಕುಡಿದಿರಬೇಕು.!! ಭವಿಷ್ಯದಲ್ಲಿ ನನ್ನ ಆರೋಗ್ಯದ ಸ್ಥಿತಿ ಏನು ?ಎಂಬ ದಿಗಿಲು ಬೀಳಿಸುವ ಪ್ರಶ್ನೆ, ಆಗಿನಿಂದ ನನಗನಿಸಿದ್ದು ನಾವು ಕಷ್ಟ ಪಟ್ಟು ದುಡಿಯುವವರು. ನಮ್ಮ ಆರೋಗ್ಯ, ಕೆಲಸದ ಭದ್ರತೆ, ಸರಿಯಾದ ಸಂಬಳ, ಕೆಲಸದ ಸಮಯದಲ್ಲಾಗುವ ಅಪಘಾತಗಳಿಗೆ ಸೂಕ್ತ ಪರಿಹಾರ, ನಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ, ಮೈಯಲ್ಲಿ ಬಲವಿರುವವರೆಗೆ ಕೆಲಸಮಾಡಿ ವಯಸ್ಸಾದ ಮೇಲೆ ನಮ್ಮ ಬದುಕನ್ನು ರೂಪಿಸಿಕೊಳ್ಳಲು ಪಿಂಚಣಿ ಹಣ ಇವುಗಳನ್ನು ಪಡೆಯದಿದ್ದರೆ ನಮ್ಮ ಬದುಕು ಮತ್ತು ನಮ್ಮ ಮಕ್ಕಳ ಬದುಕು ಮೂರಾ ಬಟ್ಟೆಯಾಗುತ್ತದೆ ಎಂಬುದು ಖಾತ್ರಿ ಅನಿಸಿತು. ಆದ್ದರಿಂದ ನಾವೆಲ್ಲರೂ ಒಗ್ಗಟ್ಟಾಗಿ ಸಿಐಟಿಯು ಕಾರ್ಮಿಕ ಸಂಘವನ್ನು ಸೇರಿ ಅಲ್ಲಿ ನಿಜವಾದ ಜೀವನದ ಸಂಘರ್ಷವನ್ನು ಆರಂಭಿಸಿ ನಮ್ಮ ಬದುಕನ್ನು ಹಸನು ಗೊಳಿಸಿಕೊಳ್ಳುವ ದಾರಿಯಲ್ಲಿ ಮುನ್ನಡೆಯುತ್ತಿದ್ದೇವೆ ಎಂದು ದೃಢ ವಿಶ್ವಾಸದ ಮಾತುಗಳನ್ನಾಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಲೈಂಗಿಕ ಹಲ್ಲೆ ಕುರಿತ ಸುಗ್ರೀವಾಜ್ಞೆ: ಗಂಭೀರ ಪ್ರಶ್ನೆಗಳನ್ನು ಬದಿಗೊತ್ತುವ ಪ್ರಯತ್ನ

ಯುಪಿಎ-2 ಸಂಪುಟ ಲೈಂಗಿಕ ಹಲ್ಲೆಗಳನ್ನು ತಡೆಗಟ್ಟಲೆಂದು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಆದರೆ ಈ ದಿಕ್ಕಿನಲ್ಲಿ ಸರಕಾರದಿಂದ ಅರ್ಥಪೂರ್ಣ ಕ್ರಮಗಳನ್ನು ನಿರೀಕ್ಷಿಸಿದ್ದ ಮಹಿಳಾ ಸಂಘಟನೆಗಳು ಇದನ್ನು ಸ್ವಾಗತಿಸದೆ, ಪ್ರತಿಭಟಿಸುವ ರೀತಿಯಲ್ಲಿ ರೂಪಿಸಲಾಗಿದೆ. ಈ ಪ್ರಶ್ನೆಯ ಆಮೂಲಾಗ್ರ ಪರಿಶೀಲನೆ ನಡೆಸಿ ಒಂದು ಉತ್ತಮ ವರದಿಯನ್ನು ಸಲ್ಲಿಸಿರುವ ವರ್ಮಾ ಸಮಿತಿ ಶಿಫಾರಸುಗಳನ್ನು ಎಲ್ಲರೂ ಸ್ವಾಗತಿಸಿದ್ದಾರೆ. ಆದರೆ ಅದರಲ್ಲಿನ ಪ್ರಮುಖ ಅಂಶಗಳನ್ನು ಸಮಗ್ರವಾಗಿ ಒಳಗೊಳ್ಳದೆ, ಅಲ್ಲೊಂದು ಇಲ್ಲೊಂದು ಪಟ್ಟಭದ್ರರ ವಿರೋಧವಿಲ್ಲದಂತಹ ಅಂಶಗಳನ್ನು ಮಾತ್ರ ಈ ಸುಗ್ರೀವಾಜ್ಞೆ ಒಳಗೊಂಡಿದೆ, ಈ ಸುಗ್ರೀವಾಜ್ಞೆಯಲ್ಲಿ



ಈ ಗಂಭೀರ ಪ್ರಶ್ನೆಯನ್ನು ಎದುರಿಸುವ ಪ್ರಾಮಾಣಿಕತೆ ಕಾಣುತ್ತಿಲ್ಲ ಎಂಬುದು ಸಾರ್ವತ್ರಿಕವಾಗಿ ಬಂದಿರುವ ಟೀಕೆ.

ಸಂಸತ್ತಿನ ಆಧಿವೇಶನ ಇನ್ನು ಮೂರು ವಾರಗಳಲ್ಲಿ ಆರಂಭವಾಗಲಿತ್ತು. ಅಂತಿರುವಾಗ ಅಷ್ಟೊಂದು ತರಾತುರಿಯಿಂದ ಇಂತಹ ಸುಗ್ರೀವಾಜ್ಞೆಯನ್ನು ತರುವ ಅಗತ್ಯವಾದರೂ ಏನಿತ್ತು? ದಿಲ್ಲಿಯ ಹೀನ ಕೃತ್ಯಕ್ಕೆ ದೇಶಾದ್ಯಂತ ವ್ಯಕ್ತವಾದ ಅಕ್ರೋಶದ ನಂತರವೂ ಮಹಿಳೆಯರ ಮೇಲಿನ ಅತ್ಯಾಚಾರಗಳ ವರದಿಗಳು ಬರುತ್ತಲೇ ಇರುವುದರಿಂದ ಇದು ಅಗತ್ಯವಾಗಿತ್ತು ಎಂಬುದು ಕೇವಲ ಸಬೂಬು ಆಗಬಹುದಷ್ಟೇ. ಏಕೆಂದರೆ ಈ ಸುಗ್ರೀವಾಜ್ಞೆಯಲ್ಲಿ ಅಂತಹ ತುರ್ತು ಕಾಣುತ್ತಿಲ್ಲ.

ವರ್ಮಾ ಸಮಿತಿ ಮಹಿಳೆಯರ ಮೇಲಿನ ಅತ್ಯಾಚಾರಗಳು ಮತ್ತು ಲೈಂಗಿಕ ಹಲ್ಲೆಗಳ ಕುರಿತು ಒಂದು ಬಹುವಲಯಗಳನ್ನು ಆವರಿಸಿರುವ ಸಮಗ್ರ ಚೌಕಟ್ಟನ್ನು ಒದಗಿಸಿದೆ. ಯುಪಿಎ-2 ಸರಕಾರ ಈ ಬಗ್ಗೆ ಒಂದು ಸಮಗ್ರ ನಿಲುವನ್ನು ತಳೆಯಬೇಕಿತ್ತು, ಬದಲಾಗಿ ಅದು ಅಲ್ಲಿ-ಇಲ್ಲಿ ತನಗೆ ಬೇಕಾದುದನ್ನು ಮಾತ್ರ ಹೆಕ್ಕಿ ಈ ಶಿಫಾರಸುಗಳನ್ನು ಛಿದ್ರಗೊಳಿಸಿದೆ, ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹೇಳಿದೆ. ಈ ಅರೆ-ಬರೆ, ಛಿದ್ರಿತ ಸುಗ್ರೀವಾಜ್ಞೆ ಲೈಂಗಿಕ ಹಿಂಸಾಚಾರಗಳಿಗೆ ಬಲಿಯಾದವರಿಗೆ ಸಾಂತ್ವನ ಒದಗಿಸುವ ಆಶಯವನ್ನು ಬುಡಮೇಲು ಮಾಡಿದೆ ಎಂದು ಅದು ಅಭಿಪ್ರಾಯ ಪಟ್ಟಿದೆ.

ಪ್ರಭುತ್ವ ಇಂತಹ ಅಪರಾಧಗಳಿಗೆ ಎಷ್ಟರ ಮಟ್ಟಿಗೆ ಶಿಕ್ಷಾರ್ಹವಾಗುತ್ತದೆ, ತಮ್ಮ ಜವಾಬ್ದಾರಿಗಳನ್ನು ಹಗುರವಾಗಿ ಕಾಣುವ ಅಧಿಕಾರಿಗಳನ್ನು, ಅವರ ಮೇಲಣ ಉಸ್ತುವಾರಿಗಳನ್ನು ಹೇಗೆ ಶಿಕ್ಷೆಗೆ ಗುರಿಪಡಿಸುವುದು, ಸೇನೆಗೆ ವಿಶೇಷ ಅಧಿಕಾರ ನೀಡಿರುವ ಎಎಫ್‌ಎಸ್‌ಪಿಎ ಕಾನೂನಿನ ಪರಾಮರ್ಶೆ, ಸೇನಾ ಸಿಬ್ಬಂದಿಯನ್ನು ಕ್ರಿಮಿನಲ್ ಕಾನೂನುಗಳ ವ್ಯಾಪ್ತಿಗೆ ತರುವುದು ಈ ಪ್ರಮುಖ ಪ್ರಶ್ನೆಗಳನ್ನೆಲ್ಲ ಸುಗ್ರೀವಾಜ್ಞೆ ಕೈಬಿಟ್ಟಿದೆ. ವೈವಾಹಿಕ ಅತ್ಯಾಚಾರ, ಲೈಂಗಿಕ ಸ್ವಾಯತ್ತತೆ ಮುಂತಾದವುಗಳ ಬಗ್ಗೆಯೂ ಮೌನ. ಒಟ್ಟಿನಲ್ಲಿ ವರ್ಮಾ ಸಮಿತಿಯ ಕೆಲಸಕ್ಕೆ ಸಾಕಷ್ಟು ನ್ಯಾಯ ಸಂದಿಲ್ಲ ಎಂದು ಮಹಿಳಾ ಸಂಘಟನೆಗಳು ಖೇದ ವ್ಯಕ್ತಪಡಿಸಿವೆ.

ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಲೈಂಗಿಕ ಹಲ್ಲೆಗೂ ಒಂದು ನಿರ್ದಿಷ್ಟ ಲಿಂಗಕ್ಕೂ ಸಂಬಂಧವಿಲ್ಲ ಎಂಬಂತೆ ಈ ಅಪರಾಧವನ್ನು ಪರಿಗಣಿಸಲಾಗುತ್ತಿದೆ, ಇದನ್ನು ಬದಲಿಸಿ ಇವು ನಿರ್ದಿಷ್ಟ ಲಿಂಗ-ಸಂಬಂಧಿ ಅಪರಾಧಗಳೆಂದು ಪರಿಗಣಿಸಬೇಕು ಎಂಬ ವರ್ಮಾ ಸಮಿತಿಯ ಶಿಫಾರಸನ್ನು ಈ ಸುಗ್ರೀವಾಜ್ಞೆ ಕಡೆಗಣಿಸಿ, ಅತ್ಯಾಚಾರ ಎಂಬುದು ಮಹಿಳೆಯರ ವಿರುದ್ಧ ಎಸಗುವ ಅತ್ಯಂತ ಹೀನ ಕೃತ್ಯವೆಂಬ ವಾಸ್ತವತೆಯನ್ನು ಈ ಸುಗ್ರೀವಾಜ್ಞೆ ದುರ್ಬಲಗೊಳಿಸಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ. ಸರಕಾರ ಈ ಎಲ್ಲ ವಿಚಾರಗಳ ಮೇಲೆ ಸಮಾಲೋಚನೆಗಳನ್ನು ನಡೆಸಿ ಸಂಸತ್ತಿನಲ್ಲಿ ತಿದ್ದುಪಡಿಗಳನ್ನು ಮಂಡಿಸ ಬಹುದಿತ್ತು. ವರ್ಮಾ ಸಮಿತಿಯ ಸಮಗ್ರ ಕಣ್ಣೋಟವನ್ನು ಉಪೇಕ್ಷಿಸದ ರೀತಿಯಲ್ಲಿ ಈ ಸುಗ್ರೀವಾಜ್ಞೆಯ ಪರಾಮರ್ಶೆ ಅಗತ್ಯ ಎಂದು ಅದು ಆಗ್ರಹಿಸಿದೆ.


ಯುಪಿಎ-2 ಸರಕಾರ ಈ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದು ದೇಶವ್ಯಾಪಿ ಆಕ್ರೋಶದ ನಂತರ ತಾನೇನೂ ಸುಮ್ಮನೆ ಕೂತಿಲ್ಲ ಎಂದು ಪ್ರದರ್ಶಿಸಲು- ಆದರೆ ಇದು ಪ್ರದರ್ಶಿಸಿರುವುದು ಅದು ಏನು ಮಾಡಬೇಕೆಂದಿದೆ ಎಂದಲ್ಲ, ಏನು ಮಾಡಬಾರದೆಂದಿದೆ ಎಂದೇ. ಆದ್ದರಿಂದಲೇ ಈ ಸುಗ್ರೀವಾಜ್ಞೆಗೆ ಮಹಿಳಾ ಸಂಘಟನೆಗಳ ವ್ಯಾಪಕ ವಿರೋಧ ವ್ಯಕ್ತವಾಗಿರುವುದು.

ಯುಪಿಎ-2 ಆಳ್ವಿಕೆಯಲ್ಲಿ ರೇಗಾ: ಉದ್ಯೋಗ ನಿರ್ಮಾಣದಲ್ಲಿ ತೀವ್ರ ಇಳಿಕೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ, ಅಥವ ಸಾಮಾನ್ಯವಾಗಿ 'ರೇಗಾ' ಎಂದು ಕರೆಯಲ್ಪಡುವ ಯೋಜನೆಯ ಯಶಸ್ಸಿನ ಬಗ್ಗೆ ದಿಲ್ಲಿಯಲ್ಲಿ ಒಂದು ಸಮ್ಮೇಳನದಲ್ಲಿ ಯುಪಿಎ ಅಧ್ಯಕ್ಷರು ಮತ್ತು ಪ್ರಧಾನ ಮಂತ್ರಿಗಳು ಬಹಳಷ್ಟು ಬೆನ್ನು ತಟ್ಟಿಕೊಂಡರು. ಯುಪಿಎ ಅಧ್ಯಕ್ಷೆ ಇದು ಎರಡನೇ ಹಸಿರು ಕ್ರಾಂತಿಗೆ ವೇದಿಕೆಯಾಗಬಲ್ಲದು ಎಂದರೆ, ಪ್ರಧಾನ ಮಂತ್ರಿಗಳು 'ಒಳಗೊಳ್ಳುವ ಬೆಳವಣಿಗೆಯ ಸಾಧನ' ಎಂದು ಹೇಳಿದರು.

ಆದರೆ ನವ-ಉದಾರವಾದವನ್ನು ಆತುಕೊಂಡಿರುವ ಒಂದು ವ್ಯವಸ್ಥೆಯಲ್ಲಿ ಇಂತಹ ಸಾಧನಗಳು ಕೇವಲ ತೋರಿಕೆಯ ಸಾಧನಗಳಾಗಿ ಉಳಿಯುತ್ತವೆ. ಏಕೆಂದರೆ ಇತ್ತೀಚಿನ ಮಾಹಿತಿಗಳ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ನಿರ್ಮಾಣದ ಭರವಸೆ ಕೊಡುವ ಈ ಯೋಜನೆಯಲ್ಲಿ ಉದ್ಯೋಗಗಳ ನಿರ್ಮಾಣ ಯುಪಿಎ-2 ಸರಕಾರದ ಆಳ್ವಿಕೆಯಲ್ಲಿ ಸತತವಾಗಿ ಇಳಿಯುತ್ತಿದೆ. ಈ ಇಳಿಕೆ ದಲಿತರು ಮತ್ತು ಆದಿವಾಸಿ ಜನಗಳ ನಡುವೆ ಇನ್ನಷ್ಟು ಹೆಚ್ಚು.

2009-10 ರಿಂದ 2011-12 ರ ನಡುವೆ ಈ ಯೋಜನೆಯಲ್ಲಿ ಉದ್ಯೋಗ ನಿರ್ಮಾಣದ ಪ್ರಮಾಣದಲ್ಲಿ ಅದರ ಹಿಂದಿನ ಮೂರು ವರ್ಷಗಳಿಗೆ (ಯುಪಿಎ-2 ಸರಕಾರದ ಮೊದಲ 3 ವರ್ಷಗಳು) ಹೋಲಿಸಿದರೆ 25ಶೇ.ದಷ್ಟು ಇಳಿಕೆಯಾಗಿದೆ- 284 ಕೋಟಿ ವ್ಯಕ್ತಿದಿನಗಳಿಂದ 211 ಕೋಟಿಗಿಳಿದಿದೆ. 2013 ರ ಜನವರಿ



ವೇದರಾಜ ಎನ್.ಕೆ.

ಅಂತ್ಯದ ವರೆಗಿನ ಮಾಹಿತಿಯನ್ನು ನೋಡಿದರೆ ಈ ಪ್ರವೃತ್ತಿ ಮುಂದುವರೆಯುತ್ತಿರುವಂತೆ ಕಾಣುತ್ತಿದೆ.

ಕೆಲವು ರಾಜ್ಯಗಳಲ್ಲಿ ಈ ಇಳಿಕೆ ಗಮನಾರ್ಹವಾಗಿದೆ-ಕರ್ನಾಟಕ ಇದರಲ್ಲಿ 65ಶೇ.ಇಳಿಕೆಯೊಂದಿಗೆ ಮೊದಲ ಸ್ಥಾನದಲ್ಲಿದೆ; ರಾಜಸ್ತಾನ 53ಶೇ., ಅಸ್ಸಾಂ 52ಶೇ., ಗುಜರಾತ್ 47ಶೇ., ಬಿಹಾರ್ 45ಶೇ. ಮತ್ತು 40ಶೇ. ಇಳಿಕೆ ಕಂಡಿವೆ. ಈ ರಾಜ್ಯಗಳಲ್ಲಿ ದಲಿತರು ಉದ್ಯೋಗ ನಿರ್ಮಾಣದಲ್ಲಿ 70ಶೇ.ಕ್ಕಿಂತಲೂ ಹೆಚ್ಚು ಇಳಿಕೆ ಅನುಭವಿಸಿದ್ದಾರೆ. ಮಹಾರಾಷ್ಟ್ರ, ತಮಿಳುನಾಡು, ಕೇರಳ, ಹರ್ಯಾಣ, ಛತ್ತೀಸ್‌ಗಡ ಮತ್ತು ಜಮ್ಮು-ಕಾಶ್ಮೀರ ಏರಿಕೆ ದಾಖಲಿಸಿದರೂ, ದಲಿತರು ಪಡೆದ ಉದ್ಯೋಗಗಳಲ್ಲಿ ಇಲ್ಲಿಯೂ ಇಳಿಕೆಯೇ.

ಯುಪಿಎ-2 ಸರಕಾರದ ಮೊದಲ ಮೂರು ವರ್ಷಗಳಲ್ಲಿಯೇ ದಲಿತರು ಪಡೆದ ಉದ್ಯೋಗಗಳ ಪ್ರಮಾಣ 86 ಕೋಟಿಯಿಂದ 47 ಕೋಟಿಗಿಳಿಯಿತು, ಅಂದರೆ 46 ಶೇ. ಇಳಿಕೆ; ಆದಿವಾಸಿಗಳಲ್ಲಿ

ಮಾಹಿತಿ ಹಕ್ಕು: ವಿಳಂಬಕ್ಕೆ ಸರಕಾರವೇ ಕಾರಣ

ರೇಗಾದಂತೆ ಮಾಹಿತಿ ಹಕ್ಕು ಕಾನೂನು ತಂದಿರುವ ಬಗ್ಗೆಯೂ ಸರಕಾರ ಅವಕಾಶ ಸಿಕ್ಕಾಗಲೆಲ್ಲ ತನ್ನ ಬೆನ್ನು ತಟ್ಟಿಕೊಳ್ಳುತ್ತಿರುತ್ತದೆ. ರೇಗಾದಂತೆ ಇದು ಕೂಡ ಯುಪಿಎ-1 ಸರಕಾರ ಎಡಪಕ್ಷಗಳ ಒತ್ತಡದಿಂದ ತಂದು ಅ ಮೇಲೆ ಅದರ ಕೀರ್ತಿಯನ್ನು ತನ್ನದಾಗಿಸಿಕೊಂಡಿರುವ ಕ್ರಮ, ಅಷ್ಟೇ ಅಲ್ಲ, ಇದನ್ನು ಕೇವಲ ಪ್ರದರ್ಶನದ ವಿಷಯವಾಗಿಯೇ ಉಳಿಸಬೇಕೆಂದಿರುವ ಕ್ರಮ. ಆದ್ದರಿಂದ ಜನತೆಗೆ ಅದರ ಪೂರ್ಣ ಪ್ರಯೋಜನ ಸಿಗದಂತೆ ಅದು ಪ್ರಯತ್ನ ನಡೆಸುತ್ತಲೇ ಇದೆ.

ಈ ಕಾನೂನಿನ ಪ್ರಕಾರ ಸರಕಾರೀ ಇಲಾಖೆಯಿಂದ ಕೇಳಿದ ಮಾಹಿತಿಯನ್ನು ಒಂದು ತಿಂಗಳೊಳಗೆ ಕೊಡಬೇಕು. ಈ ಉತ್ತರ ತೃಪ್ತಿಕರವೆನಿಸದಿದ್ದರೆ ನಂತರ ಒಂದು ತಿಂಗಳೊಳಗೆ ಅಪೀಲು ಮಾಡಬಹುದು. ಮೊದಲ ಅಪೀಲಿಗೆ ಸಿಗುವ ಉತ್ತರವೂ ತೃಪ್ತಿಕರವಾಗಿರದಿದ್ದರೆ ಕೇಂದ್ರೀಯ ಮಾಹಿತಿ ಆಯುಕ್ತರ(ಸಿಐಸಿ) ಮುಂದೆ ಮತ್ತೆ ಒಂದು ತಿಂಗಳ ಒಳಗೆ ಹೋಗಬಹುದು. ಒಟ್ಟಾರೆಯಾಗಿ ಹೆಚ್ಚೆಂದರೆ ಮೂರರಿಂದ ಆರು ತಿಂಗಳ ಒಳಗೆ ಅರ್ಜಿ ವಿಲೇವಾರಿಯಾಗಬೇಕು. ಆದರೆ ಈ ಕಾನೂನು ಬಂದು ಏಳು ವರ್ಷಗಳಲ್ಲಿ ಸಿಐಸಿ ಮುಂದೆ ಅಪೀಲುಗಳ ಮಹಾಪೂರವೇ ಇದೆಯಂತೆ. 2010ರಲ್ಲಿ ಕೇಳಿದ್ದು ಇನ್ನೂ ವಿಲೇವಾರಿಯಾಗದೆ ಉಳಿದಿವೆಯಂತೆ. ಇದಕ್ಕೆ ಕಾರಣ ಸ್ವತಃ ಸರಕಾರವೇ ಎಂದು ಸಿಐಸಿಯವರೇ ಹೇಳಿರುವುದಾಗಿ ವರದಿಯಾಗಿದೆ. ಸರಕಾರಿ ಇಲಾಖೆಗಳು ಮಾಹಿತಿ ನೀಡುವಲ್ಲಿ ವಿಳಂಬ ಮಾಡುತ್ತವೆ, ಇಲ್ಲವೆ ಅತೃಪ್ತಿಕರ ಮಾಹಿತಿ ನೀಡಿ ಸಿಐಸಿ ವರೆಗೂ ಅಪೀಲು ಹೋಗುವಂತೆ ಮಾಡುತ್ತವೆ.

ಓನಶಕ್ತಿ
ಕನ್ನಡ ವಾರಪತ್ರಿಕೆ

ಜಗದಗಲ

ಶರತ್‌ಚಂದ್ರ

ಜಮಾತ್ ನಾಯಕನಿಗೆ 1971ರ ಅಪರಾಧಗಳಿಗೆ ಜೀವಾವಧಿ ಶಿಕ್ಷೆ

ಬಾಂಗ್ಲಾದೇಶದ ಯುದ್ಧ ಅಪರಾಧಗಳ ಅಂತರ್‌ರಾಷ್ಟ್ರೀಯ ಟ್ರಿಬ್ಯುನಲ್ 1971ರ ಬಾಂಗ್ಲಾ ವಿಮೋಚನಾ ಸಮರದಲ್ಲಿ ಮಾಡಿದ 'ಮನುಕುಲದ ವಿರುದ್ಧ ಅಪರಾಧ'ಗಳಿಗೆ ಜಮಾತೇ ಇಸ್ಲಾಮಿ ನಾಯಕ ಅಬ್ದುಲ್ ಖಾದರ್ ಮೊಲ್ಲಾಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಮೊಲ್ಲಾ ಪಾಕಿಸ್ತಾನಿ ಸೈನ್ಯದ ಏಜೆಂಟನಂತೆ ವರ್ತಿಸಿ ನಾಯಕರ ಕಾರ್ಯಕರ್ತರ ಚಿತ್ರಹಿಂಸೆ ಕೊಲೆಗಳು, ನರಮೇಧಗಳು, ಸಾಮೂಹಿಕ ಅತ್ಯಾಚಾರಗಳನ್ನು ಸಂಘಟಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಎಂಬ ಆರಕ್ಕೂ ಹೆಚ್ಚು ನಿರ್ದಿಷ್ಟ ಅಪರಾಧಗಳಲ್ಲಿ ಆರು ಆಪಾದನೆಗಳ ಬಗ್ಗೆ ಟ್ರಿಬ್ಯುನಲ್ ತನಿಖೆ ನಡೆಸುತ್ತಿತ್ತು. ಅವುಗಳಲ್ಲಿ ಐದು ಆಪಾದನೆಗಳು ನಿಸ್ಸಂಶಯವಾಗಿ ಸಿದ್ಧವಾಗಿದೆ ಎಂದು ಟ್ರಿಬ್ಯುನಲ್ ಹೇಳಿದೆ.

ಕಳೆದ ತಿಂಗಳು 'ಬಚ್ಚೂ ರಜಾಕಾರ್' ಎಂದು ಕುಖ್ಯಾತನಾದ ಜಮಾತೇಯ ಸದಸ್ಯ ಅಬ್ದುಲ್ ಕಲಾಂ ಆಜಾದ್‌ಗೆ ನರಮೇಧ ಮತ್ತು 'ಮನುಕುಲದ ವಿರುದ್ಧ ಅಪರಾಧ'ಗಳಿಗೆ ನೀಡಿದ ಫಾಸಿ ಶಿಕ್ಷೆಯ ನಂತರ ಇದೇ ಟ್ರಿಬ್ಯುನಲ್ ನೀಡಿದ ಎರಡನೇ ಪ್ರಮುಖ ತೀರ್ಪು. 1971 ರ ಅಪರಾಧಗಳು ನಡೆದ ಸಮಯದಲ್ಲಿ ಜಮಾತೇ ಇಸ್ಲಾಮಿ ವಿದ್ಯಾರ್ಥಿ ಘಟಕವಾದ ಇಸ್ಲಾಮಿ ಛಾತ್ರ ಸಂಘದ ಡಾಕ್ಕಾ ವಿಶ್ವವಿದ್ಯಾಲಯದ ಘಟಕದ ಕಾರ್ಯದರ್ಶಿಯಾಗಿದ್ದ. ಅಲ್ ಬದರ್ ಎಂಬ ಕುಖ್ಯಾತ ಕ್ರಿಮಿನಲ್ ಗ್ಯಾಂಗ್ ಸಂಘಟಿಸಿದ್ದ. ಮೊಲ್ಲಾ ಡಾಕ್ಕಾ ವಿಶ್ವವಿದ್ಯಾಲಯದ ಹಲವಾರು ವಿಮೋಚನಾ ಹೋರಾಟದ ಬೆಂಬಲಿಗ ವಿದ್ಯಾರ್ಥಿಗಳ ಕೊಲೆ ಮಾಡಿದ್ದ. ಅವನ ಕೊಲೆಗಡುಕತನಕ್ಕೆ ಬಲಿಯಾದವರಲ್ಲಿ ಪ್ರಮುಖ ಕವಯಿತ್ರಿ ಮೆಹರುನ್ನಿಸಾ ಮತ್ತು ಆಕೆಯ ತಾಯಿ ಮತ್ತು ಇಬ್ಬರು ಸೋದರರು; ಪ್ರಮುಖ ಪತ್ರಕರ್ತ ಖೊಂಡೋಕರ್ ಅಬು ತಲೆಬ್ ಸೇರಿದ್ದಾರೆ. ಡಾಕ್ಕಾ ಬಳಿಯ ಮೀರ್‌ಪುರದ ಅಲುಬ್ದಿ ಎಂಬ ಹಳ್ಳಿಯಲ್ಲಿ 344 ಜನರ ನರಮೇಧ ಮಾಡಿದ ಗುಂಪಿನ ನಾಯಕ ವಹಿಸಿದ್ದ.

ಜಮಾತ್ ಈ ತೀರ್ಪು ವಿರೋಧಿಸಿ ಹಿಂಸಾತ್ಮಕ ಚಳುವಳಿ ಆರಂಭಿಸಿದೆ. ಒಂದು ದಿನ ರಾಷ್ಟ್ರೀಯ ಮುಷ್ಕರಕ್ಕೂ ಕರೆ ನೀಡಿತ್ತು. ಡಾಕ್ಕಾ ಸೇರಿದಂತೆ ದೇಶದ ಹಲವು ಕಡೆ ಬಸ್ಸು ಮತ್ತಿತರ ವಾಹನಗಳನ್ನು ಸುಡುವುದರ ಮೂಲಕ ಜಮಾತ್ ತನ್ನ ವಿರೋಧ ವ್ಯಕ್ತಪಡಿಸಿದೆ. 'ಮೀರ್‌ಪುರದ ಕಸಾಯಿ'ಗೆ ಫಾಶಿ ಶಿಕ್ಷೆ ಕೊಟ್ಟಿಲ್ಲ ಎಂದು ಆಳುವ ಆವಾಮಿ ಲೀಗ್, ಇತರ ಜಾತ್ಯತೀತ ಪಕ್ಷಗಳು, ಸ್ವಾತಂತ್ರ್ಯ ಹೋರಾಟಗಾರರು, ವಿಮೋಚನಾ ಹೋರಾಟ-ಪರ ಸಂಘಟನೆಗಳು 'ತೀವ್ರ ನಿರಾಸೆ' ವ್ಯಕ್ತಪಡಿಸಿವೆ. ಸರ್ಕಾರ ಸಹ ಮೊಲ್ಲಾಗೆ ಫಾಶಿ ಶಿಕ್ಷೆ ಕೊಡಬೇಕು ಎಂದು ಒತ್ತಾಯಿಸಿ ಸುಪ್ರೀಂ ಕೋರ್ಟಿಗೆ ಅಪೀಲು ಹೋಗುವ ಯೋಚನೆ ಮಾಡುತ್ತಿದೆ.

ಜಮಾತ್ ಯುದ್ಧ ಅಪರಾಧಗಳ ಟ್ರಿಬ್ಯುನಲ್ ನಡೆಸುತ್ತಿರುವ ತನಿಖೆ ನಿಲ್ಲಿಸಬೇಕೆಂದು ಒತ್ತಾಯಿಸಿ ಹಿಂಸಾತ್ಮಕ ಚಳುವಳಿ ನಡೆಸುತ್ತಿದೆ. ಈ ಚಳುವಳಿಯಲ್ಲಿ ಹಲವಾರು ಸಾವು ನೋವುಗಳಾಗಿವೆ. ಇತ್ತೀಚಿನ ಎರಡು ತೀರ್ಪು ಬಂದ ನಂತರ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಆದರೆ ಈ ಚಳುವಳಿಗೆ ಸರ್ಕಾ[ರ] ತಲೆಬಾಗುವುದಿಲ್ಲ ಎಂದು ಪ್ರಧಾನಿ ಶೇ[ಖ್] ಹಸೀನಾ ಸ್ಪಷ್ಟ ಪಡಿಸಿದ್ದಾರೆ. ಮೂರನೆ[ಯ] ಜಗತ್ತಿನಲ್ಲಿ ದೇಶ ವಿಭಜನೆ, ವಿಮೋಚನ[ಾ] ಹೋರಾಟದ ಸಮಯದಲ್ಲಿ ನಡೆದ ಇಂತ[ಹ] ನರಮೇಧಗಳ ವಿಚಾರಣೆ ನಡೆದದ್ದು ಅಪರೂ[ಪ]. ವಿಚಾರಣೆ ನಡೆದರೂ ಶಿಕ್ಷೆಯಾದದ್ದು ಇನ್ನೂ ಅಪರೂಪ. ಇತ್ತೀಚಿನ ದಕ್ಷಿಣ ಆಫ್ರಿಕಾ[ದ] ಕಮಿಶನ್ ಸಹ ಇಂತಹದು ಮಾಡಿಲ್ಲ. ಅಂತ[ಹ] ಹಿನ್ನೆಲೆಯಲ್ಲಿ ಬಾಂಗ್ಲಾದೇಶದ ಟ್ರಿಬ್ಯುನಲಿ[ನ] ತೀರ್ಪುಗಳು ಚಾರಿತ್ರಿಕ ತೀರ್ಪು. ಬಲಪಂಥೀಯ ಧಾರ್ಮಿಕ ಮುಖವಾಡದ ಭಯೋತ್ಪಾದಕ ಹಿಂ[ಸೆಗೆ ಕಡಿ]ವಾಣ ಹಾಕುವಲ್ಲಿ ಎಲ್ಲಾ ದೇಶಗಳಿ[ಗೆ] ಮಾದರಿಯಾಗಬಹುದಾದ್ದು.

ಸಿಐಎಯ 'ಚಿತ್ರಹಿಂಸೆಯ ಜಾಗತೀಕರಣ'

9/11 (ಸೆಪ್ಟೆಂಬರ್ 9, 2001) ಭಯೋತ್ಪಾದಕ ಕೃತ್ಯದ ಬೆನ್ನಿನಲ್ಲಿ ಅಮೆರಿಕನ್ ಸರ್ಕಾರದ ಪರವಾಗಿ ಸಿಐಎ ಆರಂಭಿಸಿದ ಕಾನೂನು-ಬಾಹಿರ ಬಂಧನ, ಚಿತ್ರಹಿಂಸೆಗಳ ದಮನ ಚಕ್ರ ಈಗಾಗಲೇ ಸಾರ್ವಜನಿಕ ಗುಟ್ಟು. ಈ ಬಗ್ಗೆ ಮಾನವ ಹಕ್ಕು ಸಂಘಟನೆಯೊಂದು ವಿವರವಾದ ವರದಿಯನ್ನು ತಯಾರಿಸಿ ಬಿಡುಗಡೆ ಮಾಡಿದೆ. ಈ ವರದಿ ಹಲವಾರು ದಾಖಲೆಗಳ ಸಮೇತ ಇದನ್ನು ಸಾರ್ವಜನಿಕರ ಮುಂದಿಟ್ಟಿದೆ. ಈ ವರದಿ ಪ್ರಕಾರ - ಬ್ರಿಟನ್, ಕೆನಡಾ, ಪಾಕಿಸ್ತಾನ, ಅಫ್ಘಾನಿಸ್ತಾನ, ಸಿರಿಯಾ ಸೇರಿದಂತೆ - 54 ದೇಶಗಳು ಸಿಐಎ ಜತೆ ಭಾಗವಹಿಸಿದ್ದವು. ಈ ವರದಿ ತಯಾರಿಸಿದ್ದು ಓಪನ್ ಜಸ್ಟೀಸ್ ಇನಿಶಿಯೇಟಿವ್ ಎಂಬ ಸಂಘಟನೆ. ಇದು ನ್ಯೂಯಾರ್ಕಿನ ಓಪನ್ ಸೊಸೈಟಿ ಫೌಂಡೇಶನಿನ ಅಂಗಸಂಸ್ಥೆ. ವರದಿ ಇದನ್ನು ಸಿಐಎಯ 'ಚಿತ್ರಹಿಂಸೆಯ ಜಾಗತೀಕರಣ' ಎಂದು ಕರೆದಿದೆ ಮತ್ತು ಸಿಐಎಯ ಈ ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗವಹಿಸಿದ 55 ಸರ್ಕಾರಗಳೂ ತಮ್ಮ ಜವಾಬ್ದಾರಿಯಿಂದ ಕಳಚಿಕೊಳ್ಳುವಂತಿಲ್ಲ ಎಂದಿದೆ. ಈ 54 ದೇಶಗಳ ಪಟ್ಟಿಯಲ್ಲಿ ಭಾರತ ಸೇರಿಲ್ಲ.

ವರದಿ 136 ಇಂತಹ ಪ್ರಕರಣಗಳ ವಿವರವಾದ ದಾಖಲೆಗಳನ್ನು ಒದಗಿಸುತ್ತದೆ. ಈ ದಾಖಲೆಗಳನ್ನು ನಂಬಲರ್ಹ ಸಾರ್ವಜನಿಕ ಮೂಲಗಳಿಂದ ಹೇಗೆ ಕಲೆ ಹಾಕಿತು ಎಂದೂ ಹೇಳಿದೆ. ಈ 136 'ಆಪಾದಿತ'ರನ್ನು ಸಿಐಎ ವಿವಿಧ ದೇಶಗಳಲ್ಲಿ ಕಾನೂನು ಬಾಹಿರವಾಗಿ ಬಂಧಿಸಿ (ಕೆಲವೊಮ್ಮೆ ಅದೇ ದೇಶದಲ್ಲಿ) ಕೆಲವೊಮ್ಮೆ ಬೇರೆ (ಅನುಕೂಲಕರ) ದೇಶದಲ್ಲಿ ಚಿತ್ರಹಿಂಸೆಗೆ ಒಳಪಡಿಸಿದೆ. ಇವರಲ್ಲಿ ಹಲವರಿಗೆ 9/11 ಕೃತ್ಯ ಜತೆ ಸಂಬಂಧವೇ ಇರಲಿಲ್ಲ. ಬರಿಯ ಸಂಶಯದ ಮೇಲಷ್ಟೇ ಬಂಧಿಸಲಾಗಿತ್ತು. ಸಿಐಎಯು ಈ ವಿಶೇಷ ಕಾರ್ಯಕ್ರಮದ ಬಲಿಪಶುಗಳು ಈ 136 ಮಾತ್ರ ಅಲ್ಲ. ಸಿಐಎ ಅಥವಾ ಅಮೆರಿಕನ್ ಸರ್ಕಾರ ಈ ಬಗ್ಗೆ ಬಹಿರಂಗ ಪಡಿಸುವವ ವರೆಗೆ ಇದು ತಿಳಿಯುವುದಿಲ್ಲ.

ವರದಿಯಲ್ಲಿ ಹಲವು ಹೃದಯವಿದ್ರಾವಕ ವಿವರಗಳನ್ನು ಹೊಂದಿದೆ. 2004ರಲ್ಲಿ ಲಿಬ್ಯನ್ ಮಹಿಳೆಯನ್ನು ಮಲೇಶ್ಯಾದ ಕೌಲಾಲಂಪುರ್ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಯಿತು. ಆಕೆಯನ್ನು ವಿಮಾನ ನಿಲ್ದಾಣದಲ್ಲೇ ಒಂದು ಕೋಣೆಯಲ್ಲಿ ಚಿತ್ರಹಿಂಸೆಗೆ ಒಳಪಡಿಸಲಾಯಿತು. ಆಕೆಯನ್ನು ಗೋಡೆಗೆ ಸರಪಣಿಗಳ ಮೂಲಕ ಐದು ದಿನಗಳ ಕಾಲ ಕಟ್ಟಿ ಹಾಕಲಾಗಿತ್ತು. ಆ ಐದು ದಿನಗಳ ಕಾಲ ಆಕೆಗೆ ಅನ್ನ-ನೀರೂ ಕೊಟ್ಟಿರಲಿಲ್ಲ. ಆಗ ಆಕೆ ನಾಲ್ಕುವರೆ ತಿಂಗಳ ಗರ್ಭಿಣಿಯಾಗಿದ್ದಳು. ಇದು ಆಕೆಯ ಗಂಡನೇ ಹೇಳಿದ ಸಾಕ್ಷ್ಯ. ಇನ್ನೊಬ್ಬ ಆಪಾದಿತನನ್ನು ಅಫ್ಘಾನಿಸ್ತಾನದಲ್ಲಿ ಬಂಧಿಸಿ ಪೋಲೆಂಡಿಗೆ ವರ್ಗಾಯಿಸಿ ಅಲ್ಲಿ ಚಿತ್ರಹಿಂಸೆಗೆ ಒಳಪಡಿಸಲಾಗಿತ್ತು. ಆತನನ್ನು 183 ಬಾರಿ 'ವಾಟರ್ ಬೋರ್ಡಿಂಗ್'ಗೆ ಗುರಿಪಡಿಸಲಾಗಿತ್ತು.

ವರದಿ ತನ್ನ ಶಿಫಾರಸುಗಳಿಗೆ ಸಿಐಎ ಇಂತಹ ಕಾನೂನುಬಾಹಿರ ಕಾರ್ಯಕ್ರಮ ನಿಲ್ಲಿಸುವಂತೆ ಮುಂದೆ ಕೈಗೊಳ್ಳದಂತೆ ಅಮೆರಿಕನ್ ಸರ್ಕಾರ ಕ್ರಮ ವಹಿಸಬೇಕೆಂದು ಕೇಳಿಕೊಂಡಿದೆ. ವಿದೇಶಗಳಿಗೆ ಕೈದಿಗಳನ್ನು ಕಳಿಸುವಾಗ ಅವರನ್ನು ಚಿತ್ರಹಿಂಸೆಗೆ ಗುರಿಪಡಿಲಾಗುವುದಿಲ್ಲ ಎಂಬ ರಾಜತಾಂತ್ರಿಕ ಭರವಸೆ ಮೇಲೆ ಆಧರಿಸುವುದನ್ನೂ ನಿಲ್ಲಿಸಬೇಕು; ಈಗಾಗಲೇ ನಡೆದಿರುವ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಮಾಹಿತಿ ಬಿಡುಗಡೆ ಮಾಡಬೇಕು; ಆಪಾದಿತರಿಂದ ಪರಿಹಾರಕ್ಕೆ ಒತ್ತಾಯ ಪರಿಶೀಲಿಸಲು ಸ್ವತಂತ್ರ ನಿಷ್ಪಕ್ಷಪಾತ ಬೋರ್ಡು ರಚಿಸಬೇಕು; ಮುಂದಿನ ಭಯೋತ್ಪಾದಕ-ವಿರೋಧಿ ಅಂತರ್‌ರಾಷ್ಟ್ರೀಯ ಕಾರ್ಯಕ್ರಮಗಳು ಮಾನವ ಹಕ್ಕುಗಳ ಉಲ್ಲಂಘನೆ ಮಾಡದಂತೆ ಕ್ರಮಗಳನ್ನು ವಹಿಸಬೇಕು-ಎಂದೂ ವರದಿ ಶಿಫಾರಸು ಮಾಡಿದೆ.

ಕವಿತೆ

ಮನೆ ಕೆಲಸದಾಕೆ

ರಾತ್ರಿಯಿಂದ ಕೂಡಿದ ಪಾತ್ರೆಗಳೊಡನೆ
ತನ್ನ ಮನದ ಆಸೆಗಳ
ಬೂದಿಹಚ್ಚಿತಿಕ್ಕುತಿಹಳೀಕೆ!
ರಾಶಿ- ರಾಶಿ ಬಟ್ಟೆಗಳ ಒಗೆಯುತ
ತನ್ನ ಬಾಳ ಕನಸುಗಳ ಆಗಸದತ್ತ
ಎಸೆಯುತಿಹಳೀಕೆ!
ಮನೆ ಯಜಮಾನರಿಗೆ ಅಡುಗೆ ಮಾಡುತ
ತನ್ನ ಮಧುರ ಭಾವಗಳ ಬಿಸಿಕೆಂಡದಲಿ
ಸುಡುತಿಹಳೀಕೆ!
ಕಸ ತುಂಬಿದ ನೆಲವ ಶುಚಿಗೊಳಿಸುತ
ತನ್ನ ಮನದ ಭಾವನೆಗಳ ಫಿನೈಲ್ನಿಂದ
ತೊಳೆಯುತಿಹಳೀಕೆ!

ಮುಂಜಾನೆಯಿಂದ ರಾತ್ರಿ ದುಡಿದರೂ
ಈಕೆಗೆ ಸಿಗುವುದು
ಮೂರೊತ್ತು ಊಟ ತಿಂಗಳಿಗೆ ಸಾವಿರ
ರೂಪಾಯಿ ಮಾತ್ರ!
ಕುಡಿದು ಬರುವ ಗಂಡನ ಕಾಟದೊಡನೆ
ಮುದಿ ತಂದೆಯ ಉಪಚಾರಕೆ ನೂರಾರು
ಮಾತ್ರ!
ಜೊತೆಗೆ ಅಳುವ ಬಿಸಿಯುಸಿರಿನ
ಮೂರು ಕಂದಮ್ಮಗಳ
ಒಡಲ ತುಂಬಿಸುವ ಭಾರ ಬೆನ್ನಿಗೆ!
ದೇಹ ನಿಶ್ಯಕ್ತಿಯಾಗಿ ಬಳಲಿದರೂ
ಸಂಸಾರಕೆ ಈಕೆಯ ಹೆಗಲೇ ಬಾಡಿಗೆ!

ಇದು ಮುಗಿಯದ ಮನೆಕೆಲಸದವಳ
ಕಥೆಯ ವ್ಯಥೆ!
ಬಾಳಲತೆಯಲಿ ಅರಳಲಿರುವ
ಮತ್ತೊಂದು ಸುಮವ
ತನ್ನೊಡಲಲಿ ಸಲುಹಲು ಹೊರಡುವಳು
ಕೆಲಸಕೆಂದು,
ಮತ್ತದೇ ಸಾವಿರ ರೂಪಾಯಿಗೆ!

– ಶ್ವೇತಾ ಕರ್ಕಿ, ಹುಬ್ಬಳ್ಳಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಲಾದ ಹೇಳಿಕೆ

ದಲಿತರ ಮೇಲಿನ ದೌರ್ಜನ್ಯ, ಪಂಕ್ತಿ ಬೇಧದ ವಿರುದ್ಧ ಫೆ.12ರಂದು ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಭಟನಾ ರ್‍ಯಾಲಿ

ದೇಶದಲ್ಲಿ ದಲಿತರ ಮೇಲೆ ಜಾತಿ ದೌರ್ಜನ್ಯ ತೀವ್ರಗೊಂಡು ಮುಂದುವರೆಯುತ್ತಲೆ ಇದೆ. ಪ್ರತಿ 02 ದಿನದಲ್ಲಿ ದಲಿತರ 03 ಕೊಲೆಗಳು ಮತ್ತು 20 ನಿಮಿಷಕ್ಕೊಂದು ಜಾತಿ ದೌರ್ಜನ್ಯಗಳು 1/2 ಗಂಟೆಗೊಮ್ಮೆ ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿವೆ. ರಾಷ್ಟ್ರೀಯ ಅಪರಾಧ ದಾಖಲಾತಿ ಕಚೇರಿ ವರದಿ ಪ್ರಕಾರ 2010ರಲ್ಲಿ 1,349 ಅತ್ಯಾಚಾರ ಪ್ರಕರಣಗಳು 2011ರಲ್ಲಿ 1,557 ಅತ್ಯಾಚಾರ ಮೊಕದ್ದಮೆಗಳು ನೊಂದಾಯಿಸಲ್ಪಟ್ಟಿವೆ. ಒಂದೇ ವರ್ಷದಲ್ಲಿ ಶೇ.15.4ರಲ್ಲಿ ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿರುವುದು ಆತಂಕಕಾರಿಯಾದ ವಿಷಯವಾಗಿದೆ.

ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಲೇ ಇದೆ. 2008ರಲ್ಲಿ 1,494, 2009ರಲ್ಲಿ 1,441, 2010ರಲ್ಲಿ 1,632 ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಕಾಲಾವಧಿಯಲ್ಲಿ ದೌರ್ಜನ್ಯಗಳು ತೀವ್ರಗೊಂಡಿರುವುದು ಆತಂಕದ ವಿಷಯವಾಗಿದೆ. ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲು ಸರ್ಕಾರ ತಕ್ಷಣ ಕ್ರಮ ಜರುಗಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಮಡೆಸ್ನಾನ-ಪಂಕ್ತಿ ಬೇಧಗಳನ್ನು ತಕ್ಷಣ ನಿಷೇಧಿಸಬೇಕು

ಉಡುಪಿಯಲ್ಲಿ ಪಂಕ್ತಿ ಭೇದ ನಡೆಯುತ್ತಿರುವುದು ನಾಗರೀಕ ಸಮಾಜ ತಲೆತಗ್ಗಿಸುವಂತಹದು. ಪೇಜಾವರ ಮಠಾದೀಶರು ಇಂತಹ ಆಚರಣೆಯನ್ನು ರದ್ದುಪಡಿಸುವ ಬದಲು ಅದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ರಾಜ್ಯದ ಮುಜರಾಯಿ ಇಲಾಖೆಯಲ್ಲಿ 168 ದೇವಸ್ಥಾನಗಳಲ್ಲಿ ಪಂಕ್ತಿಬೇಧ, 11 ದೇವಸ್ಥಾನಗಳಲ್ಲಿ ಮಡೆಸ್ನಾನದಂತಹ ಅನಾಗರೀಕ ಪದ್ದತಿಗಳ ಆಚರಣೆ ನಡೆಯುತ್ತಿದೆ. ರಾಜ್ಯ ಬಿಜೆಪಿ ಸರ್ಕಾರ ಇಂತಹ ಅನಾಗರೀಕ ಪದ್ದತಿಯನ್ನು ನಿಷೇದ ಮಾಡುತ್ತಿಲ್ಲ. ಮೌನವಹಿಸುತ್ತಿದೆ.

ಉಡುಪಿಯಲ್ಲಿ ಪಂಕ್ತಿ ಬೇಧ- ಮಡೆಸ್ನಾನದ ವಿರುದ್ಧ ಹೋರಾಟ ನಡೆಸಿದ ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರ ಮೇಲೆ ಸರ್ಕಾರ ನಡೆಸಿರುವ ಪೊಲೀಸರ ದೌರ್ಜನ್ಯವನ್ನು ಖಂಡಿಸಿದೆ. ಅಲ್ಲದೆ ಅವರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕು. ಜೊತೆಗೆ ಪಂಕ್ತಿ ಬೇಧ - ಮಡೆಸ್ನಾನ ಜಾತಿ ತಾರತಮ್ಯ ಪದ್ಧತಿಗಳು ನಿಷೇಧಿಸಬೇಕೆಂದು ಸರ್ಕಾರಕ್ಕೆ ಸಿಪಿಐ(ಎಂ) ಒತ್ತಾಯಿಸುತ್ತದೆ.

ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಹೆಚ್ಚಿಸಬೇಕು.

ವಿಶೇಷ ಘಟಕ ಯೋಜನೆ ಜಾರಿಗೆ ಕೇಂದ್ರ ರಾಜ್ಯ ಸರ್ಕಾರಗಳು ಶಾಸನ ತರಬೇಕು

ದೇಶದಲ್ಲಿ 1978ರಿಂದ ದಲಿತರ ಅಬಿವೃದ್ದಿಗಾಗಿ ಸರ್ಕಾರ ವಿಶೇಷ ಘಟಕ ಯೋಜನೆ ಮೂಲಕ ಅತಿ ಕಡಿಮೆ ಹಣ ನೀಡುತ್ತಿರುವುದರಿಂದ ದಲಿತರ ಅಭಿವೃದ್ದಿ ನಿರೀಕ್ಷಿಸಿದಷ್ಟು ಸಾಧಿಸಲು ಸಾಧ್ಯವಾಗಿಲ್ಲ. ಕೇಂದ್ರದ ಕಾಂಗ್ರೆಸ್ ಸರ್ಕಾರ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ. 2011-2012 ರಲ್ಲಿ ಕೇಂದ್ರ ಸರ್ಕಾರ 3,40,225-00 ಕೋಟಿ, ಬಜೆಟ್‌ನಲ್ಲಿ 30,551 ಕೋಟಿ ಮಾತ್ರ ಎಸ್.ಸಿ.-ಎಸ್.ಟಿ. ಯೋಜನೆ ಹಂಚಿಕೆ ಮಾಡಿದೆ. (ಅಂದಿನ ಜನಸಂಖ್ಯೆ ಶೇ.16.6) ಜನ ಸಂಖ್ಯೆಗೆ ಅನುಗುಣವಾಗಿ ಇನ್ನೂ ಸುಮಾರು 24 ಸಾವಿರ ಕೋಟಿ ಹಣ ನೀಡಬೇಕಿತ್ತು. ಅಲ್ಲದೆ ವಿಶೇಷ ಘಟಕ ಯೋಜನೆ(ಎಸ್‌ಸಿಪಿ) ಹಣವನ್ನು ಕಾಮನ್ ವೆಲ್ತ್ ಕ್ರೀಡಾ ಕೂಟಕ್ಕೆ 74.35 ಕೋಟಿ ಹಣವನ್ನು ದುರ್ಬಳಕೆ ಮಾಡಿ ದಲಿತರಿಗೆ ವಂಚನೆ ಮಾಡಿದೆ. ರಾಜ್ಯ ಬಿಜೆಪಿ ಸರ್ಕಾರ 1994-95ರಿಂದ 2008-2009ರ ವರೆಗೆ ಬಜೆಟ್‌ನಲ್ಲಿ 13,23,164.08 ಲಕ್ಷ ರೂ. ನಿಗದಿ ಪಡಿಸಿತ್ತು. ಆದರೆ 09,42,328.44 ಲಕ್ಷ ರೂ. ಮಾತ್ರ ಖರ್ಚು ಮಾಡಿತು. 3,80,835 ಲಕ್ಷ ರೂ.ಗಳನ್ನು ಖರ್ಚು ಮಾಡಲೇ ಇಲ್ಲ. ದಲಿತ ಅಭಿವೃದ್ಧಿ ಮಂತ್ರ ಜಪಿಸುವ ಕೇಂದ್ರದ ಕಾಂಗ್ರೆಸ್ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳ ಜನ ವಿರೋಧಿ ನೀತಿಯನ್ನು ಸಿಪಿಐ(ಎಂ) ಖಂಡಿಸುತ್ತದೆ.

ವಿಶೇಷ ಘಟಕ ಯೋಜನೆ(ಎಸ್‌ಸಿಪಿ) ಹಣ ದುರ್ಬಳಕೆಯಾಗುವುದನ್ನು ಕಡ್ಡಾಯವಾಗಿ ತಡೆಗಟ್ಟಲು ಆಂಧ್ರ ಸರ್ಕಾರದ ಮಾದರಿಯಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳು 'ಶಾಸನ' ಒಂದನ್ನು ಜಾರಿಗೆ ತರಬೇಕು. ದಲಿತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣವನ್ನು ಹೆಚ್ಚಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ದಲಿತರಿಗೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು

ಉದಾರೀಕರಣ, ಖಾಸಗೀಕರಣ, ಹೊರಗುತ್ತಿಗೆ ಹಿಮ್ಮೆಟ್ಟಿಸಬೇಕು

ಕೇಂದ್ರ ರಾಜ್ಯ ಸರ್ಕಾರಗಳ ಉದಾರೀಕರಣ ಖಾಸಗೀಕರಣ ನೀತಿಗಳು ಪ.ಜಾ/ ಪ.ಪಂ ಮೀಸಲಾತಿ ಸೌಲಭ್ಯಗಳನ್ನು ನುಂಗಿಹಾಕಿದೆ. ಹೊರಗುತ್ತಿಗೆ, ಗುತ್ತಿಗೆ ಆಧಾರದಲ್ಲಿ ನೇಮಕಾತಿ, ಖಾಸಗೀಕರಣಕ್ಕೆ ಮುಂದಾಗಿರುವುದರಿಂದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡುತ್ತಿಲ್ಲ. ಮೀಸಲಾತಿ ಸೌಲಭ್ಯದಿಂದ, ಸೌಲಭ್ಯಗಳಿಂದ ದಲಿತರನ್ನು ವಂಚಿಸಲಾಗುತ್ತಿದೆ.

ಕೇಂದ್ರ ಸರ್ಕಾರ ಶೇ.12 ಗ್ರೂಪ್ 'ಎ' ಹುದ್ದೆಗಳನ್ನು ಭರ್ತಿ ಮಾಡಿದೆ. ಶೇ.14ರಷ್ಟು ಗ್ರೂಪ್ 'ಬಿ' ಹುದ್ದೆಗಳನ್ನು ಭರ್ತಿ ಮಾಡಿದೆ. ಆದರೆ ಶೇ. 20 ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳನ್ನು ತುಂಬಿ ದಲಿತರ ಪರ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದೆ.

ಇತ್ತೀಚಿಗೆ 'ಇಂಡಿಯಾ ಟುಡೇ' ಮಾಡಿದ 2012ರ ಸಮೀಕ್ಷೆಯ ಪ್ರಕಾರ ಸಂವಿಧಾನದ ಅನುಚ್ಛೇಧ 335 ಮತ್ತು 338ರ ಪ್ರಕಾರ ಶೇ.18ರಷ್ಟು ಸ್ಥಾನಗಳನ್ನು ಕೇಂದ್ರ-ರಾಜ್ಯ ಸರ್ಕಾರಗಳು ತುಂಬಬೇಕು. ಲಭ್ಯವಿರುವ ಒಟ್ಟು 7,909 ಹುದ್ದೆಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ 1,763 ಹುದ್ದೆಗಳನ್ನು ತುಂಬಬೇಕಿತ್ತು. ಈ ಉನ್ನತ ಹುದ್ದೆಗಳಿಗೆ ಕೇವಲ 787 ಹುದ್ದೆಗಳನ್ನು ಮಾತ್ರ ಅಂದರೆ ಶೇ.8ರಷ್ಟು ಹುದ್ದೆಗಳನ್ನು ಭರ್ತಿ ಮಾಡಿದೆ. ಕೇಂದ್ರ-ರಾಜ್ಯ ಸರ್ಕಾರಗಳ, ರಾಷ್ಟ್ರಪತಿ ಕಛೇರಿ, ಉಪರಾಷ್ಟ್ರಪತಿ ಕಛೇರಿ, ಪ್ರಧಾನ ಮಂತ್ರಿ, ಗೃಹಮಂತ್ರಿ, ಸಚಿವಾಲಯಗಳು ಸುಪ್ರೀಂಕೋರ್ಟ್, ಹೈಕೋರ್ಟ್ ನ್ಯಾಯಾಧೀಶರುಗಳ ಹುದ್ದೆಗಳನ್ನೊಳಗೊಂಡಿದೆ.

ಮೀಸಲಾತಿಯಲ್ಲಿ ಈ ಮೇಲಿನ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಂಚಿಸಲಾಗಿದೆ. ತಕ್ಷಣ ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕು. ಮೀಸಲಾತಿಗೆ ಮಾರಕವಾಗಿರುವ ಹೊರಗುತ್ತಿಗೆ, ಗುತ್ತಿಗೆ ಪದ್ಧತಿ ನಿಲ್ಲಿಸಬೇಕು. ಖಾಸಗೀಕರಣ ನೀತಿಗಳನ್ನು ಕೈಬಿಡಬೇಕು ಅಲ್ಲದೆ ದಲಿತರಿಗೆ ಮೀಸಲಾತಿ ಸೌಲಭ್ಯಗಳನ್ನು ಖಾಸಗೀ ಕ್ಷೇತ್ರಕ್ಕೆ ವಿಸ್ತರಿಸಬೇಕು. ಎಲ್ಲಾ ದಲಿತರಿಗೂ ಉದ್ಯೋಗ ಸಿಗಬೇಕೆಂದು, ಭೂ ಹೀನ ದಲಿತರಿಗೆ ತಲಾ ಎರಡು ಎಕರೆ ಭೂಮಿಯನ್ನು ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ದೇವದಾಸಿ ಮಹಿಳೆಯರಿಗೆ ಸೌಲಭ್ಯ ಹೆಚ್ಚಿಸಿ - ವಸತಿ ನೀಡಿ

ಸಾಮಾಜಿಕವಾಗಿ ಅತ್ಯಂತ ಕ್ರೌರ್ಯ, ದಬ್ಬಾಳಿಕೆಗೆ ಒಳಗಾಗಿರುವ ದೇವದಾಸಿ ದಲಿತ ಮಹಿಳೆಯರು ನಾಗರೀಕ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಇಂತಹ ನೊಂದ ಮಹಿಳೆಯರಿಗೆ ಮಾಸಿಕ ಸಹಾಯ ಧನವನ್ನು 1,500 ರೂ.ಗಳಿಗೆ ಹೆಚ್ಚಿಸಬೇಕು ಹಾಗೂ ನಿವೇಶನ ಸಹಿತ 2 ಲಕ್ಷ ರೂಪಾಯಿ ಮೌಲ್ಯದ ಮನೆಯನ್ನು ಉಚಿತವಾಗಿ ಒದಗಿಸಬೇಕೆಂದು ಸಿಪಿಐ(ಎಂ) ಈ ಮೂಲಕ ಒತ್ತಾಯಿಸುತ್ತದೆ.

ಸ್ವಾತಂತ್ರ್ಯ ಬಂದು 65 ವರ್ಷ ಕಳೆದರೂ ಜಾತಿ ತಾರತಮ್ಯ ನಿಲ್ಲಲಿಲ್ಲ. ಅಸ್ಪೃಶ್ಯತೆ ತೊಲಗಲಿಲ್ಲ. ಜಾತಿ ನಮ್ಮನ್ನು ಕಾಡುತ್ತಿರುವ ಯಕ್ಷ ಪ್ರಶ್ನೆಯಾಗಿದೆ. ಧೀರ್ಘ ಕಾಲ ನಮ್ಮನ್ನು ಆಳುತ್ತಿರುವ ಬಂಡವಾಳಶಾಹಿ - ಭೂ ಮಾಲೀಕ ವ್ಯವಸ್ಥೆ ಜಾತಿ ಪದ್ಧತಿಯನ್ನು ತನ್ನ ಒಡಲಿನಲ್ಲಿ ಬೆಳೆಸಿಕೊಂಡು ಪೋಷಿಸುತ್ತಿವೆ. ಇಂತಹ ಎಲ್ಲಾ ನೀತಿಗಳ ವಿರುದ್ಧ ಹಾಗೂ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ದಲಿತರ ಅಭಿವೃದ್ಧಿಗೆ ಜನಸಂಖ್ಯೆ ಆಧಾರದಲ್ಲಿ ಹೆಚ್ಚಿನ ಹಣ ಒದಗಿಸಬೇಕೆಂದು ಒತ್ತಾಯಿಸಿ ಫೆಬ್ರವರಿ 12ರಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ನೇತೃತ್ವದಲ್ಲಿ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಯುಪಿಎ ದರ್ಬಾರ್.....

ಪುಟ 13 ರಿಂದ

59 ಕೋಟಿಯಿಂದ 38 ಕೋಟಿಗಿಳಿಯಿತು, ಅಂದರೆ 35ಶೇ.ಇಳಿಕೆ. ಮಹಿಳೆಯರ ಉದ್ಯೋಗ ನಿರ್ಮಾಣವೂ 136 ಕೋಟಿಯಿಂದ 108 ಕೊಟಿಗಿಳಿಯಿತು, ಅಂದರೆ 25ಶೇ. ಇಳಿಕೆ.

ಪ್ರಸಕ್ತ ವರ್ಷದಲ್ಲಿ ಫೆಬ್ರುವರಿ 2 ರ ವರೆಗೆ ಆಗಿರುವ ಉದ್ಯೋಗ ನಿರ್ಮಾಣ 146 ಕೋಟಿ ಮಾತ್ರ, ಅಂದರೆ 2011-12ರಲ್ಲಿ ಇಳಿದ ಸಂಖ್ಯೆ, ಅಂದರೆ 211 ಕೋಟಿಯನ್ನೂ ತಲುಪುವ ಸಂಭವವಿಲ್ಲ.

ಇದು ಉದ್ಯೋಗ ನಿರ್ಮಾಣದ ಸ್ಥಿತಿಯಾದರೆ, ಕೂಲಿ ನೀಡಿಕೆಯ ಸ್ಥಿತಿಯೂ ಉತ್ತಮವೇನಿಲ್ಲ. 27ಶೇ. ಮಂದಿಗೆ ಕೂಲಿ-ನೀಡಿಕೆಯಲ್ಲಿ 30 ದಿನಗಳವರೆಗಿನ ವಿಳಂಬವಾಗಿದೆ, ಇದರಿಂದಾಗಿ ಹೆಚ್ಚಿನ ದಲಿತ ಕುಟುಂಬಗಳು ಹೊಟ್ಟೆ ಹೊರೆಯಲು ಎಂದಿನಂತೆ ಕಡಿಮೆ ಕೂಲಿಯ ಕೆಲಸಗಳಿಗೆ ಹೋಗಬೇಕಾಗಿದೆ, ಇಲ್ಲವೆ ವಲಸೆ ಹೋಗಬೇಕಾಗಿದೆ.

ಈ ಅಂಕಣದಲ್ಲಿ ಈ ಹಿಂದೆ ಹಲವು ಬಾರಿ ನೆನಪಿಸಿರುವಂತೆ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದ ಯುಪಿಎ-1 ಸರಕಾರ ಎಡಪಕ್ಷಗಳ ಒತ್ತಡದಿಂದ ತಂದ ಈ ಯೋಜನೆ ಮತ್ತು ಕಾನೂನು ಈಗ ಯುಪಿಎ-2 ಸರಕಾರಕ್ಕೆ ಒಂದು ಪ್ರದರ್ಶನದ, ಪ್ರಚಾರದ ಸಂಗತಿಯಷ್ಟೇ ಆಗಿ ಉಳಿದಿದೆ; ಆದ್ದರಿಂದಲೇ ಅದರ ಜಾರಿಯಲ್ಲಿ ಪ್ರಾಮಾಣಿಕತೆಯ ಅಭಾವ ತೀವ್ರವಾಗುತ್ತಲೇ ಸಾಗಿದೆ.

JANASHAKTHI KANNADA VARA PATRIKE FEB. 17, 2013 Price : Rs. 10/- RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2013-15 Posted at MBC Bangalore GPO

ನಿರ್ಭಯವಾಗಿ ಪ್ರೇಮಿಸಿ – ಹೊಣೆಗಾರಿಕೆಯಿಂದ ವರ್ತಿಸಿ

ಫೆಬ್ರವರಿ 14 ಅನ್ನು ಪ್ರೇಮಿಗಳ ದಿನಾಚರಣೆಯನ್ನಾಗಿ ವ್ಯಾಪಕವಾಗಿ ಆಚರಿಸಲಾಗುತ್ತಿದೆ. ಆದರೆ ಸಮಾಜದ ಮೂಲಭೂತವಾದಿ ಶಕ್ತಿಗಳು ಯುವಜನರ ಈ ಪ್ರೇಮ ಅಭಿವ್ಯಕ್ತಿಗಳಿಗೆ ಅಡ್ಡಿಪಡಿಸುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚುತ್ತ ಬರುತ್ತಿದೆ. ತಾನು ನಂಬಿದ ಪ್ರಜಾಸತ್ತಾತ್ಮಕ ಮೌಲ್ಯಗಳ ಆಧಾರದಲ್ಲಿ ಯುವಜನರ ಪ್ರೇಮ ಅಭೀವ್ಯಕ್ತಿಗೆ ಪೂರಕವಾಗಿ 'ನಿರ್ಭಯವಾಗಿ ಪ್ರೇಮಿಸಿ- ಹೊಣೆಗಾರಿಕೆಯಿಂದ ಪ್ರೀತಿಸಿ: ಎಂದು ಪ್ರೇಮಿಗಳಿಗೆ ಸಾಥ್ ನೀಡುತ್ತಿರುವ ಡಿವೈಎಫ್ಐನ ನಿಲುವು ಕೂಡ ಸ್ವಾರಸ್ಯಕರವಾಗಿದೆ. ಪ್ರೇಮ ನಿವೇದನೆಗೆ ಒಂದು ನಿಗದಿತ ದಿನ, ಆಚರಣೆ ಎಲ್ಲ ಬೇಕೆ ಎನ್ನುವವರು ಅವರ ಅಭಿಪ್ರಾಯದಂತೆ ಆಚರಣೆಯಿಂದ ದೂರವುಳಿಯಲು ಯಾರೂ ಅಡ್ಡಿಪಡಿಸಲಾರರು. ಹಾಗೇ ಆಚರಣೆ ಬೇಕು ಎನ್ನುವವರಿಗೆ ಆಚರಣೆಯಲ್ಲಿ ತೊಡಗುವ ಹಕ್ಕು ಇದೆ. ಅದಕ್ಕೆ ಯಾರೂ ಅಡ್ಡಿ ಪಡಿಸಬಾರದಲ್ಲವೇ ?

ಫೆಬ್ರವರಿ 14 ರಂದು ಪ್ರೇಮಿಗಳ ದಿನಾಚರಣೆಯ ದಿವಸ ದೇಶಾದ್ಯಂತ ಕೋಟಿಗಟ್ಟಲೇ ಯುವಕ□ಯುವತಿಯರು ಪರಸ್ಪರ ಸಂತೋಷದಿಂದ ತಮ್ಮ ಮನಸ್ಸಿನ ಭಾವನೆಗಳನ್ನು ಹಲವಾರು ರೂಪಗಳಲ್ಲಿ ಹಂಚಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಯುವಕ-ಯುವತಿಯರು ತಮ್ಮ ಬಾಳ ಸಂಗಾತಿಯನ್ನು. ತಾವೇ ಹುಡುಕಿಕೊಳ್ಳುವುದಕ್ಕೆ, ತಾವೇ ಆರಿಸಿಕೊಳ್ಳುವುದಕ್ಕೆ ಈ ರೀತಿಯ ಪ್ರೇಮ ನಿವೇದನೆಗಳ ಭಾವನೆಯ ಹಂಚಿಕೆಗಳು ಬಹಳಷ್ಟು ಉಪಯುಕ್ತವಾಗುತ್ತವೆ.

ಮಾನವರಾಗೋಣ ನಾವು ಮಾನವರಾಗೋಣ ಎಂಬ ಆಶಯದಂತೆ ಜಾತಿ-ಮತ-ಧರ್ಮಗಳ ಮತ್ತು ಅಂತಸ್ತಿನ ಬೇಧಗಳಿಲ್ಲದೆ ಮಾನವೀಯತೆಯನ್ನು ಮೆರೆಯುವಂತಹ ಒಂದು ಉತ್ಕಟವಾದ ಮತ್ತು ಉತ್ಕರ್ಷವಾದ ಭಾವನೆಯೆ ಪ್ರೇಮ. ಈ ಪ್ರೇಮದ ಮುಂದೆ ಎಲ್ಲಾ ರೀತಿಯ ಬೇಧ-ಭಾವಗಳು ಕಡಿದು ಬಿದ್ದು ಹೋಗುತ್ತದೆ. ಇದು ತಂದೆ ತಾಯಿಗಳು ಅಥವಾ ಇತರರು ಆರಿಸಿದ ಯುವಕ ಯುವತಿಗೆ ಕಣ್ಣುಮುಚ್ಚಿಕೊಂಡು ಗಂಟು ಬಿಗಿಯಬೇಕಾದ ಅಥವಾ ಬಿಗಿಸುವ ಸಂಪ್ರದಾಯಕ ವಿವಾಹ ಪದ್ಧತಿಗೆ ಹೊಡೆತ ನೀಡುತ್ತದೆ.

ಜೀವನ ಪರ್ಯಂತ ಒಟ್ಟಿಗೆ ಬಾಳಬೇಕಾದಂತಹ ವ್ಯಕ್ತಿಗಳ ನಡುವೆ ಭಾವನೆಗಳ ಸಾಮರಸ್ಯ, ಚಿಂತನೆಯ ಮೇಳವ ಮತ್ತು ಗೆಳೆತನದ ಸಾಂಗತ್ಯ ಇವು ಅವರ ಜೀವನವನ್ನು ಉತ್ತಮಗೊಳಿಸುತ್ತದೆಂಬ ಭಾವನೆ ಯುವಜನರದ್ದು. ಇದಕ್ಕೆ ಭಾರತಿಯ ಸಂಸ್ಕೃತಿಯ ಹೆಸರಿನಲ್ಲಿ ಈ ಸಂತೋಷಕ್ಕೆ ಕಲ್ಲು ಹಾಕುವ ಕೆಲಸವನ್ನು ಶ್ರೀರಾಮಸೇನೆಯಂತಹ ಕೋಮುವಾದಿ ಸಂಘಟನೆಗಳು ಮಾಡುತ್ತವೆ. ಇದನ್ನು ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿ ದೃಢವಾಗಿ ವಿರೋಧಿಸುತ್ತದೆ.

ಸಂಘಟನೆಯ ಹೆಸರೇ ಹೇಳುವಂತೆ, ಇದು 'ಪ್ರಜಾಸತ್ತಾತ್ಮಕ ಯುವಜನ ಸಂಘಟನೆ'. ಪ್ರೇಮ ಎನ್ನುವುದು ತಮ್ಮ ಬಾಳಿನ ಸಂಗಾತಿಯನ್ನು ತಾವೇ ಆರಿಸಿಕೊಳ್ಳುವುದು ಯುವಜನರ ಪ್ರಜಾಸತ್ತಾತ್ಮಕ ಹಕ್ಕು.

ಪ್ರೇಮ ಎಂಬುದು ಭಾರತೀಯ ಸಂಸ್ಕೃತಿಗೆ ವಿರುದ್ಧ ಎನ್ನುವಂತೆ ವರ್ತಿಸುತ್ತಿರುವ ಕೋಮುವಾದಿ ಮೂಲಭೂತವಾದಿ



ಸಾಹಿತಿ ಯು.ಆರ್.ಅನಂತಮೂರ್ತಿ ಮತ್ತು ಎಸ್ತರ್

ಸಂಘಟನೆಗಳು ತಮಗೆ ಭಾರತೀಯ ಪರಂಪರೆಯ ಬಗ್ಗೆ ಏನೂ ಜ್ಞಾನವಿಲ್ಲವೆಂಬುದನ್ನು ತೋರಿಸಿಕೊಳ್ಳುತ್ತಿದ್ದಾರೆ. ಭಾರತ ಎಂಬ ಹೆಸರಿನ ಮೂಲದಲ್ಲಿಯೇ ದುಶ್ಯಂತ-ಶಾಂಕುತಲೆಯರ ಪ್ರೇಮ ಕತೆಯ ಹಿನ್ನೆಲೆ ಅಡಗಿದೆ. ಅವರ ಮಗ ಭರತನಿಂದಾಗಿಯೇ ಭಾರತ ಎಂಬ ಹೆಸರಾಗಿರುವುದು ಎಂಬ ದಟ್ಟವಾದ ನಂಬಿಕೆ ಇದೆ. ಇದಕ್ಕೆ ಮಾಹಿತಿಗಾಗಿ ಬೇಕಾದರೆ ಪ್ರಮೋದ್ ಮುತಾಲಿಕ್ ಮೊದಲಾದವರು 'ಮಹಾ ಭಾರತದ ಶಾಂಕುತಲ ಉಪಖ್ಯಾನ' ಅಥವಾ ಕಾಳಿದಾಸನ ಪ್ರಸಿದ್ಧ ನಾಟಕ "ಅಭಿಜ್ಞಾನ ಶಾಂಕುತಲಾ" ನಾಟಕವನ್ನು ಓದಿಕೊಳ್ಳಲಿ.

ಜೊತೆಗೆ ಶಿವ ಪಾರ್ವತಿಯರ ವಿವಾಹ ಪ್ರೇಮ ವಿವಾಹವೋ ಅಥವಾ ಸಾಂಪ್ರದಾಯಕ ವಿವಾಹವೋ ಎಂಬುದು ಈ ಮೂಲಭೂತವಾದಿಗಳಿಗೆ ಗೊತ್ತೇ? ನಳ – ದಮಯಂತಿ, ಕೃಷ್ಣ – ರುಕ್ಮಣಿ, ಅರ್ಜುನ-ಸುಭದ್ರೆ ಇಂತಹ ಅಪರಿಮಿತ ಪ್ರೇಮ ವಿವಾಹದ ಉದಾಹರಣೆಗಳು ನಮ್ಮ ವೇದಗಳಲ್ಲಿ □ ಮಹಾ ಕಾವ್ಯಗಳಲ್ಲಿ ಅಡಗಿವೆ. ರಾಧ-ಕೃಷ್ಣರ ಪ್ರೇಮದ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ.

ಇನ್ನು ನಮ್ಮ ಜನತೆ ಆರಾಧಿಸುವ ದೈವಗಳಲ್ಲಿ ಪ್ರೇಮಿಸದ ದೇವತೆಗಳು ಯಾರಾದರೂ ಇದ್ದಾರ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇವರಲ್ಲಿ ಬಹಳಷ್ಟು ಜನ ಜಾತಿ ಮತ್ತು ಧರ್ಮವನ್ನು ಮೀರಿದ ಪ್ರೇಮವನ್ನು ಮೆರೆದವರೇ ಆಗಿದ್ದಾರೆ. ಚುಂಚನಗಿರಿಯ ಭೈರವ-ಕುರಬತಿ ಮಾಳವ್ವ, ನಂಜನ ಗೂಡಿನ ನಂಜುಂಡ-ಮೈಸೂರಿನ ಚಾಮುಂಡಿ, ಬಿಳಿಗಿರಿರಂಗ-ಕುಸುಮಾಲೆ, ಮೇಲುಕೋಟೆಯ ಚಲುವರಾಯ ಸ್ವಾಮಿ-ಅಲ್ಲದೇ ದೆಹಲಿಯ ಬಾದಷಹನ್ ಮಗಳು ಬೀಬಿ ನಾಚ್ಚಯಾರ್.......

ಹೀಗೆ ಎಷ್ಟೋ ದೇವತೆಗಳ ಪ್ರೇಮ ಪ್ರಸಂಗಗಳ ಉದಾಹರಣೆಗಳನ್ನು ಕೊಡಬಹುದು. ಇವರಲ್ಲಿ ತಮ್ಮ ಪ್ರೇಮಿಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಅವರ ಮನೆಗೆ ಹೋಗಿ ಅವರ ಜಾತಿಯ ಎಲ್ಲಾ ಕಸುಬುಗಳನ್ನು ಕಲಿತು ಕೆಲಸ ಮಾಡಿ ಸೈ ಎನ್ನಿಸಿಕೊಂಡ ಕತೆಗಳು ನಮ್ಮ ಜಾನಪದಗಳಲ್ಲಿ ಸ್ವಾರಸ್ಯಕರವಾಗಿ ವರ್ಣಿಸಲ್ಪಟ್ಟಿವೆ.



ಪ್ರೇಮ ಕವಿ ಬೇಂದ್ರೆ

ಇನ್ನೂ ಆಧುನಿಕ ಕಾಲದಲ್ಲಿ ನಮ್ಮ ಅನೇಕ ಸಾಹಿತಿಗಳು, ಸಮಾಜ ಗೌರವಿಸುವ ಪ್ರಸಿದ್ಧ ವ್ಯಕ್ತಿಗಳು, ಅವರ ಪ್ರೇಮ ಪ್ರಸಂಗಗಳ ಬಗ್ಗೆ ಹೆಚ್ಚು ಉದಾಹರಣೆಗಳನ್ನು ಕೊಡುವ ಅವಶ್ಯಕತೆ ಇಲ್ಲ.

ಪ್ರೇಮ ಗಂಡು-ಹೆಣ್ಣಿನ ನಡುವೆಯ ಗೆಳೆತನದ ಮೂಲಕ ಸಾಮಾನತೆಯನ್ನು ಸಾಧಿಸುವ ಸಾಧನವಾಗಿದೆ. ಹಾಗೆಯೇ ಜಾತಿ-ಮತ-ಧರ್ಮವನ್ನು ಮೀರಿದ ಮಾನವ ಸಮಾನತೆಯುನ್ನು ಕೂಡ ಸಾರುತ್ತದೆ. ವಿವಿಧ ಜಾತಿ ಮತ್ತು ಧರ್ಮಗಳ ವ್ಯಕ್ತಿಗಳ ನಡುವಿನ ಪ್ರೇಮ ಮತ್ತು ವಿವಾಹ ಜಾತಿ ರಹಿತ ವಿವಾಹಗಳಾಗಬೇಕೇ ಹೊರತು ಗಂಡಿನ ಜಾತಿಗೆ ಸೇರಿಹೋಗುವ ವಿವಾಹಗಳಾಗ ಬಾರದೆಂದು ಡಿವೈಎಫ್ಐ ಪ್ರತಿಪಾದಿಸುತ್ತದೆ. ಆದ್ದರಿಂದ ಡಿವೈಎಫ್ಐ ಪ್ರೇಮದ ಭಾವನೆಗಳ ಅಭಿವ್ಯಕ್ತಿ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತದೆ-ಬೆಂಬಲಿಸುತ್ತದೆ. ರಾಜ್ಯದಾದ್ಯಂತ ಡಿವೈಎಫ್ಐನ ಘಟಕಗಳು-ಕಾರ್ಯಕರ್ತರು ನೂರಾರು ಪ್ರೇಮ ವಿವಾಹಗಳಿಗೆ ಬೆಂಬಲವಾಗಿದ್ದಾರೆ.

ಆದರೆ ಅದೇ ಸಂದರ್ಭದಲ್ಲಿ ಡಿವೈಎಫ್ಐ ಹೊಣೆಗಾರಿಕೆಯ ಪ್ರೇಮವನ್ನು ಪ್ರತಿಪಾದಿಸುತ್ತದೆ. ಪ್ರೇಮವನ್ನು ವಂಚನೆಯ ಸಾಧನವಾಗಿ, ಯುವತಿಯರ ಮೇಲಿನ ದೌರ್ಜನ್ಯದ ಸಾಧನವಾಗಿ ದುರ್ಬಳಕೆಯಾಗುವುದನ್ನು ಡಿವೈಎಫ್ಐ ವಿರೋಧಿಸುತ್ತದೆ. ಅಂತಹ ಎಲ್ಲಾ ಪ್ರಸಂಗಗಳಲ್ಲಿ ಅನ್ಯಾಯಕ್ಕೊಳಗಾದ ಯುವತಿಯರ ಪರವಾಗಿ ದೃಢವಾಗಿ ನಿಲ್ಲುತ್ತದೆ. ಇದೇ ಸಮಯದಲ್ಲಿ ಯುವತಿಯರು ಪ್ರೇಮಿಸಿ ಕೈಕೊಡುತ್ತಾರೆಂಬ ಭಾವನೆ ಬಲವಾಗಿದೆ. ಇದಕ್ಕೆ ಒಂದು ಉದಾ: ಕೊಲವರಿ ಕೊಲವರಿ ಡಿ ಹಾಡಿನಲ್ಲಿ ಇಂತಹ ಭಾವನೆ ಹುದುಗಿದೆ. ಈ ಸಂದರ್ಭದಲ್ಲಿ ನಮ್ಮ ಸಾಮಾಜದಲ್ಲಿ ಯುವತಿಯರ ಮೇಲೆ ಅವರ ತಂದೆ-ತಾಯಿಯಂದಿರ ಹಿಡಿತ, ಸಂಬಂಧಿಕರ ಮತ್ತು ಸಾಮಾಜದ ಒತ್ತಡ, ಅವರ ಮೇಲೆ ಹೊರಿಸಲಾಗಿರುವ ಅಪವಾದಗಳು. ಇವೆಲ್ಲಾ ಯುವತಿಯರ ನೈಜ ಭಾವನೆಗಳಿಗೆ ಅನುಗುಣವಾಗಿ ವರ್ತಿಸುವುದಕ್ಕೆ ಬಹಳಷ್ಟು ಬಾರಿ ತಡೆಯೊಡ್ಡುತ್ತವೆ ಎಂಬುದನ್ನು ಯುವಕರು ಮತ್ತು ಸಾಮಾಜ ಅರ್ಥ ಮಾಡಿಕೊಳ್ಳಬೇಕು. ಹಾಗೆಯೇ ನಿರುದ್ಯೋಗ – ಅರೆಉದ್ಯೋಗ, ಬಡತನಗಳು ಹೆಚ್ಚುತ್ತಾ ಪ್ರೇಮದ ಹಾದಿಯಲ್ಲಿ ಅಡೆ-ತಡೆಗಳನ್ನುಂಟು ಮಾಡುತ್ತಿವೆ ಎಂಬುದನ್ನು ಯುವಜನತೆ ಮನಗಾಣಬೇಕು.

ಈ ಎಲ್ಲಾ ಹಿನ್ನಲೆಯಲ್ಲಿ ಡಿ.ವೈ.ಎಫ್.ಐ 'ನಿರ್ಭಯವಾಗಿ ಪ್ರೇಮಿಸಿ, ಹೊಣೆಗಾರಿಕೆಯಿಂದ ಪ್ರೀತಿಸಿ' ಎಂದು ಯುವಜನತೆಗೆ ಕರೆ ನೀಡುತ್ತದೆ. ಇಂತಹ ಪ್ರೇಮಿಗಳು ಎದುರಿಸುವ ಕಷ್ಟ-ಸಂಕಷ್ಟಗಳ ಸಂದರ್ಭದಲ್ಲಿ ಡಿವೈಎಫ್ಐ ಯುವಜನ ಸಂಘಟನೆ ಸಾಥ್ ನೀಡುತ್ತದೆ.

ರಾಜ್ಯಾದಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಡಿವೈಎಫ್ಐ ಹೊಣೆಗಾರಿಕೆಯಿಂದ ಪ್ರೀತಿಸುವ ಪ್ರೇಮಿಗಳ ಜೊತೆಯಲ್ಲಿ ಫೆಬ್ರವರಿ 14 ರಂದು ಪ್ರೇಮಿಗಳ ದಿನಾಚರಣೆಯನ್ನು ಆಚರಿಸುತ್ತದೆ. ಈ ಮಾನವೀಯ ಪ್ರೇಮವನ್ನು ಎತ್ತಿ ಹಿಡಿಯಲು ಯುವಜನತೆ ಹಾಗೂ ಪ್ರಜಾತ್ತಾತ್ಮಕ ಹಕ್ಕುಗಳಿಗೆ ಬದ್ಧವಾಗಿರುವ ಎಲ್ಲರೂ ಬೆಂಬಲಿಸಬೇಕೆಂದು ಡಿವೈಎಫ್ಐ ಮನವಿ ಮಾಡುತ್ತದೆ.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE No 12,18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, ...
Editor : S.Y.GURUSHANTH